

# ಇಂದಿನ

# ರಂಗ ಕಲಾವಿದರು

## ಭಾಗ - 3

ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು

# ಇಂದಿನ ರಂಗ ಕಲಾವಿದರು

ಪ್ರಧಾನ ಸಂಪಾದಕರು : ಸಿ.ಜಿ. ಕೃಷ್ಣಸ್ವಾಮಿ

ಸಂಪಾದಕರು : ಎಂ. ಮಾಲತಿ

ಸಂಪಾದಕ ಸಮಿತಿ : ಕೆ. ವಿ. ನಾಗರಾಜಮೂರ್ತಿ
ಬಿ. ಟಿ. ಮುನಿರಾಜಯ್ಯ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

**INDINA RANGA KALAVIDARU** : A Collection of Bio-data fo the Kannada Theatre Personalities. Edited by the Smt. M. Malathi
Published by Registrar, Karnataka Nataka Academy, Bangalore,
Printed at Siddheswara Printers, Bangalore - 560 053

© ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

ಪ್ರಕಾಶಕರು : ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು ೫೬೦ ೦೦೨

ಮುಖ ಪುಟ : ಪ. ಸ. ಕುಮಾರ್
ಪ್ರತಿಗಳು : 1000
ಪುಟಗಳು : 114 + 8
ಬೆಲೆ ರೂ. : 70-00
ಮುದ್ರಕರು : ಸಿದ್ದೇಶ್ವರ ಪ್ರಿಂಟರ್ಸ್, ಬೆಂಗಳೂರು - ೫೬೦ ೦೫೩

# ಅಧ್ಯಕ್ಷರ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ಕರ್ನಾಟಕ ರಂಗ ಕಲಾವಿದರ ಬಗ್ಗೆ ಅಧಿಕೃತವಾದ ಮಾಹಿತಿಯನ್ನು ಒದಗಿಸುವ ಒಂದು ಪರಿಚಯ ಗ್ರಂಥವನ್ನು ಇಂದಿನ ರಂಗಕಲಾವಿದರು ಎಂಬ ಹೆಸರಿನಿಂದ 1986ರಲ್ಲಿ ಮೊದಲು ಪ್ರಕಟಿಸಿತ್ತು. ಆರಂಭದ ಆ ಪ್ರಯತ್ನದ ನಂತರ ಸಾಧ್ಯವಿದ್ದಷ್ಟು ಯತ್ನಿಸಿ, ಐದು ವರ್ಷಗಳಿಗೆ ಒಮ್ಮೆಯಂತೆ ಇಂಥ ಪರಿಚಯ ಪುಸ್ತಕವನ್ನು ಪ್ರಕಟಿಸುವ, ಪರಂಪರೆಯನ್ನು ಉಳಿಸಿಕೊಳ್ಳುವ ಇಚ್ಛೆ ನಮಗಿತ್ತು. ಆದರೆ ಕೆಲವು ಇತಿ ಮಿತಿಗಳಿಂದಾಗಿ ಆ ಕೆಲಸ ಸಾಧ್ಯವಾಗಲಿಲ್ಲ.

ಸುಮಾರು 14 ವರ್ಷಗಳ ನಂತರ ಅಂಥ ಪ್ರಯತ್ನದ ಮುಂದುವರಿಕೆಯಾಗಿ ೨೦೦೦ರಲ್ಲಿ ಇಂದಿನ ರಂಗಕಲಾವಿದರು ಭಾಗ - 2 ಹೊರತರಲಾಯಿತು. ಅದರ ಮುಂದುವರಿಕೆಯಾಗಿ ಕೇವಲ ಒಂದೇ ವರ್ಷದ ಅಂತರದಲ್ಲಿ ಇಂದಿನ ರಂಗಕಲಾವಿದರು ಭಾಗ - 3 ಹೊರಬರುತ್ತಿದೆ. ನಿಜಕ್ಕೂ ಇದೊಂದು ಹೆಮ್ಮೆಯ ವಿಷಯ.

ಈ ಸಂಪುಟದ ಸಂಪಾದನೆಯ ಹೊಣೆ ಹೊತ್ತು ಕೆಲಸ ನಿರ್ವಹಿಸಿರುವ ಪ್ರಕಾಶನ ಸಮಿತಿಯು ಸದಸ್ಯರಿಗೆ, ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿರುವ ಎಂ. ಮಾಲತಿ ಹಾಗೂ ಸಂಪಾದಕ ಸಮಿತಿಯು ಸದಸ್ಯರಾದ ಕೆ. ವಿ. ನಾಗರಾಜಮೂರ್ತಿ, ಬಿ. ಟಿ. ಮುನಿರಾಜಯ್ಯ ಅವರಿಗೆ ಅಕಾಡೆಮಿಯ ವಂದನೆಗಳು. ಈ ಪುಸ್ತಕವನ್ನು ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿ ಮುದ್ರಿಸಿದ ಸಿದ್ದೇಶ್ವರ ಪ್ರಿಂಟರ್ಸ್‌ರವರಿಗೂ, ನೆರವಾದ ಎಲ್ಲರಿಗೂ ವಂದನೆಗಳು.

ಸಿ. ಜಿ. ಕೃಷ್ಣಸ್ವಾಮಿ

ಪ್ರಕಟಣಾ ಸಮಿತಿಯ ಸದಸ್ಯರು :

ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

ಕೆ. ವಿ. ನಾಗರಾಜಮೂರ್ತಿ

ಹೂಲಿಶೇಖರ್

ಟಿ. ರಘು

## ಅರಿಕೆ

ಕರ್ನಾಟಕ ನಾಟಕ ಅಕಾಡೆಮಿಯು ಈಗಾಗಲೇ ರಂಗಕಲಾವಿದರ ಪರಿಚಯದ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಈಗ ಮೂರನೇ ಸಂಪುಟವನ್ನು ಹೊರ ತರಲಾಗುತ್ತಿದೆ.

ಕರ್ನಾಟಕದಲ್ಲಿ ಇಂದು ಕ್ರಿಯಾಶೀಲರಾಗಿರುವ ರಂಗಕರ್ಮಿಗಳ ಸಂಖ್ಯೆ ಅಪಾರವಾಗಿದೆ. ಆದರೆ ಅವರ ವಿವರಗಳನ್ನು ಸಂಗ್ರಹಿಸುವುದು ಬಹಳ ಪ್ರಯಾಸದ ಕೆಲಸವಾಗಿದೆ. ಎರಡನೇ ಸಂಪುಟ ಸಿದ್ಧಪಡಿಸುವ ಸಂದರ್ಭದಲ್ಲಿ ಎಲ್ಲ ಪ್ರಮುಖ ಕಲಾವಿದರನ್ನು ಪರಿಚಯಿಸಬೇಕೆಂಬ ಹಂಬಲ ನಮ್ಮದಾಗಿತ್ತು. ಆದರೆ ಕಾರಣಾಂತರಗಳಿಂದ ಅವರ ವಿವರಗಳು ಸಕಾಲಕ್ಕೆ ದೊರೆಯದೆ ಉಳಿದ ಕಲಾವಿದರ ಪರಿಚಯವನ್ನು ಪ್ರಕಟಿಸುವ ದೃಷ್ಟಿಯಿಂದ ಈ ಕೃತಿಯನ್ನು ಸಿದ್ಧಪಡಿಸಿದ್ದೇವೆ. ಇದೂ ಪರಿಪೂರ್ಣವೆಂದೇನೂ ಅಲ್ಲ. ಅಕಾಡೆಮಿ ಹಲವಾರು ಬಾರಿ ಪತ್ರಿಕೆಗಳ ಮೂಲಕ ಹಾಗೂ ವೈಯಕ್ತಿಕವಾಗಿ ವಿನಂತಿಸಿಕೊಂಡ ನಂತರ ನಮಗೆ ಲಭ್ಯವಾದ ಕಲಾವಿದರ ಪರಿಚಯವನ್ನು ಇಲ್ಲಿ ಕೊಡಲು ಸಾಧ್ಯವಾಗಿದೆ. ಬಹುಶಃ ಮುಂದೆಯೂ ಇದೇ ಪರಂಪರೆ ಮುಂದುವರೆದು ಆಯಾ ಕಾಲಕ್ಕೆ ಕ್ರಿಯಾಶೀಲ ಕಲಾವಿದರ ಮಾಹಿತಿ ಪ್ರಕಟಿಸುವ ಕೆಲಸ ಸಾಧ್ಯವಾಗುವುದಾದರೆ ಇದೊಂದು ಮಹತ್ವದ ಕಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಮಗೆ ಅಭಿಮಾನ ಪೂರ್ವಕವಾಗಿ ಮಾಹಿತಿ ಒದಗಿಸಿಕೊಟ್ಟ ಸದಸ್ಯರಿಗೆ ಹಾಗೂ ನಮಗೆ ಬೆಂಬಲವಾಗಿ ನಿಂತ ಪತ್ರಿಕೆಗಳಿಗೆ ಮತ್ತು ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಅಕಾಡೆಮಿ ಸಿಬ್ಬಂದಿಗೆ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಸಿದ್ದೇಶ್ವರ ಪ್ರಿಂಟರ್ಸ್ ಮಾಲಿಕರಾದ ಎಸ್. ಶಿವದೇವ್ ಅವರಿಗೂ ನಮ್ಮ ಕೃತಜ್ಞತೆಗಳು.

ಹಣಕಾಸಿನ ಅಭಾವವಿದ್ದಾಗಲೂ ಇಂತಹ ಒಂದು ಶಾಶ್ವತ ಕಾರ್ಯ ಆಗಲೇಬೇಕೆಂಬ ಒತ್ತಾಸೆಯಿಂದ ಈ ಕೃತಿಯ ಪ್ರಕಟಣೆಗೆ ಪ್ರೇರಕರಾಗಿರುವ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಸಿ. ಜಿ. ಕೃಷ್ಣಸ್ವಾಮಿ ಅವರಿಗೆ ಎಂದೆಂದಿಗೂ ಆಭಾರಿಯಾಗಿದ್ದೇವೆ.

6-6-2001

ಎಂ. ಮಾಲತಿ
ಕೆ. ವಿ. ನಾಗರಾಜಮೂರ್ತಿ
ಬಿ. ಟಿ. ಮುನಿರಾಜಯ್ಯ



ಅಂಕಯ್ಯ ಎಚ್.ಎಂ.

ಜನನ : 16-02-1954


ವಿಳಾಸ :
ನಂ. 4, 1ನೇ ಕ್ರಾಸ್, ಎ.ಜಿ. ಬ್ಲಾಕ್
ಎನ್.ಆರ್. ಮೊಹಲ್ಲ
ಮೈಸೂರು - 7

ಮೈಸೂರಿನ ಗಾಂಧಿನಗರದ ದಿವಂಗತ ಮಾದಯ್ಯ ಶ್ರೀಮತಿ ವೆಂಕಟಮ್ಮನವರ ಪುತ್ರರಾದ ಎಚ್.ಎಂ. ಅಂಕಯ್ಯನವರು ಹಲವಾರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಕಳೆದ ಒಂದೂವರೆ ದಶಕಗಳಿಂದಲೂ ನಟಿಸುತ್ತಾ ಬಂದಿದ್ದಾರೆ.

ಕುರುಕ್ಷೇತ್ರ, ಸತ್ಯಮೂರ್ತಿ, ದ್ರೌಪದಿ ಸತ್ವಪರೀಕ್ಷೆ, ದಾನಶೂರ ಕರ್ಣ, ತಾರಕಾಸುರನ ವಧೆ, ತ್ರಿಜನ್ಮ ಮೋಕ್ಷ ಇತ್ಯಾದಿ ಪೌರಾಣಿಕ ನಾಟಕಗಳಲ್ಲಿ ಶಕುನಿ, ಸತ್ಯಮೂರ್ತಿ, ನಾರದ, ಕರ್ಣ, ತಾರಕಾಸುರ ಪಾತ್ರಗಳಲ್ಲಿ ಅಭಿನಯಿಸಿರುವ ಅಂಕಯ್ಯನವರು, ಐತಿಹಾಸಿಕ ನಾಟಕಗಳಾದ ಎಚ್ಚಮನಾಯಕದ ತಿರುವೆಂಕಟ ಹಾಗೂ ಸಂಗೊಳ್ಳಿ ರಾಯಣ್ಣ ನಾಟಕದ ರಾಯಣ್ಣ ಪಾತ್ರಗಳಲ್ಲೂ ಅಭಿನಯಿಸಿದ್ದಾರೆ. ಹಾಗೂ ಸಾಮಾಜಿಕ ನಾಟಕಗಳಾದ ಹಾದಿ ತಪ್ಪಿದ ಹೆಣ್ಣು, ಸಮ್ಮಿಲನ ನಾಟಕಗಳಲ್ಲಿ ನಾಯಕನ ಪಾತ್ರ ನಿರ್ವಹಿಸಿದ್ದಾರೆ.

ಸರ್ಕಾರಿ ನೌಕರರೂ ಆಗಿರುವ ಅಂಕಯ್ಯ ರಂಗಭೂಮಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಆದಿಶೇಷ, ಬಸವರಾಜ್, ಸಿ. ರಾಮಕೃಷ್ಣ, ರಾಜಣ್ಣ, ಜವರಪ್ಪ ಮುಂತಾದ ಹಿರಿಯರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ಕಲೆಗೆ ಅಡಿಪಾಯವಾದ ರಂಗ ಭೂಮಿಯಲ್ಲಿ ಮತ್ತೊಂದಿಷ್ಟು ಸಾಧಿಸುವ ಹಂಬಲದಲ್ಲಿದ್ದಾರೆ.



**ಗೊರೂರು ಅನಂತರಾಜು**

ಜನನ : 13-5-1961


*ವಿಳಾಸ :*

ಕೆನರಾ ಬ್ಯಾಂಕ್ ರಸ್ತೆ
ಗೊರೂರು - 573 120
ಹಾಸನ ಜಿಲ್ಲೆ

ಬಹುಮುಖ ಪ್ರತಿಭೆಯ ಗೊರೂರು ಅನಂತರಾಜು ಕಳೆದ ಹದಿನೈದು ವರ್ಷಗಳಿಂದ ರಂಗಭೂಮಿಯಲ್ಲಿ ನಟರಾಗಿ, ನಿರ್ದೇಶಕರಾಗಿ, ನಾಟಕಕಾರರಾಗಿ ಸದಾ ಚಟುವಟಿಕೆಯಿಂದಿದ್ದಾರೆ.

'ಕನ್ನಡ ಕಲಾ ಸಾಹಿತ್ಯ ವೇದಿಕೆ' ಎಂಬ ತಂಡವನ್ನು ಹುಟ್ಟುಹಾಕಿ, ತಂಡದ ವತಿಯಿಂದ ನೂರಾರು ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಹುಡುಕಾಟ, ಕನಸಿನವರು, ಮನುಷ್ಯರು, ವ್ಯವಸ್ಥೆ, ವೀರಪ್ಪನ್ ಭೂತ, ಗೋಳೂರಿನ ತೋಳ, ವರದಕ್ಷಿಣೆ ಭೂತ, ಆತ್ಮಯಾವ ಕುಲ ಜೀವ ಯಾವ ಕುಲ, ಸರ್ವೇ ಜನೋ ಸುಖಿನೋ ಭವಂತು ಮುಂತಾದ ವೈಚಾರಿಕ ನೆಲೆಯ ನಾಟಕಗಳನ್ನು ರಂಗಕ್ಕೆ ಅಳವಡಿಸಿದ್ದಾರೆ. ನಟಿಸಿ, ನಿರ್ದೇಶಿಸಿದ್ದಾರೆ. ವ್ಯವಸ್ಥೆ, ವೀರಪ್ಪನ್ ಭೂತ, ಗೋಳೂರಿನ ತೋಳ ಸ್ವಯಂರಚಿತ ನಾಟಕಗಳು.

ವಾರ್ತಾ ಮತ್ತು ಪ್ರಚಾರ ಇಲಾಖೆಯ ಸರ್ಕಾರದ ಸಾಧನಗಳ ಪ್ರಚಾರಾತ್ಮಕ ನಾಟಕಗಳಲ್ಲಿ, ಸಾಕ್ಷರತಾ ಆಂದೋಲನದ ಪ್ರಚಾರಾತ್ಮಕ ಬೀದಿ ನಾಟಕಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ. ಹೊಸ ಹೊಸ ನಟರನ್ನು ರಂಗಕ್ಕೆ ಪರಿಚಯಿಸುವ ಕಾರ್ಯದಲ್ಲಿ ಹೆಚ್ಚು ಉತ್ಸುಕರಾಗಿದ್ದಾರೆ ಅನಂತರಾಜು.



## ಬಿ. ಎನ್. ಅಮರ್‌ನಾಥ್

ಜನನ : 20-7-1957

ವಿಳಾಸ:

J 51,
ಆಂಜನೇಯ ಬ್ಲಾಕ್
ಶೇಷಾದ್ರಿಪುರಂ
ಬೆಂಗಳೂರು - 20

ಬಿ. ಎನ್. ಅಮರ್‌ನಾಥ್ 20-7-1957ರಂದು ತಂದೆ ಬಿ. ಆರ್. ನಾರಾಯಣಸ್ವಾಮಿ ನಾಯ್ಡು ಹಾಗೂ ತಾಯಿ ಜಯಮ್ಮನವರ ಪುತ್ರನಾಗಿ ಬೆಂಗಳೂರಿನಲ್ಲಿ ಜನಿಸಿದರು.

1984ರಲ್ಲಿ ಬಿ.ಇ.ಎಂ.ಎಲ್. ಕಾರ್ಖಾನೆಗೆ ಉದ್ಯೋಗಿಯಾಗಿ ಸೇರಿದರು. 1987ರಲ್ಲಿ ಕಾರ್ಖಾನೆಯ ಅಂತರ ವಿಭಾಗ ನಾಟಕ ಸ್ಪರ್ಧೆಯಲ್ಲಿ ಪ್ರಯೋಗಗೊಂಡ 'ಮೀನಿನ ಹೆಜ್ಜೆ' ನಾಟಕದ ಮೂಲಕ ರಂಗ ಪ್ರವೇಶ ಮಾಡಿದರು. ಅಲ್ಲಿಂದ ನಿರಂತರವಾಗಿ ಪೌರಾಣಿಕ, ಸಾಮಾಜಿಕ, ಜಾನಪದ, ಅಸಂಗತ ನಾಟಕಗಳಲ್ಲಿ ನಟನಾಗಿ ಪಾಲ್ಗೊಳ್ಳುತ್ತಾ ಬಂದರು. ದಂಗೆಯ ಮುಂಚಿನ ದಿನಗಳು, ತುಘಲಕ್, ಬಸ್ ಕಂಡಕ್ಟರ್, ರಾವಿ ನದಿಯ ದಂಡೆಯಲ್ಲಿ, ನಟ, ಸಂಗೊಳ್ಳಿ ರಾಯಣ್ಣ, ದ್ರೋಣಿ, ರಾಜ ಕೆಂಪೇಗೌಡ, ವಿಜಯನಗರ ರತ್ನ ಸಿಂಹಾಸನ, ಪ್ರಚಂಡ ರಾವಣ, ಭೂಕೈಲಾಸ, ಚಂಡ ಶಾಸನ, ಭಕ್ತಪ್ರಹ್ಲಾದ, ಆದಿ ಚುಂಚನಗಿರಿ ಮಹಾತ್ಮೆ, ಶ್ರೀ ಕೃಷ್ಣ ಸಂಧಾನ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ನಾಟಕಗಳೊಂದಿಗೆ ಕಿರುತೆರೆಯ ಧಾರಾವಾಹಿಗಳಲ್ಲೂ ನಟನಾಗಿ ಕಾಣಿಸಿಕೊಂಡಿದ್ದಾರೆ. ಪ್ರಸ್ತುತ ಬಿ.ಇ.ಎಂ.ಎಲ್. ಲಲಿತ ಕಲಾ ಸಂಘದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



**ಕೆ.ಎನ್. ಅಶ್ವತ್ಥ್ ನಾರಾಯಣರಾವ್**

ಜನನ : 1952

*ವಿಳಾಸ :*
ಮುಖ್ಯ ಕಾರ್ಯದರ್ಶಿಯವರ ಕಛೇರಿ
ವಿಧಾನಸೌಧ
ಬೆಂಗಳೂರು - 1

ತಮ್ಮ 12ನೆಯ ವಯಸ್ಸಿನಲ್ಲಿಯೇ ಮುಖಕ್ಕೆ ಬಣ್ಣ ಬಳಿದು ಹಳ್ಳಿಯ ಜನರ ಬಾಯಿಯಲ್ಲಿ ಭಲೇ ಎನಿಸಿಕೊಂಡವರು ಅಶ್ವತ್ಥ ನಾರಾಯಣರಾವ್. ಕಳೆದ 36 ವರ್ಷಗಳಲ್ಲಿ ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ವಿಧಾನ ಸೌಧದಲ್ಲಿ ಮುಖ್ಯ ಕಾರ್ಯದರ್ಶಿಗಳ ಕಛೇರಿಯಲ್ಲಿ ನೌಕರರಾಗಿರುವ ಇವರಿಗೆ ರಂಗಕಲೆ ಒಂದು ಪ್ರವೃತ್ತಿ.

1978 ರಿಂದ ಸಚಿವಾಲಯ ಸಾಂಸ್ಕೃತಿಕ ಸಂಘವನ್ನು ನಡೆಸಿಕೊಂಡು ಬರುತ್ತಿರುವ ಅಶ್ವಥ್ 1984 ರಲ್ಲಿ ಜೈಪುರದಲ್ಲಿ ನಡೆದ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ, ಪ್ರಭಾಕರ ಬಾಬು ನಿರ್ದೇಶನದ 'ರಂಗೀದೊಡ್ಡಿ ರಾಮಣ್ಣ' ನಾಟಕದ 'ಮಾಚ'ನ ಪಾತ್ರಕ್ಕೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಗಳಿಸಿದ್ದಾರೆ. ತ್ರಿಪುರಾದ ಅಗರ್ತಾಲದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ 'ಸಂಕ್ರಾಂತಿ' ನಾಟಕದಲ್ಲಿನ ಪಾತ್ರಕ್ಕೂ ಉತ್ತಮ ಪೋಷಕ ನಟನಾಗಿ ಪ್ರಶಸ್ತಿ ಗಳಿಸಿದ್ದಾರೆ. ಇತ್ತೀಚಿನ ಭೂಪಾಲ್‌ನಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ಸಚಿವಾಲಯ ಸಮಗ್ರ ಪ್ರಶಸ್ತಿ ಗಳಿಕೆಗೂ ಇವರ ಕೊಡುಗೆ ಅಪಾರ. 'ಪ್ರಸಾಧನ' ಕಲೆಯನ್ನೂ ಕರಗತ ಮಾಡಿಕೊಂಡಿರು ಅಶ್ವತ್ಥ ನಾರಾಯಣರಾವ್ ತಮ್ಮ ಪ್ರಸಾಧನಕ್ಕೂ ಪ್ರಶಸ್ತಿ ಪಡೆದಿದ್ದಾರೆ.

'ಪಾಂಚಜನ್ಯ' ಎಂಬ ಹವ್ಯಾಸಿ ತಂಡವನ್ನು ಸ್ಥಾಪಿಸಿರುವಲ್ಲದೆ ನಗರದ ಸ್ನೇಹ ಸಂಪದ, ಸೂತ್ರಧಾರ, ರಂಗಸಂಪದ, ಸಚಿವಾಲಯ ಕ್ಲಬ್, ಹೊಸಬರು, ಗಾನವಿನೋದಿನಿ, ಹೆಚ್.ಆರ್.ಎಂ. ಹವ್ಯಾಸಿ ತಂಡಗಳಲ್ಲಿ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಶ್ರೀರಂಗರ 'ಏನು ಬೇಡಲಿ ನಿನ್ನ ಬಳಿ ಬಂದು', ಶಾ. ಬಾಲುರಾವ್‌ರವರ 'ಬೆಕ್ಕು ಬಾವಿ', ಕೈಲಾಸಂರವರ 'ಹುತ್ತದಲ್ಲಿ ಹುತ್ತ', ಮುಂತಾದ ನಾಟಕಗಳಲ್ಲಿ ತಮ್ಮ ಪ್ರತಿಭೆಯನ್ನು ಹೊರಚೆಲ್ಲಿದ್ದಾರೆ.



## ಎಂ. ಸಿ. ಆನಂದ್

ಜನನ : 1954


ಬೆಂಗಳೂರಿನ ಹವ್ಯಾಸಿ ರಂಗಭೂಮಿ ಕಂಡ ಬಹುಮುಖ ಪ್ರತಿಭೆ ಎಂ. ಸಿ. ಆನಂದ್. ನಟರಾಗಿ, ನಿರ್ದೇಶಕರಾಗಿ, ವಿನ್ಯಾಸಕಾರರಾಗಿ ಪರಿಣತರಾದ ಆನಂದ್ 44ಕ್ಕೂ ಮಿಕ್ಕಿದ ನಾಟಕಗಳಲ್ಲಿ ವೈವಿಧ್ಯತೆ ಮೆರೆದವರು. ವೃತ್ತಿಯಿಂದ ಭಾರತ ಸರಕಾರದ ರಕ್ಷಣಾ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಮೂರು ದಶಕಗಳ ರಂಗ ಸಂಪರ್ಕದಲ್ಲಿ ಕನ್ನಡ ರಂಗಭೂಮಿಯ ಮೈಲಿಗಲ್ಲುಗಳೆಂದು ಗುರುತಿಸುವ ಹತ್ತು ಹಲವಾರು ನಾಟಕಗಳಲ್ಲಿ ಆನಂದ್ ಪಾಲ್ಗೊಂಡಿದ್ದಾರೆ. ಪ್ರೊ|| ಬಿ. ಸಿ., ರಾಮಮೂರ್ತಿ, ಪ್ರಸನ್ನ, ಟಿ.ಎನ್. ನರಸಿಂಹನ್, ಆರ್.ನಾಗೇಶ್, ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಎಸ್. ಮಾಲತಿ, ಅಬ್ಬೂರು ಜಯತೀರ್ಥರಂಥ ರಂಗ ಮಹನೀಯರ ನಿರ್ದೇಶನದ ನಾಟಕಗಳಲ್ಲಿ ನಟನಾಗಿ ಅಭಿನಯ ಪಾಠ ಕಲಿತಿದ್ದಾರೆ. ತುಘಲಕ್, ಈಡಿಪಸ್, ಸಂಕ್ರಾಂತಿ, ಮಾರೀಚನ ಬಂಧುಗಳು, ಹುತ್ತವ ಬಡಿದರೆ, ತಾಯಿ, ಕತ್ತಲೆ ದಾರಿ ದೂರ, ಕುರಿ, ಗೆಲಿಲಿಯೊ, ಸಂಸ್ಕಾರ, ದಂಗೆಯ ಮುಂಚಿನ ದಿನಗಳು, ಕ್ರಾಂತಿ ಇವರು ನಟಿಸಿರುವ ಕೆಲವು ಮುಖ್ಯ ನಾಟಕಗಳು.

ಕೇವಲ ಅಭಿನಯವೊಂದೇ ಇವರ ಅಭಿರುಚಿಯಲ್ಲ. ನಿರ್ದೇಶನ, ಕಲಾ ವಿನ್ಯಾಸ, ಪ್ರಚಾರ ವಿನ್ಯಾಸ ಭಿತ್ತಿಪತ್ರ ರಚನೆಯಲ್ಲೂ ವಿಶೇಷ ಆಸಕ್ತಿ ಇವರಿಗಿದೆ. ಇದಕ್ಕೆ ಪೂರಕವಾಗಿ ಚಿತ್ರಕಲೆಯಲ್ಲಿ ತರಬೇತಿಯನ್ನು ಪಡೆದಿದ್ದಾರೆ. ಬಾದಲ್ ಸರ್ಕಾರ್ ನಿರ್ದೇಶನದ ರಂಗ ತರಬೇತಿ ಶಿಬಿರ ಸೇರಿದಂತೆ, ಹಲವಾರು ಶಿಬಿರಗಳಲ್ಲಿ ಅಭ್ಯರ್ಥಿಯಾಗಿ ಪಾಲ್ಗೊಂಡು ರಂಗಭೂಮಿಯ ನಾನಾ ಮುಖಗಳ ಪರಿಚಯ ಪಡೆದಿದ್ದಾರೆ. ಅಶ್ವಮೇಧ, ಆ ಮನಿ, ಲಕ್ಷಾಪತಿ ರಾಜನ ಕಥೆ, ಚಿತ್ರಪಟ ರಾಮಾಯಣ, ಸಂಧ್ಯಾ ಛಾಯಾ, ವಾಸಂತಿ, ತದ್ರೂಪಿ ನಾಟಕಗಳಿಗೆ ರಂಗವಿನ್ಯಾಸ ಮಾಡಿದ್ದಾರೆ.

ಚಲನಚಿತ್ರಗಳಲ್ಲೂ ನಟಿಸಿರುವ ಆನಂದ್ ದೂರದರ್ಶನ ಧಾರಾವಾಹಿಗಳಿಗೆ ನಿರ್ದೇಶಕನಾಗಿ, ನಿರ್ಮಾಪಕನಾಗಿ ಅಭಿನಯವನ್ನೂ ನೀಡಿದ್ದಾರೆ.

ಹವ್ಯಾಸಿ ರಂಗಭೂಮಿಯ ಪ್ರಬುದ್ಧ ಕಲಾವಿದರೂ, ಉತ್ತಮ ರಂಗವಿನ್ಯಾಸಕರೂ ಆಗಿರುವ ಆನಂದ್ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿಯು 1999ನೇ ಸಾಲಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.



ಆರ್.ಎನ್. ಈಶ್ವರಪ್ಪ
ಜನನ : 5-2-1943

ವಿಳಾಸ :
ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರು
ಶ್ರೀ ಸತ್ಯನಾರಾಯಣ ಕೃಪ
5ನೇ ಮುಖ್ಯರಸ್ತೆ, ರವೀಂದ್ರನಗರ
ಶಿವಮೊಗ್ಗ - 577 201

ಶಿವಮೊಗ್ಗ ತಾಲ್ಲೂಕಿನ ರಾಗಿ ಹೊಸಹಳ್ಳಿ ಗ್ರಾಮದಲ್ಲಿ ದಿ|| ಮರುಳಪ್ಪ ಹಾಗೂ ದಿ|| ಸಿದ್ದಮ್ಮನವರ ಪುತ್ರರಾಗಿ ಈಶ್ವರಪ್ಪ ಜನಿಸಿದರು. ಎಳೆಯ ವಯಸ್ಸಿನಲ್ಲೇ ನಾಟಕದ ಅಭಿರುಚಿ ಹೊಂದಿ, ಶಾಲಾ ವಾರ್ಷಿಕೋತ್ಸವದಲ್ಲಿ 'ಚತುರ ಕೃಷ್ಣ' ನಾಟಕದ 'ಮಕರಂದ'ನ ಅಭಿನಯಕ್ಕೆ ಎಲ್ಲರ ಮೆಚ್ಚುಗೆ ಗಳಿಸಿದರು. ಮುಂದೆ ಗೆಳೆಯರೊಂದಿಗೆ 'ನವರತ್ನ ನಾಟಕ ಸಂಘ' ಸ್ಥಾಪಿಸಿ, ವೀರ ಬ್ರಹ್ಮಚಾರಿ, ಕೊಟ್ರಲ್ಲಾ ಕೈನಾ, ಗಂಡಸ್ಕತ್ರಿ, ಕಿತ್ತೂರು ಚೆನ್ನಮ್ಮ, ವಿಗಡ ವಿಕ್ರಮರಾಯ, ಕೀರ್ತಿಶೇಷ, ಟಾರ್ಜಾನ್, ಕಂಬಳಿ ನಾಗಿದೇವ, ಶಿವಯೋಗಿ ಸಿದ್ಧರಾಮ, ಧರ್ಮಪುರಿಯ ಶ್ವೇತವೃತ್ತ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿ ತಮ್ಮ ಪ್ರತಿಭೆ ತೋರಿದ್ದಾರೆ.

ನಾಟಕ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದಿರುವ ಈಶ್ವರಪ್ಪ 1981ರಲ್ಲಿ ಕೇಂದ್ರ ಸರ್ಕಾರದ ವಿದ್ಯಾ ಇಲಾಖೆಯ ಅಂಗವಾದ ಸಂಸ್ಕೃತಿ, ಸಾಹಿತ್ಯ, ಕಲೆ, ಸಂಪನ್ಮೂಲ ಕೇಂದ್ರದ ವತಿಯಿಂದ ನವದೆಹಲಿಯಲ್ಲಿ ನಡೆದ ತರಬೇತಿ ಕೇಂದ್ರದಲ್ಲಿ ಅಭ್ಯರ್ಥಿಯಾಗಿ ಪಾಲ್ಗೊಂಡಿದ್ದಾರೆ.

'ಶ್ರೀ ಶಿವಕುಮಾರ ಹವ್ಯಾಸಿ ಕಲಾ ಸಂಘ'ದ ವತಿಯಿಂದ ಹೊಸ ನಾಟಕಗಳನ್ನು ಪ್ರಯೋಗಿಸುವುದರ ಮೂಲಕ ರಾಜ್ಯಾದ್ಯಂತ ಹೊಸ ಅಲೆಯ ಬಿರುಗಾಳಿಯನ್ನು ಎಬ್ಬಿಸಿದರು.

1995 ರಲ್ಲಿ ಶಿಕಾರಿಪುರದ 'ಶ್ರೀ ಶಿವನಪಾದ ಕ್ಷೇತ್ರದ' ಶ್ರೀ ಶಿವಾನಂದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಸ ನಿರ್ವಹಿಸಿ, ಜಿಲ್ಲಾ ಪಂಚಾಯ್ತಿಯ ಸಹಾಯದೊಂದಿಗೆ ಎರಡು ರಂಗಮಂದಿರಗಳನ್ನು ಕಟ್ಟಿಸಿ, ರಂಗ ಚಟುವಟಿಕೆಗಳ ರೂವಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ಕಲಾಪ್ರದರ್ಶನ ನೀಡಿದ್ದಾರೆ. 1988ರಲ್ಲಿ ಕೇಂದ್ರ ಸರ್ಕಾರದ ಸಿ.ಸಿ.ಆರ್.ಟಿ. ಪ್ರಶಸ್ತಿ ಹಾಗೂ 1992ರಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿಯನ್ನು ಪಡೆದಿದ್ದಾರೆ. 1999ರ ರಾಷ್ಟ್ರಪ್ರಶಸ್ತಿಗೂ ಪಾತ್ರರಾಗಿದ್ದಾರೆ.

58ರ ಹರೆಯದ ಈಶ್ವರಪ್ಪ ನಿರಂತರವಾಗಿ ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸುಕೊಳ್ಳುವ ಹಂಬಲ ಹೊಂದಿದ್ದಾರೆ.



**ಕೆ. ಎಸ್. ಎಂ. ಉಮಾಪತಿ**
ಜನನ : 1-1-1955

ಕೆಂದಗಲ್ ಸಾರಂಗ ಮಠದ ಉಮಾಪತಿ ಸಂಗೀತದ ವಂಶ ಪರಂಪರೆಯಿಂದ ಬಂದವರು. ತಂದೆ ಅಜ್ಜಯ್ಯ ಹಾಗೂ ತಾಯಿ ಸಾವಿತ್ರಮ್ಮ ಸಂಗೀತ ಕಲಾವಿದರು.

ತಬಲ ನುಡಿಸುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಉಮಾಪತಿ ಬಿಡುವಿನ ವೇಳೆಯಲ್ಲಿ ತಬಲ ನುಡಿಸುವುದನ್ನು ಹವ್ಯಾಸವಾಗಿ ರೂಢಿಸಿಕೊಂಡರು. ಪಿ.ಎಂ. ಚೆನ್ನವೀರಸ್ವಾಮಿ, ದೇವೇಂದ್ರರೆಡ್ಡಿ, ತಬಲ ವಿರೂಪಾಕ್ಷರಾವ್ ಅವರುಗಳ ಪ್ರೇರಣೆಯಿಂದಾಗಿ ಉತ್ತಮ ತಬಲ ಪಟುವಾಗಿ ರೂಪುಗೊಂಡು ಹವ್ಯಾಸಿ ನಾಟಕಗಳಿಗೆ ತಬಲ ನುಡಿಸತೊಡಗಿದರು. ಬಳ್ಳಾರಿ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶದ ನಾಟಕಗಳಿಗೆ ತಬಲ ನುಡಿಸಿರುವರು.

ತಬಲ ಪಟುವಾದ ಉಮಾಪತಿ ನಟನೆಯಲ್ಲೂ ಒಂದೆಜ್ಜೆ ಮುಂದಿಟ್ಟಿದ್ದಾರೆ. 'ರಕ್ತರಾತ್ರಿ' ನಾಟಕದಲ್ಲಿ ಮಲ್ಲಮ್ಮ ಮಲ್ಲಿಕಾರ್ಜುನ ಹಾಗೂ ಭರಮರೆಡ್ಡಿ, 'ಬಸವೇಶ್ವರ' ನಾಟಕದಲ್ಲಿ ಹರಳಯ್ಯಾ ಇವರ ಅಭಿನಯದ ಕೆಲವು ನಾಟಕಗಳು, ನಾಟಕ ನಿರ್ದೇಶಿಸಿದ ಅನುಭವವೂ ಉಮಾಪತಿಗಿದೆ.



## ಉಮೇಶ್ ಹೆಚ್. ಎಸ್.

ಜನನ : 15-1-1954

*ವಿಳಾಸ :*

ಸಂಚಾಲಕರು, 'ಕಲಾಪ್ರಿಯ' ರಂಗತಂಡ, ಮೈಸೂರು

'ಹವ್ಯಾಸಿ ರಂಗಭೂಮಿ ಜಡ್ಡುಗಟ್ಟಿದೆ. ಹೊಸ ಗಾಳಿ ಬೀಸಬೇಕಾಗಿದೆ' ಎಂಬ ಚಿಂತನೆಯನ್ನು ಮುಂದಿಡುತ್ತಾರೆ, ಕನ್ನಡ ಹವ್ಯಾಸಿ ರಂಗಭೂಮಿಯ ನಿರ್ದೇಶಕರಲ್ಲಿ ಮಹತ್ವದ ಸ್ಥಾನ ಗಳಿಸಿರುವ ಉಮೇಶ್ ಅವರು. ಉಮೇಶ್ ಅವರ ತಂದೆ ಹೆಚ್.ಸಿ. ಸಿದ್ದಗಂಗಯ್ಯ, ತಾಯಿ ಸುಬ್ಬಮ್ಮನವರು. ತಂದೆ ವೃತ್ತಿಯಿಂದ ಸಂಸ್ಕೃತ ವಿದ್ವಾನ್ ಆಗಿದ್ದವರು.

ಶಾಲಾವಾರ್ಷಿಕೋತ್ಸವವೊಂದರಲ್ಲಿ ಪ್ರದರ್ಶನಗೊಂಡ ನಾಟಕದಿಂದ ಇವರ ರಂಗಪ್ರವೇಶ ಆಯಿತು. ಮುಂದೆ ಯುವರಾಜ ಕಾಲೇಜಿನಲ್ಲಿ ಇವರಲ್ಲಡಗಿದ ಪ್ರತಿಭೆ ಟಿಸಿಲೊಡೆಯಿತು. ಹಿರಿಯ ರಂಗಕರ್ಮಿ ಆರ್. ಗುರುರಾಜರಾವ್ ಅವರೊಡನೆ ಕೆಲಸ ನಿರ್ವಹಿಸುವ ಅವಕಾಶ ದೊರೆಯಿತು. ಕೈಲಾಸಂರ 'ಪೋಲಿಕಿಟ್ಟಿ', ಎ.ಎನ್. ಮೂರ್ತಿರಾಯರ 'ಆಷಾಢಭೂತಿ' ನಾಟಕಗಳಲ್ಲಿ ಪಾತ್ರವಹಿಸಿ ಮೆಚ್ಚುಗೆಗಳಿಸಿದರು. ಹೀಗೆ ಮುಂದುವರಿದು 'ಚೇತನ ಕನ್ನಡ ಸಂಘ'ದ ಚಟುವಟಿಕೆಗಳಲ್ಲಿ ತೊಡಗಿಕೊಂಡರು.

ದಿ| ವಿಶ್ವನಾಥ ಮಿರ್ಲೆಯವರ ಮಾರ್ಗದರ್ಶನ ಇಲ್ಲಿಂದ ದೊರೆಯಿತು. 'ಚೇತನ ಕನ್ನಡ ಸಂಘ'ಕ್ಕಾಗಿ ಮೊಟ್ಟಮೊದಲ ಬಾರಿಗೆ 'ಜೋಕೆ ತಪ್ಪಿದ ಬಳಿಕ' ನಾಟಕ ನಿರ್ದೇಶಿಸಿ, ಯಶಸ್ವಿ ನಿರ್ದೇಶಕರೆನಿಸಿಕೊಂಡರು.

ರಂಗಪ್ರಿಯ ಗೆಳೆಯರೊಂದಿಗೆ 'ಕಲಾಪ್ರಿಯ' ಎಂಬ ಹವ್ಯಾಸಿ ತಂಡವನ್ನು ಹುಟ್ಟುಹಾಕಿದರು. ಈ ತಂಡಕ್ಕಾಗಿ ಆವರ್ತನ, ಗೋಕರ್ಣದ ಗೌಡಸಾನಿ, ಈಡಿಪಸ್, ಅಶ್ವತ್ಥಾಮನ್, ರೋಡು, ಗಾಡೋ, ಓ ದೇವರೇ ಇವರನ್ನು ಕ್ಷಮಿಸು, ದಾಮು ಲಗ್ನ, ಮುಂತಾದ ನಾಟಕಗಳ ನಿರ್ದೇಶನ ಮಾಡಿದರು. ಇವರ ಕಲಾನೈಪುಣ್ಯತೆಯನ್ನು ಗಮನಿಸಿ ಇತರ ತಂಡಗಳು ಕೈಬೀಸಿ ಕರೆದವು. 'ಅಭಿವ್ಯಕ್ತಿ' ತಂಡಕ್ಕೆ ಕೊಡೆಗಳು, ಟಿಂಗರ ಬುಡ್ಡಣ್ಣ ನಾಟಕಗಳನ್ನು, ಕದಂಬ ರಂಗವೇದಿಕೆಗಾಗಿ ದುರ್ಗಾಸ್ತಮಾನ, ಬಿರುಗಾಳಿ, ಮಹಾರಾತ್ರಿ, ಪರಿಮಳದವರು, ಇದಿ ಮುಂಡೆಮಗಳು, ಕೇಳು ಜನಮೇಜಯ, ಅಹೋಬ್ಲು ಅವಾಂತರ ಮತ್ತು ಇತ್ತೀಚೆಗೆ ರವೀಂದ್ರನಾಥ್ ಠಾಕೂರರ 'ರಕ್ತ ಕಣಗಿಲೆ' ನಾಟಕಗಳನ್ನು ನಿರ್ದೇಶಿಸಿದ್ದಾರೆ. ಮೈಸೂರಿನ 'ಸಮುದಾಯ'ಕ್ಕಾಗಿ ಅಂತೆಂಬರ ಗಂಡ, 'ಸಿಂಕರ' ಕ್ಕಾಗಿ ದಿಂಡಿ, 'ಸಮಷ್ಟಿ'ಗಾಗಿ ನಟ ಸಾಮ್ರಾಟ, 'ಮಿತ್ರಕೂಟ'ಕ್ಕಾಗಿ ಜವರಾಯ ಬಂದಾಗ' ಇವರಿಂದ ನಿರ್ದೇಶಿಸಲ್ಪಟ್ಟ ಇತರ ನಾಟಕಗಳು. ಹವ್ಯಾಸಿ ತಂಡಗಳಿಗಲ್ಲದೆ ಕಾಲೇಜು ಕಲಾತಂಡಗಳಿಗಾಗಿ ನಿರ್ದೇಶಿಸಿದ ಮಾನಿಷಾದ, ಸಾಕ್ಷಿಕಲ್ಲು, ಸ್ವಾಮಿಗಳ ಸೋಮವಾರ, ಅಲೆಗಳಲ್ಲಿ ರಾಜಹಂಸಗಳು ಇವರ ನಿರ್ದೇಶನದ ಪಟ್ಟಿಗೆ ಸೇರಿವೆ. ಮೈಸೂರು ಹವ್ಯಾಸಿ ರಂಗಭೂಮಿಯ ಇತಿಹಾಸದಲ್ಲಿ ಇವರು ನಿರ್ದೇಶಿಸಿದಷ್ಟು ನಾಟಕಗಳನ್ನು ಬೇರಾರು ನಿರ್ದೇಶಿಸಿಲ್ಲ ಎಂಬುದು ಇವರ ಹೆಗ್ಗಳಿಕೆ.

ಮೈಸೂರಿನ ಶಾರದಾ ವಿಲಾಸ ಬಿ.ಎಡ್. ಕಾಲೇಜಿನಲ್ಲಿ ರೀಡರ್ ಆಗಿ ಕೆಲಸ ನಿರ್ವಹಿಸುತ್ತಿರುವ ಉಮೇಶ್ ನಟನೆ, ನಿರ್ದೇಶನದೊಂದಿಗೆ, ಕನ್ನಡಕ್ಕೆ ಅನೇಕ ನಾಟಕಗಳನ್ನು ಅನುವಾದಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಮಾರ್ಟಿನ್ ಕ್ರೌಲಿಯ 'Boys in the Band' (ಹುಚ್ಚು ಹುಡುಗರು), ಶೇಕ್ಸ್‌ಪಿಯರನ 'Merry wives of Windsor' (ಚೆಲ್ಲಾಟದ ಚದುರೆಯರು), ಅಮೆರಿಕನ್ ನಾಟಕ 'City Lights' (ಕುರುಡು ಕತ್ತಲೆ), ಅಲ್ಲದೆ ಕಾದಂಬರಿಗಳನ್ನು ನಾಟಕಕ್ಕೆ ರೂಪಾಂತರಿಸಿದ್ದಾರೆ. ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ರಂಗಗೀತೆಗಳನ್ನು ಬರೆದಿದ್ದಾರೆ. ತಮ್ಮಲ್ಲಿಯ ಪ್ರತಿಭೆಯನ್ನು, ಅನುಭವಗಳನ್ನು ಬಳಸಿ ಹಲವಾರು ರಂಗ ಶಿಬಿರಗಳನ್ನು ಏರ್ಪಡಿಸಿದ್ದಾರೆ. ರಂಗ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಂಡಿದ್ದಾರೆ, ಬೀದಿನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ.

ಇಂಥ ಸಮರ್ಥ, ಯಶಸ್ವಿ, ಸೃಜನಾತ್ಮಕ ನಿರ್ದೇಶಕರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿಯು 1994ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ ಹಲವಾರು ಸಂಘ, ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದೆ.



**ಋತ್ವಿಕ್ ಸಿಂಹ**

ಜನನ : 21-2-1974

*ವಿಳಾಸ :*

ನಂ. 190, 100 ಅಡಿ ರಿಂಗ್ ರಸ್ತೆ
ಬನಶಂಕರಿ 3ನೇ ಹಂತ
ಬೆಂಗಳೂರು - 85

ಬೆಂಗಳೂರಿನ ಖ್ಯಾತ ಹವ್ಯಾಸಿ ರಂಗ ತಂಡ 'ನಟರಂಗ'ದ ವತಿಯಿಂದ 1977ರಲ್ಲಿ ಪ್ರಯೋಗಗೊಂಡ 'ಕಕೇಷಿಯನ್ ಚಾಕ್ ಸರ್ಕಲ್' ನಾಟಕದಲ್ಲಿ ಬಾಲ ನಟನಾಗಿ ಕಾಣಿಸಿಕೊಂಡವರು ಋತ್ವಿಕ್ ಸಿಂಹ.

ಮುಂದೆ ಅದೇ ತಂಡದಲ್ಲಿ ನಟನಾಗಿ ಸೇರ್ಪಡೆ ಹೊಂದಿ ತುಘಲಕ್, ಮೃಚ್ಛಕಟಿಕ, ಯಯಾತಿ, ತಲೆದಂಡ, ಕಾಕನಕೋಟೆ, ಗುಣಮುಖ, ಸಿರಿಸಂಪಿಗೆ, ಮೋಟೆರಾಮನ ಸತ್ಯಾಗ್ರಹದಂಥ ಪ್ರಮುಖ ಆಧುನಿಕ ಸಂಘರ್ಷಭರಿತ ನಾಟಕಗಳಲ್ಲಿ ನಟನಾಗಿ ಅನುಭವ ಪಡೆದರು. 'ವೇದಿಕೆ' ತಂಡದಿಂದ ಪ್ರಯೋಗಗೊಂಡ ಕರ್ಣ, ರಸಋಷಿ, ಸ್ಮಶಾನ ಕುರುಕ್ಷೇತ್ರ, ಭೈರವಿ, ಕೋಲ್ಮಿಂಚು ನಾಟಕಗಳಲ್ಲಿ, ಇಂಗ್ಲಿಷ್ ನಾಟಕ ತಂಡ ಬೆಂಗಳೂರು ಲಿಟಲ್ ಥಿಯೇಟರ್ ವತಿಯಿಂದ ಈಡಿಪಸ್, ಜು ಸ್ಟೋರಿ, ಪರ್ಪಸ್ ನಾಟಕಗಳಲ್ಲೂ ನಟಿಸಿದರು. ಈ ಎಲ್ಲ ನಾಟಕಗಳಲ್ಲೂ ನಟಿಸಿದ ಅನುಭವ ಋತ್ವಿಕ್‌ರನ್ನು ನಿರ್ದೇಶನದೆಡೆಗೆ ಸೆಳೆಯಲು ಕಾರಣವಾಗಿ ಉದ್ಭವ, ಟೊಳ್ಳುಗಟ್ಟಿ, ಏಕಲವ್ಯ, ಸ್ಮಶಾನ ಕುರುಕ್ಷೇತ್ರ, ಕೋಲ್ಮಿಂಚು ನಾಟಕಗಳ ನಿರ್ದೇಶನವನ್ನು ಮಾಡಿದರು.

ಕಾಲೇಜು ರಂಗಭೂಮಿಯಿಂದ ಹಲವಾರು ನಾಟಕಗಳಲ್ಲಿ ಪಾಲ್ಗೊಂಡು ಪಾರಿತೋಷಕಗಳನ್ನು ಗಳಿಸಿಕೊಂಡಿದ್ದಾರೆ. ಶಾಲಾ-ಕಾಲೇಜು ರಂಗಾಸಕ್ತ ವಿದ್ಯಾರ್ಥಿಗಳಿಗಾಗಿ ಹಲವಾರು ರಂಗ ಶಿಬಿರಗಳನ್ನು ಸಂಘಟಿಸಿದ್ದಾರೆ. ಮಕ್ಕಳ ನಾಟಕಗಳನ್ನು ಪ್ರಯೋಗಿಸಿದ್ದಾರೆ.

ರಂಗಭೂಮಿಯ ಈ ಪ್ರತಿಭೆ ಕಿರುತೆರೆಗೂ ಕಣ್ಣಾಯಿಸಿ ಧಾರಾವಾಹಿಗಳಲ್ಲಿ ನಟನಾಗಿ, ಸಹ ನಿರ್ದೇಶಕನಾಗಿ, ನಾಟಕ ರಚನಾಕಾರರಾಗಿಯೂ ಮುಂದುವರಿಯುತ್ತಿದೆ.



ಕಮಲಶ್ರೀ

ವಿಳಾಸ :
ನಂ.908, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಪ್ರಕಾಶನಗರ
ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿರ
ಬೆಂಗಳೂರು - 21

ಗುಬ್ಬಿ ಕಂಪನಿಯ 'ದಶಾವತಾರ' ನಾಟಕದಲ್ಲಿ ಕೇವಲ ವರ್ಷದ ಹಸುಗೂಸು ಪಾತ್ರವಹಿಸಿತ್ತು. ಅಂದಿನ ದಿನಗಳಲ್ಲೇ ಹಸುಗೂಸು ಪಾತ್ರವಹಿಸಿದ್ದು ಜನರಲ್ಲಿ ಅಚ್ಚರಿ ಮೂಡಿಸಿತ್ತು. ಅಂದಿನ ಆ ಮಗುವೇ ಇಂದಿನ ರಂಗಕಲಾವಿದೆ ಕಮಲ ಚಿತ್ರರಂಗದ ಕಮಲಶ್ರೀ.

ಕಲಾವಿದೆ ಸೌಭಾಗ್ಯ ಸುಂದರಮ್ಮನವರ ಮಗಳಾದ ಕಮಲ ಬಾಲ ನಟಿಯಾಗಿ ಗುಬ್ಬಿ ಕಂಪನಿ ಮಾತ್ರವಲ್ಲದೆ ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿ, ಬಳ್ಳಾರಿ ಲಲಿತಮ್ಮನವರ ನಾಟಕ ಕಂಪನಿಯ ನಾಟಕಗಳಲ್ಲಿ ನಟಿಸಿದರು. ಮುಂದೆ ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ ಬಹು ದಿನ ಪಾತ್ರವಹಿಸಿದರು. ಬೆಂಗಳೂರಿನಲ್ಲಿ ನೆಲೆಸಿದ ಮೇಲೆ ಹವ್ಯಾಸಿ ನಾಟಕ ಸಂಸ್ಥೆಗಳಲ್ಲೂ ಪಾತ್ರವಹಿಸಿದರು. ಕೈಲಾಸಂರ 'ಸೂಳೆ' ನಾಟಕದ ಪಾತ್ರದಿಂದಲೇ ಕಮಲರನ್ನು ಗುರುತಿಸುವಂತಾಯಿತು 'ರಕ್ತಾಕ್ಷಿ' ನಾಟಕದ ಪಾತ್ರವೂ ಉತ್ತಮ ಹೆಸರನ್ನು ಗಳಿಸಿಕೊಟ್ಟಿತು.

ನಾಟಕ, ಸಿನಿಮಾ, ದೂರದರ್ಶನ ಧಾರಾವಾಹಿ ಹೀಗೆ ಕಮಲಶ್ರೀ ಎಲ್ಲ ದೃಶ್ಯ ಮಾಧ್ಯಮಗಳಿಂದಲೂ ಪರಿಚಿತ ಕಲಾವಿದೆ.



ಎಂ. ಕಾಶಿ
ಜನನ : 11-12-1960

'ಕಾಶಿ' ಕನ್ನಡ ಹವ್ಯಾಸಿ ರಂಗಭೂಮಿ ಕಂಡ ಅಪ್ಪಟ ಪ್ರತಿಭೆ. ಈಗ ಬೆಂಗಳೂರಿನಲ್ಲಿ ನೆಲೆಸಿರುವ ಕಾಶಿ ಮೂಲತಃ ಶಿವಮೊಗ್ಗ ಜಿಲ್ಲೆಗೆ ಸೇರಿದವರು. ದಿII ಮಲ್ಲಪ್ಪ ಹಾಗೂ ಚಿನ್ನಮ್ಮ ಇವರ ತಂದೆ ತಾಯಿಯರು.

ಮೈಸೂರಿನ ಯುವರಾಜ ಕಾಲೇಜಿನ ಪದವೀಧರರಾದ ಕಾಶಿ, ಕಾಲೇಜು ರಂಗಮಂಚದಿಂದಲೇ ಹಲವು ನಾಟಕಗಳಲ್ಲಿ ನಟಿಸಿದ್ದರು. ಆ ದಿನಗಳ ಅನುಭವ ಆಸಕ್ತಿಯಾಗಿ ಬೆಳೆದು ಹವ್ಯಾಸಿ ರಂಗಭೂಮಿ ಪ್ರವೇಶಿಸಲು ಕಾರಣವಾಯಿತು. ಟಿ.ಎನ್. ನರಸಿಂಹನ್ ನಿರ್ದೇಶನದ ಆಲ್ಬರ್ಟ್ ಕಾಮೋನ 'Lee Justice' ಆಧಾರಿತ 'ಮುಂಜಾವಿಗೆ ಮೂರು ತಾಸು' ಕಾಶಿ ನಟಿಸಿದ ಪ್ರಥಮ ನಾಟಕ. ನಂತರ ಇದೇ ನಿರ್ದೇಶಕರ ತುಘಲಕ್, ವಿಚಿತ್ರ ಜೋಡಿ ನಾಟಕಗಳಲ್ಲಿ ಅಭಿನಯಿಸಿದರು.

ನಂತರ ಬೆಂಗಳೂರಿನ ಖ್ಯಾತ ಹವ್ಯಾಸಿ ತಂಡ ದಿII ಶಂಕರ್‌ನಾಗ್‌ರ 'ಸಂಕೇತ್' ತಂಡವನ್ನು ಸೇರಿದರು. ಶಂಕರ್‌ನಾಗ್ ನಿರ್ದೇಶನದ ಆಟ ಬೊಂಬಾಟ, ನಾಗಮಂಡಲ, ಹುಲಿಗೂರ ಹುಲಿಯವ್ವ, ಹಸಿರೆಲೆ ಹಣ್ಣೆಲೆ, ಜನತೆಯ ಶತ್ರು, ಕರಿಮಾಯಿ, 27 ಮಾವಳ್ಳಿ ಸರ್ಕಲ್, ತನುವು ನಿನ್ನದೆ ಮನವು ನಿನ್ನದೆ ಮುಂತಾದ ಹಲವು ಉತ್ತಮ ಪ್ರಯೋಗಗಳಲ್ಲಿ ಅಭಿನಯಿಸಿ ಅಪಾರ ಜನಮನ್ನಣೆ ಪಡೆದರು.

ಈ ಎಲ್ಲ ರಂಗಾನುಭವದ ಆಧಾರದಿಂದ ಎಲ್ಲಿಗೆ, ಕುಂಟಾ ಕುಂಟಾ ಕುರವತ್ತಿ, ಕರಿಮಾಯಿ, ರಾವಿನದಿಯ ದಂಡೆಯಲ್ಲಿ, 'Men without Shadow The care taker' ನಾಟಕಗಳನ್ನು ನಿರ್ದೇಶಿಸಿ ಯಶಸ್ವಿಯಾಗಿದ್ದಾರೆ.

ರಂಗಭೂಮಿಯ ಈ ಪ್ರತಿಭೆ ಕಿರುತೆರೆ, ಬೆಳ್ಳಿತೆರೆಗೂ ಲಗ್ಗೆ ಇಟ್ಟು ಅಲ್ಲಿಯೂ ಯಶಸ್ಸನ್ನು ಬೆನ್ನಿಗೇರಿಸಿಕೊಂಡಿದೆ. ಹಾಸ್ಯನಟರ ಕೊರತೆಯಿರುವ ಕನ್ನಡ ಚಿತ್ರರಂಗದಲ್ಲಿ ಕಾಶಿ ಅತ್ಯುತ್ತಮ ಹಾಸ್ಯನಟನಾಗಿ ಜನಮನ ಗೆದ್ದಿದ್ದಾರೆ. ಕಿರುತೆರೆಯ ಹಲವಾರು ಜನಪ್ರಿಯ ಧಾರಾವಾಹಿಗಳಿಂದ ಚಿರಪರಿಚಿತ ನಟರಾಗಿದ್ದಾರೆ.

ಬಿಡುವಿಲ್ಲದ ನಟನಾಗಿದ್ದರೂ ಈ ಬೆಳವಣಿಗೆಗೆ ಕಾರಣವಾದ ರಂಗಭೂಮಿಯ ಬಗೆಗೆ ಆಸಕ್ತಿ, ಅಭಿಮಾನ ಉಳಿಸಿಕೊಂಡಿದ್ದಾರೆ.



## ಆರ್.ಎಸ್. ಕುಲಕರ್ಣಿ

ಜನನ : 27-3-1961

*ವಿಳಾಸ :*

'ದತ್ತ ನಿಲಯ'

ಮೃತ್ಯುಂಜಯ ನಗರ, ಮೊದಲನೇಯ ಕ್ರಾಸ್

ಹೊಸಪೇಟೆ - 583 203

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದ ಹಿರಿಯ ರಂಗನಟರಾಗಿದ್ದ ದಿವಂಗತ ಮಲ್ಹಾರಿ ಕುಲಕರ್ಣಿಯವರ ಮೊಮ್ಮಗನಾದ ಆರ್.ಎನ್. ಕುಲಕರ್ಣಿಯವರು ವೃತ್ತಿಯಲ್ಲಿ ಅಭಿಯಂತರರಾಗಿ ಟಿ.ಬಿ. ಡ್ಯಾಂನಲ್ಲಿ ಕೆಲಸದಲ್ಲಿದ್ದಾರೆ. ಅಜ್ಜನಲ್ಲಿದ್ದ ರಂಗಕಲೆ ಮೊಮ್ಮಗನಿಗೂ ಹರಿದು ಬಂದು ಚಿಕ್ಕ ವಯಸ್ಸಿನಲ್ಲಿಯೇ ರಂಗಾಕರ್ಷಣೆಗೆ ಒಳಗಾಗಿ ಹವ್ಯಾಸವಾಗಿ ರೂಢಿಸಿಕೊಳ್ಳಲು ಕಾರಣವಾಯಿತು. ರಂಗಾಭಿನಯ, ಸಂಗೀತ, ಚಿತ್ರಕಲೆಯಲ್ಲಿ ಅಪಾರ ಆಸಕ್ತಿಯನ್ನು ಬೆಳೆಸಿಕೊಂಡರು.

1984 ರಲ್ಲಿ ಬಿ.ಇ. ಪದವಿಯನ್ನು ಬಾಗಲಕೋಟೆಯಲ್ಲಿ ಮುಗಿಸಿ, ಟಿ.ಬಿ. ಡ್ಯಾಂನಲ್ಲಿ ಉದ್ಯೋಗಕ್ಕೆ ಸೇರಿ, ಕಾರ್ಖಾನೆಯ ಗೆಳೆಯರೊಂದಿಗೆ ರಂಗಭೂಮಿಯ ಒಡನಾಟವನ್ನು ಹೆಚ್ಚಿಸಿಕೊಂಡರು. ಕಾರ್ಖಾನೆಯ ವತಿಯಿಂದ ರಾಜ್ಯಾದ್ಯಂತ ನಡೆಯುವ ಅನೇಕ ನಾಟಕ ಸ್ಪರ್ಧೆಗಳಲ್ಲಿ ಪಾತ್ರವಹಿಸಿ, ನಿರ್ದೇಶಿಸಿ, ರಂಗ ನಿರ್ವಹಣೆ, ವಸ್ತ್ರ ವಿನ್ಯಾಸಗಳಲ್ಲಿ ಅನೇಕ ಬಾರಿ ಪ್ರಶಸ್ತಿ, ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ.

ಇದುವರೆಗೂ ಸುಮಾರು 50 ಕ್ಕೂ ಹೆಚ್ಚು ನಾಟಕಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ಈ ಭಾಗದ ಅತ್ಯುತ್ತಮ ನಟ, ನಿರ್ದೇಶಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕಲಿ ಕಂಠೀರವ, ಅಂತ್ಯವಲ್ಲ ಇದು ಆರಂಭ, ಕಾಲಧರ್ಮ, ಸಾಕ್ಷಿಕಲ್ಲು, ತದ್ರೂಪಿ, ತುಘಲಕ್, ಮಹಿಮಾಪುರ, ಗೋರಿಗೊಂದು ಹದ್ದು, ಜೈ ಮೈಲಾರಲಿಂಗ, ದಫನ್, ಬ್ರಹ್ಮತೇಜ, ಸತ್ಯ ಹರಿಶ್ಚಂದ್ರ, ಗುರ್ತಿನವರು, ಗಂಡಸ್ಕತ್ರಿ, ಹೆಂಡತಿಯೇ ನಿನಗೆ ನಮೋ ನಮೋ, ಹುಡುಕಾಟ, ಗೋಪಾಳನ ಗೋಪಾಳ, ರಾಕ್ಷಸ ಇವರು ಅಭಿನಯಿಸಿ, ನಿರ್ದೇಶಿಸಿದ ಕೆಲವು ಪ್ರಮುಖ ನಾಟಕಗಳು.

ಬೆಂಗಳೂರಿನ ಕಾಲಭೈರವ ಕಲಾನಿಕೇತನ ಏರ್ಪಡಿಸಿದ ರಾಜ್ಯಮಟ್ಟದ ಪೌರಾಣಿಕ ನಾಟಕ ಸ್ಪರ್ಧೆಯಲ್ಲಿ 'ಜೈ ಮೈಲಾರಲಿಂಗ' ನಾಟಕದ ನಿರ್ದೇಶನಕ್ಕೆ ಪ್ರಥಮ ಪ್ರಶಸ್ತಿ ಹಾಗೂ ಬಳ್ಳಾರಿಯ ರಾಘವ ಸ್ಮಾರಕ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಅತ್ಯುತ್ತಮ ಶ್ರೇಷ್ಠ ನಟ ಪ್ರಶಸ್ತಿಯನ್ನು, ನಗರದ ಚಿ|| ಉದಯಶಂಕರ್ ಸ್ಮಾರಕ ರಾಜ್ಯ ಮಟ್ಟದ ಸಾಮಾಜಿಕ ನಾಟಕ ಸ್ಪರ್ಧೆಯಲ್ಲಿ 'ಅಂತ್ಯವಲ್ಲ-ಇದು-ಆರಂಭ' ದ ನಾಟಕಕ್ಕೆ ಶ್ರೇಷ್ಟನಟ ಹಾಗೂ ಅತ್ಯುತ್ತಮ ವಸ್ತ್ರಾಲಂಕಾರ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅಲ್ಲದೆ ಹೊಸಪೇಟೆಯ ಆಕಾಶವಾಣಿಯ ಕಲಾವಿದರೂ ಆಗಿದ್ದಾರೆ.

ಕುಲಕರ್ಣಿ ನಟರಷ್ಟೇ ಅಲ್ಲದೆ ಉತ್ತಮ ರಂಗಕರ್ಮಿ, ರಂಗ ಸಂಘಟಕರೂ ಆಗಿದ್ದಾರೆ. ಟಿ.ಬಿ. ಡ್ಯಾಂನಲ್ಲಿರುವ 'ಕನ್ನಡ ಕಲಾಸಂಘ'ದ ಜಂಟಿ ಕಾರ್ಯದರ್ಶಿಯಾಗಿ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ತೆಲುಗಿನ ಹೆಸರಾಂತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಯೋಗಕ್ಕೆ ಒಳಪಡಿಸಿದ್ದಾರೆ.



## ಹೆಚ್. ಎಸ್. ಕೃಷ್ಣಮೂರ್ತಿ (ಹಾ.ಸಾ.ಕೃ.)

ಕಲಾರಂಗದಲ್ಲಿ ಹಾ.ಸಾ.ಕೃ. ಎಂದೇ ಖ್ಯಾತರಾಗಿರುವ ಹೆಚ್.ಎಸ್. ಕೃಷ್ಣಮೂರ್ತಿ ಮೂಲತಃ ಮೈಸೂರು ಜಿಲ್ಲೆಯ ಹುಣಸೂರಿನವರು. ತಂದೆ ಹೆಚ್.ಎಸ್. ಶ್ರೀಕಂಠಯ್ಯನವರು. ಬಿ.ಎಸ್ಸಿ. ಪದವೀಧರರಾದ ಇವರಿಗೆ ರಂಗಭೂಮಿ ಪ್ರಿಯವಾದ ಹವ್ಯಾಸಿ ಕ್ಷೇತ್ರ. 1972 ರಿಂದ ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ನಟನೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೊದಲಿನಿಂದಲೂ ಇದೆ.

ಎಪ್ಪತ್ತರ ದಶಕ ಕನ್ನಡ ರಂಗಭೂಮಿಯ ಉಚ್ಛ್ರಾಯ ಕಾಲ. ಅನೇಕ ಉತ್ತಮ ಹಾಗೂ ಮಹತ್ವದ ನಾಟಕಗಳು ಪ್ರಯೋಗಗೊಂಡದ್ದು, ಹಾಗೂ ರಂಗ ನಿರ್ದೇಶಕರಿಗೆ ಮಹತ್ವ ದೊರೆತದ್ದು ಈ ಅವಧಿಯಲ್ಲೇ. ಕಾರಂತ, ಚಂದ್ರಶೇಖರ ಕಂಬಾರ, ಲಂಕೇಶ್, ಗಿರೀಶ್ ಕಾರ್ನಾಡ್, ಶ್ರೀ ರಂಗ, ಬಿ. ಚಂದ್ರಶೇಖರ್ ಮುಂತಾದ ನಾಟಕಕಾರರು ಕನ್ನಡ ರಂಗಭೂಮಿಗೆ ಸಾರ್ವತ್ರಿಕ ಮಹತ್ವ ತಂದುಕೊಟ್ಟರು. ಇಂಥ ರಂಗದಿಗ್ಗಜರ ಒಡನಾಡಿಯಾಗಿ ಹಾ.ಸಾ.ಕೃ. ರಂಗಭೂಮಿಯ ಆಳ - ಅಗಲಗಳ ಅಧ್ಯಯನ ನಡೆಸಿದರು. ಕಾರಂತರ ಅಡಿ ಶಿಷ್ಯನಾಗಿ ನಟನೆ, ಸಂಭಾಷಣೆ, ಹಾಡು, ವ್ಯವಸ್ಥೆ ವಿಭಾಗಗಳಲ್ಲಿ ಪರಿಣತಿ ಸಾಧಿಸಿದರು. ಈ ಎಲ್ಲ ಅನುಭವಗಳನ್ನು ಮೈಗೂಡಿಸಿಕೊಂಡು, ರಂಗ ವಿಮರ್ಶೆಯತ್ತ ತಮ್ಮ ದೃಷ್ಟಿ ಹೊರಳಿಸಿದರು. ರಂಗ ವಿಮರ್ಶೆಗೊಂದು ಪರಿಭಾಷೆ ರೂಪಿಸುವಲ್ಲಿ ಶ್ರಮಿಸಿದರು.

ಇವರ ನಾಟಕ ಕಲೆಯ ಬಗೆಗಿನ ಲೇಖನ, ವಿಮರ್ಶೆಗಳು ಯುವ ರಂಗಾಸಕ್ತರಿಗೆ ಮಾದರಿ ಕೈಪಿಡಿಯಂತಿವೆ. ನಾಟಕ ಅಕಾಡೆಮಿಗಾಗಿ ಬಿ.ವಿ. ಕಾರಂತರ ಬಗೆಗಿನ ಪರಿಚಯಾತ್ಮಕ ಕಿರುಹೊತ್ತಿಗೆಯನ್ನು ಬರೆದಿದ್ದಾರೆ.

ಮೈಸೂರಿನ 'ರಂಗಾಯಣ' ಕ್ಕೆ ವಿಶೇಷ ಅಧಿಕಾರಿಯಾಗಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಕರ್ನಾಟಕ ನಾಟಕ ಅಕಾಡೆಮಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ದುಡಿದಿದ್ದಾರೆ. ಉತ್ತಮ ವಾಗ್ಮಿಯೂ ಆಗಿರುವ ಹಾ.ಸ.ಕೃ. ಕಿರುತೆರೆ, ಬೆಳ್ಳಿತೆರೆಗಳಲ್ಲೂ ನಟರಾಗಿ ಪರಿಚಿತರು. ರಂಗಭೂಮಿಗೆ ಹೊಸ ದಿಕ್ಕು, ನೋಟ ಮೂಡಿಸುವಲ್ಲಿ ಇವರ ಪಾತ್ರ ಹಿರಿದಾಗಿದೆ.

1999ನೇ ಸಾಲಿನಲ್ಲಿ ನಾಟಕ ಅಕಾಡೆಮಿ ನೀಡುವ ಫೆಲೋಷಿಪ್‌ಗೆ ಪಾತ್ರರಾಗಿದ್ದಾರೆ.



ಟಿ. ಕೃಷ್ಣಮೂರ್ತಿ

ಟಿ. ಕೃಷ್ಣಮೂರ್ತಿ ಯುವ ಪೀಳಿಗೆಯ ನಟ, ನಿರ್ದೇಶಕ, ಗಾಯಕರ ಸಾಲಿನಲ್ಲಿ ಒಬ್ಬರು. ಶಾಲಾ ದಿನಗಳಲ್ಲೇ ಜಾನಪದ ಹಾಡುಗಳನ್ನು ಹಾಡುವುದು, ನಾಟಕಗಳಲ್ಲಿ ಅಭಿನಯಿಸುವುದನ್ನು ಮೈಗೂಡಿಸಿಕೊಂಡು ಬೆಳೆದಂಥವರು.

1982ರಲ್ಲಿ 'ಕುರುಕ್ಷೇತ್ರ' ನಾಟಕದಲ್ಲಿ ಭೀಷ್ಮನ ಪಾತ್ರಧಾರಿಯಾಗಿ ಹವ್ಯಾಸಿ ರಂಗಭೂಮಿಗೆ ಕಲಾವಿದನಾಗಿ ಸೇರಿದರು. ಮುಂದೇ ಅದೇ ನಾಟಕದಲ್ಲಿ ಅರ್ಜುನ, ಅಭಿಮನ್ಯು, ದುರ್ಯೋಧನ, ದುಶ್ಯಾಸನ, ಶಕುನಿ, ಕೃಷ್ಣ, ಕರ್ಣ, ವಿದುರ, ಭೀಮ ಹೀಗೆ ನಾಟಕದಲ್ಲಿ ಬರುವ ಎಲ್ಲ ಪಾತ್ರಗಳನ್ನು ನಿರ್ವಹಿಸಿ ಜನಮನ್ನಣೆ ಗಳಿಸಿದ್ದಾರೆ. ಸಾಮಾಜಿಕ ನಾಟಕಗಳಾದ ತ್ಯಾಗಿ, ಮಹಾತ್ಯಾಗಿ, ಮಂಗಳ ನನ್ನ ಅತ್ತಿಗೆ, ಮೂವತ್ತಾರು ಅಲ್ಲ ಅರವತ್ತಮೂರು, ತ್ರಿಮೂರ್ತಿಗಳು, ಮುದುಕನ ಮದುವೆ, ಮದುವೆ ಮಾರ್ಕೆಟ್, ನನ್ನ ಗಂಡ ಬಲು ಭಂಡ, ಮನೆ ಅಳಿಯ ಹೀಗೆ ಹಲವಾರು ನಾಟಕಗಳನ್ನು ನಿರ್ದೇಶಿಸಿ, ನಟಿಸಿಯೂ ಇದ್ದಾರೆ.

1983ರಲ್ಲಿ 'ಸ್ವರಸಂಗೀತ ಜಾನಪದ ಕಲಾವೃಂದ' ವನ್ನು ಕಟ್ಟಿ ನೂರಾರು ಜಾನಪದ ರಸಮಂಜರಿ ಕಾರ್ಯಕ್ರಮಗಳನ್ನು ನೀಡಿ, ಹಲವು ನಾಟಕಗಳಿಗೆ ಸಂಗೀತ ನಿರ್ದೇಶನವನ್ನೂ ಮಾಡಿದ್ದಾರೆ. ಕಲಾಸಾಗರ ಬೆಳೆದಂತೆ ಸ್ನೇಹಿತರ ಜೊತೆಗೂಡಿ 'ಸ್ನೇಹ ಬಳಗ ಕಲಾವಿದರು' ಎಂಬ ತಂಡ ಕಟ್ಟಿ, ಸಂಸ್ಥೆ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಹಿಳಾ ಕಲಾವಿದರಿಗಾಗಿಯೇ ಶ್ರೀ ಕೃಷ್ಣ ಸಂಧಾನ ನಾಟಕವನ್ನು, ಮಕ್ಕಳಿಗಾಗಿ ಪ್ರಚಂಡ ರಾವಣ, ಶ್ರೀ ಕೃಷ್ಣಸಂಧಾನ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರ ಸಾಧನೆಗೆ 'ಪೂರ್ಣ ಪ್ರಜ್ಞಾ ಕಲಾಚತುರ' ಬಿರುದಿನೊಂದಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ ಕೃಷ್ಣಮೂರ್ತಿ. ಕಿರುತೆರೆಯ ಧಾರಾವಾಹಿಗಳಲ್ಲೂ ಇವರು ನಟಿಸಿದ್ದಾರೆ.



## ಎನ್. ಕೃಷ್ಣಮೂರ್ತಿ

ಜನನ : 16-9-1929

*ವಿಳಾಸ :*
ನಾಟಕ ನಿರ್ದೇಶಕ
ಪದ್ಮಶ್ರೀ ಕಲಾಸಂಘ
ಟೌನ್‌ಹಾಲ್ ಮುಂಭಾಗ
ಬೆಂಗಳೂರು - 2

ಕಲಾವಿದ ಕೃಷ್ಣಮೂರ್ತಿಯವರನ್ನು 1946ರಲ್ಲಿ ಬಿ. ಕೃಷ್ಣಸಿಂಗ್‌ರವರು ಹವ್ಯಾಸಿ ರಂಗಭೂಮಿಗೆ ಪರಿಚಯಿಸಿದರು. ಆ ನಂತರದ ದಿನಗಳಲ್ಲಿ ಮಹಾತ್ಮ ಕಬೀರ್, ಶ್ರೀ ಕೃಷ್ಣಗಾರುಡಿ, ಶ್ರೀ ಕೃಷ್ಣ ಪಾರಿಜಾತ, ಸದಾರಮೆ, ಶ್ರೀದಾಮಾಜಿಪಂತ್, ಭಕ್ತಪ್ರಹ್ಲಾದ, ದಾನಶೂರ ಕರ್ಣ ಮುಂತಾದ ಪೌರಾಣಿಕ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ, ಸ್ವತಃ ನಿರ್ದೇಶನವನ್ನೂ ಮಾಡಿದ್ದಾರೆ. ಅಲ್ಲದೆ ಆಶಾನಿರಾಶ, ಪ್ರೇಮಪತನ, ಋಣಾನುಬಂಧ, ಸೌಭಾಗ್ಯ ಸಿಂಧೂರ, ಅನುರಾಗ, ರಕ್ತದಾಹ, ಮಧುಮೋಹನ ಇತ್ಯಾದಿ ಸಾಮಾಜಿಕ ನಾಟಕಗಳಲ್ಲಿ ಪಾತ್ರನಿರ್ವಹಿಸಿ ನಿರ್ದೇಶಿಸಿದ್ದಾರೆ.

ಆನಂತರ ಎಂ. ಸಿ. ಮದಹೇವಸ್ವಾಮಿಯವರ 'ಕನ್ನಡ ಥಿಯೇಟರ್' ಸಂಸ್ಥೆ ಸೇರಿ ಅಲ್ಲಿನ ಎಲ್ಲಾ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹಿರಣ್ಣಯ್ಯ ಮಿತ್ರ ಮಂಡಳಿ, ಪಿ.ಬಿ. ಧುತ್ತರಗಿ ಕಂಪನಿ, ಮಲ್ಲಿಕಾರ್ಜುನ ನಾಟ್ಯ ಸಂಘ, ಸರ್ವಮಂಗಳ ಕಲಾ ಮಂಡಳಿ ಕೃಷ್ಣಮೂರ್ತಿ ಸೇವೆ ಸಲ್ಲಿಸಿರುವ ನಾಟ್ಯ ಸಂಘಗಳು.

1985ರಲ್ಲಿ ತಮ್ಮದೇ ಮಾಲೀಕತ್ವದಲ್ಲಿ 'ಪದ್ಮಶ್ರೀ ಕಲಾ ಸಂಘ' ಸಂಸ್ಥೆಯನ್ನು ಸ್ಥಾಪಿಸಿ ಅನೇಕ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ನಿರ್ದೇಶಿಸಿ, ಪ್ರದರ್ಶಿಸಿ, ನೂರಾರು ಹೊಸ ಕಲಾವಿದರಿಗೆ ತರಬೇತಿ ನೀಡಿ ಕಲಾರಂಗಕ್ಕೆ ಪರಿಚಯಿಸುವ ಕಾರ್ಯದಲ್ಲಿ ಉತ್ಸುಕರಾಗಿ ದುಡಿಯುತ್ತಿದ್ದಾರೆ.

ಈ ಇಳಿವಯಸ್ಸಿನಲ್ಲೂ ರಂಗಾಕರ್ಷಣೆ ಉಳಿಸಿಕೊಂಡು, ಕಲಾಸೇವೆ ಮಾಡುತ್ತಿದ್ದಾರೆ.



## ಬನವಾಸಿ ಕೃಷ್ಣಮೂರ್ತಿ

*ವಿಳಾಸ:*
ನಂ. 5, ಸ್ಟಾಫ್ ಕ್ಯಾಂಪಸ್
ಕ್ರೆಸೆಂಟ್ ರಸ್ತೆ
ಬೆಂಗಳೂರು - 1

ಕನ್ನಡ ಹವ್ಯಾಸಿ ರಂಗಭೂಮಿ ಕಲಾವಿದರಿಗೆ ಬನವಾಸಿ ಕೃಷ್ಣಮೂರ್ತಿಯವರ ಹೆಸರು ಚಿರಪರಿಚಿತ. ಹವ್ಯಾಸಿ ಬರಹಗಾರರಾಗಿರುವ ಇವರು ಕಳೆದ ಹದಿನೈದು ವರ್ಷಗಳಿಂದ ರಂಗಭೂಮಿಗೆ ಸಂಬಂಧಿಸಿದಂತೆ ಲೇಖನಗಳನ್ನು ಬರೆಯುತ್ತಿದ್ದಾರೆ. ಕನ್ನಡದ ಹೆಸರಾಂತ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಉದಯವಾಣಿ, ಜನವಾಹಿನಿ ಮುಂತಾದ ಪತ್ರಿಕೆಗಳಲ್ಲಿ ಇವರ ನಾಟಕ ಕುರಿತಾದ ವಿಮರ್ಶೆಗಳು ಪ್ರಕಟವಾಗಿವೆ.

1982 ರಿಂದಲೂ ಸಚಿವಾಲಯ ಕ್ಲಬ್, ಸ್ನೇಹ ಸಂಪದ ಮುಂತಾದ ತಂಡಗಳು ಪ್ರಯೋಗಿಸಿದ ನಾಟಕಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಸಚಿವಾಲಯದ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿಯಾಗಿ, 'ಹೊಸಬರು' ರಂಗತಂಡದ ಸಂಚಾಲಕರಾಗಿ ರಂಗ ಕೈಂಕರ್ಯದಲ್ಲಿ ತೊಡಗಿದ್ದಾರೆ.

ರಾಜಾರಾಮ್ ಗಿರಿಯನ್‌ರ ನಿರ್ದೇಶನದಲ್ಲಿ ನಾಯೀ ಕತೆ, ನಾಗರಿಕ, ಎಲ್ಲಾರೂ ಮಾಡುವುದು, ಎಚ್ಚಮ ನಾಯಕ ನಾಟಕಗಳಲ್ಲಿ, ಅನಂತ ರಂಗಾಚಾರ್ ನಿರ್ದೇಶನದಲ್ಲಿ ಪತಿತೋದ್ಧಾರಕ, ಬಸವೇಶ್ವರ, ಕೋಮಲ ಗಾಂಧಾರ, ಮತ್ತು ಪ್ರಭಾಕರಬಾಬು ನಿರ್ದೇಶನದ ರಂಗೀದೊಡ್ಡಿ ರಾಮಾಣ್ಣ, ಹೋಂರೂಲು, ಉದ್ಭವ ಮುಂತಾದ ನಾಟಕಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ. ಹೈದರಾಬಾದ್, ಜೈಪುರ, ನಾಗಪುರ ಮುಂತಾದ ಸ್ಥಳಗಳಲ್ಲಿ ನಡೆದ ರಾಷ್ಟ್ರೀಯ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದಾರೆ.

ಸಚಿವಾಲಯದಲ್ಲಿ ಹಿರಿಯ ಸಹಾಯಕ ಗ್ರಂಥಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಕೃಷ್ಣಮೂರ್ತಿ ಎಂ.ಕಾಂ., ಬಿ.ಲಿಬ್., ಎಲ್‌ಎಲ್.ಬಿ. ಪದವೀಧರರು.



ಎಂ. ಕೃಷ್ಣಮೂರ್ತಿ

ವಿಳಾಸ :
ತಬಲ ವಾದಕರು,
ಬೆಳಕವಾಡಿ ಗ್ರಾಮ, ಮಳವಳ್ಳಿ ತಾಲ್ಲೂಕು,
ಮಂಡ್ಯಜಿಲ್ಲೆ.

ಎಂ. ಕೃಷ್ಣಮೂರ್ತಿ ರಂಗಭೂಮಿಯ ನಟರಲ್ಲದಿದ್ದರೂ ರಂಗದ ಮುಂದೆ ತಬಲ ವಾದಕರಾಗಿ ನಾಟಕ ರಂಗೇರಿಸುವುದರಲ್ಲಿ ವಿಶಿಷ್ಟ ಪರಿಣತಿ ಹೊಂದಿರುವ ವಾದನ ಚತುರ. ಮೃದಂಗ ನುಡಿಸುವುದರಲ್ಲೂ ಚತುರತೆ ಇದೆ.

ಶ್ರೀ ಬಿ. ಮಾದಯ್ಯ, ಸುಶೀಲಮ್ಮ ದಂಪತಿಗಳ ಮಗನಾದ ಕೃಷ್ಣಮೂರ್ತಿ ಹುಟ್ಟಿ, ಬೆಳೆದದ್ದು ಕಡು ಬಡತನದಲ್ಲಿ. ತಂದೆ ಕೃಷಿಕರಾಗಿದ್ದು, ಕಷ್ಟಪಟ್ಟು 8ನೇ ತರಗತಿವರೆಗೆ ವ್ಯಾಸಂಗ ಮಾಡಿದರು. ಉದ್ಯೋಗಾರ್ಥಿಯಾಗಿ ಬೆಂಗಳೂರಿಗೆ ಬಂದು ರಂಗಸ್ವಾಮಿಯವರ ತಬಲ ಮತ್ತು ಮೃದಂಗ ರಿಪೇರಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ತಬಲ ಕಲಿಯಬೇಕೆಂಬ ಆಸೆ ಮೂಡಿ ಮೃದಂಗ ವಿದ್ವಾನ್ ಶ್ರೀ ಎಸ್.ವಿ. ಗಿರಿಧರ್‌ರವರಲ್ಲಿ 7 ವರ್ಷಗಳ ಕಾಲ ಅಭ್ಯಾಸ ಮಾಡಿದರು. ಕ್ರಮೇಣ ಮನಸ್ಸು ರಂಗಭೂಮಿಯ ಕಡೆಗೆ ವಾಲಿತು. ಶ್ರೀ ವಿ. ವೆಂಕಟರಾಜು ಅವರ ಮಾರ್ಗದರ್ಶನದಲ್ಲಿ ಬಯಲು ರಂಗನಾಟಕಗಳಿಗೆ ತಬಲ ನುಡಿಸಿ, ಮುಂದೆ ಸ್ವತಂತ್ರವಾಗಿ ತಬಲ ವಾದಕರಾದರು. ಕರ್ನಾಟಕದಾದ್ಯಂತ ಬಯಲು ನಾಟಕಗಳಲ್ಲಿ ತಬಲ ವಾದನ ನೀಡಿದ ಹೆಗ್ಗಳಿಕೆ ಇವರದು.

ಆಕಾಶವಾಣಿಯಲ್ಲಿನ ಸುಗಮ ಸಂಗೀತ, ರಂಗಗೀತೆ, ಹರಿಕಥೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ದೂರದರ್ಶನದಲ್ಲಿಯೂ ಸಹ ರಂಗಗೀತೆ ಮತ್ತು ಹರಿಕಥೆಗಳಿಗೆ ತಬಲ ನುಡಿಸಿದ್ದಾರೆ.

'ರಂಗಕಲೆ ಉಳಿಯಬೇಕು, ಬೆಳೆಯಬೇಕು' ಎಂಬ ಹಂಬದಿಂದ ತಮ್ಮದೇ ಆದ ರೀತಿಯಲ್ಲಿ ರಂಗಸೇವೆ ಮಾಡುತ್ತಿದ್ದಾರೆ ಕೃಷ್ಣಮೂರ್ತಿ.



ಸೀತಕಲ್ಲು ಕೃಷ್ಣಮೂರ್ತಿ
ಜನನ : 1940

ವಿಳಾಸ :
ಸೀತಕಲ್ಲು ಅಂಚೆ
ತುಮಕೂರು ತಾಲ್ಲೂಕು

ರಂಗಕಲಾವಿದ ಕೃಷ್ಣಮೂರ್ತಿ ರಂಗಪ್ರಿಯರಲ್ಲಿ ಸೀತಕಲ್ಲು ಕೃಷ್ಣಮೂರ್ತಿ ಎಂದೇ ಖ್ಯಾತರು. ಕಲಿತದ್ದು ಪಿ.ಯು.ಸಿ.ವರೆಗೂ. ಅರಸಿ ಬಂದ ಸರ್ಕಾರಿ ಕೆಲವನ್ನು ತಿರಸ್ಕರಿಸಿ, ರಂಗದ ಸೆಳೆತದಿಂದ ದಿವಂಗತ ಸುಬ್ಬಯ್ಯನಾಯ್ಡು ಅವರ ನಾಟಕ ಮಂಡಳಿ ಸೇರಿ ರಂಗಭೂಮಿಯ ಪ್ರಾಥಮಿಕ ಶಿಕ್ಷಣ ಪಡೆದರು. ಮೊದಲಿನಿಂದಲೂ ಇದ್ದ ಸಂಗೀತದ ಒಲವಿಗೆ ಒಂದು ಸ್ಪಷ್ಟ ರೂಪು ದೊರೆತದ್ದು ಇಲ್ಲಿಯೇ. ಮುಂದೆ ಜಮಖಂಡಿ ಕಂಪೆನಿ, ಗುಬ್ಬಿ ವೀರಣ್ಣ ನಾಟಕ ಮಂಡಳಿ, ಯೋಗಣ್ಣನವರ ನಾಟಕ ಮಂಡಳಿ, ಶ್ರೀಕಂಠಮೂರ್ತಿಯವರ ನಾಟಕ ಮಂಡಳಿಗಳಲ್ಲಿ ವೃತ್ತಿನಟರಾಗಿ ಪರಿಪೂರ್ಣತೆಯತ್ತ ಸಾಗಿದರು.

ಇವರು ಅಭಿನಯಿಸಿದ ಹಲವು ಪಾತ್ರಗಳು ಈಗಲೂ ಜನಪ್ರಿಯತೆಯನ್ನು ಉಳಿಸಿಕೊಂಡಿವೆ. ವಿಕ್ರಮಾದಿತ್ಯ, ಹರಿಶ್ಚಂದ್ರ, ಬೇಡರಕಣ್ಣಪ್ಪ, ಬಸವೇಶ್ವರ, ಎಚ್ಚಮ ನಾಯಕ, ಜಯವೀರ ಕೃಷ್ಣಮೂರ್ತಿಗೆ ಖ್ಯಾತಿ ತಂದಿತ್ತ ಕೆಲವು ಪಾತ್ರಗಳು.

1977ರ ವರೆಗೂ ಶ್ರೀಕಂಠೇಶ್ವರ ನಾಟಕ ಕಂಪೆನಿಯಲ್ಲಿದ್ದು, ಅನಿವಾರ್ಯ ಕಾರಣಗಳಿಂದಾಗಿ ಕಂಪೆನಿ ನಿಲ್ಲಿಸಿದಾಗ, ತಮ್ಮ ಹುಟ್ಟೂರಿನಲ್ಲೇ 'ಶ್ರೀ ಚಾಮುಂಡೇಶ್ವರಿ ವೃತ್ತಿ ಕಲಾವಿದರ ಸಂಘ' ವನ್ನು ಕಟ್ಟಿ, ಸಂಸ್ಥೆ ಸಂಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಕೃಷ್ಣಮೂರ್ತಿ.

ಸರಳರೂ, ಮಿತಭಾಷಿಗಳೂ, ಉತ್ತಮ ನಟರೂ, ನಿರ್ದೇಶಕರು, ಹರಿಕಥೆ ದಾಸರು, ಹಾರ್ಮೋನಿಯಂ ವಾದಕರೂ ಆಗಿ ಗಮನ ಸೆಳೆವ ಕೃಷ್ಣಮೂರ್ತಿಯವರಿಗೆ ಹಲವು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ಸರ್ಕಾರದಿಂದಲೂ ಜಿಲ್ಲಾ ಮಟ್ಟದಲ್ಲಿ ಸನ್ಮಾನಿತರಾಗಿದ್ದಾರೆ.



ಎಲ್. ಕೃಷ್ಣಪ್ಪ
ಜನನ : 4-5-1948

*ವಿಳಾಸ:*
ನಂ. 690, 'ಕ್ಯೂ' 12ನೇ ಅಡ್ಡರಸ್ತೆ
14ನೇ ಮುಖ್ಯರಸ್ತೆ, ಜೆ.ಪಿ. ನಗರ
2ನೇ ಹಂತ, ಬೆಂಗಳೂರು-78

ದಿ॥ ಲಕ್ಷ್ಮಯ್ಯನವರ ಪುತ್ರರಾದ ಎಲ್. ಕೃಷ್ಣಪ್ಪನವರು, ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮುಗಿಸಿ 1970 ರಲ್ಲಿ ಮೊದಲ ಬಾರಿಗೆ ನಾಟಕ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು.

ರಂಗಭೂಮಿಯ ಔಪಚಾರಿಕ ಶಿಕ್ಷಣಕ್ಕಾಗಿ ಆದ್ಯ ರಂಗಾಚಾರ್ಯರ ನಿರ್ದೇಶನದಲ್ಲಿ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದವರು ಏರ್ಪಡಿಸಿದ್ದ ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡರು. ನಂತರ ಸತೀಶ್ ಬಹದ್ದೂರ್ ಅವರ ನಿರ್ದೇಶನದಲ್ಲಿ ಚಿತ್ರ ತರಬೇತಿ ಪಡೆದು, ಹೆಗ್ಗೋಡಿನಲ್ಲಿ ಡಾ॥ ಯು.ಆರ್. ಅನಂತಮೂರ್ತಿಯವರ ನಿರ್ದೇಶನದಲ್ಲಿ ನಡೆದ ಸಂಸ್ಕೃತಿ ಶಿಬಿರದಲ್ಲಿ ಭಾಗವಹಿಸಿ ಸಾಂಸ್ಕೃತಿಕ ಚಟುವಟಿಕೆಗಳ ಬಗೆಗೆ ಹೆಚ್ಚಿನ ಅರಿವು ಪಡೆದರು.

ಪೂನಾದ ಫಿಲ್ಮ್ ಇನ್ಸ್‌ಟಿಟ್ಯೂಟ್, ನೀನಾಸಂ, ಕರ್ನಾಟಕ ನಾಟಕ ಅಕಾಡೆಮಿ ಹೀಗೆ ಅನೇಕ ಸಂಘ ಸಂಸ್ಥೆಗಳ ಜೊತೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಫ್ರಿಟ್ಸ್ ಬೆನವಿಟ್ಸ್, ಪ್ರಸನ್ನ, ಪೀಟರ್ ಬ್ರೂಕ್, ಎಂ.ಎಸ್. ಸತ್ಯು, ಜಿ.ವಿ. ಶಿವಾನಂದ್, ಬಿ.ವಿ. ಕಾರಂತ್, ನಾಗೇಶ್, ಪ್ರೊ॥ ಬಿ. ಚಂದ್ರಶೇಖರ್ ಮುಂತಾದ ರಂಗ ಧುರೀಣರ ಜೊತೆ ದುಡಿದ ಅನುಭವ ಇವರದು. ಟಿಪ್ಪುಸುಲ್ತಾನ್, ಪ್ರಚಂಡ ರಾವಣ, ದೇವದಾಸಿ, ಹಳ್ಳಿ ಹುಡುಗಿ, ಕೆಸರಿನ ಕಮಲ, ಅನುಕೂಲಕ್ಕೊಬ್ಬ ಅಣ್ಣ, ನೀಕೊಡೆ ನಾಬಿಡೆ, ತುಘಲಕ್, ಸದ್ದು ವಿಚಾರಣೆ ನಡೀತಿದೆ, ಸ್ವರ್ಗಕ್ಕೆ ಮೂರೇ ಬಾಗಿಲು, ಬಿರುಕು, ಸಂಕ್ರಾಂತಿ, ಈಡಿಪಸ್, ಜೋಕುಮಾರಸ್ವಾಮಿ, ಹುತ್ತವ ಬಡಿದರೆ, ಕತ್ತಲೆ ಬೆಳಕು, ತ್ರಿಶಂಕು, ದ್ರೌಪದಿ, ತೆರೆಗಳು, ಯಮಳ ಪ್ರಶ್ನೆ ಹೀಗೆ ಹಲವಾರು ಉತ್ತಮ ನಾಟಕಗಳಲ್ಲಿ ತಮ್ಮ ಪ್ರತಿಭೆ ತೋರಿದ್ದಾರೆ. ನಟರಾಗಿ, ನಿರ್ದೇಶಕರಾಗಿ, ರಂಗ ನಿರ್ವಾಹಕರಾಗಿ, ಬೆಳಕು ವಿನ್ಯಾಸ, ರಂಗವಿನ್ಯಾಸ, ಸಂಘಟಕ ಹೀಗೆ ರಂಗ ಭೂಮಿಯ ವಿವಿಧ ವಿಭಾಗಗಳಲ್ಲಿ ಪರಿಣತಿ ಪಡೆದು ಅನೇಕ ರಂಗ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಾಟಕೋತ್ಸವಗಳನ್ನು ನಡೆಸಿದ ಕೀರ್ತಿ ಇವರದು.

ಕಿರುತೆರೆ, ಬೆಳ್ಳಿತೆರೆಗಳಲ್ಲೂ ಕಾರ್ಯ ನಿರ್ವಹಿಸಿದ್ದಾರೆ. 1995-97ನೇ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಗೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲ ರಂಗ ಸಾಧನೆಗಾಗಿ ಕೃಷ್ಣಪ್ಪನವರಿಗೆ ರಾಜ್ಯ ನಾಟಕ ಅಕಾಡೆಮಿ 1999ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರಸ್ತುತ ಪುಸ್ತಕಗಳ ಪ್ರಕಾಶಕರಾಗಿ, 'ಮುಕ್ತ' ಹಾಗೂ 'ಈ ಮಾಸ ನಾಟಕ' ಎಂಬ ರಂಗ ಪತ್ರಿಕೆಗಳ ಸಂಪಾದಕರಾಗಿ ರಂಗಕ್ಷೇತ್ರಕ್ಕೆ ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಲ್. ಕೃಷ್ಣಪ್ಪ.



ಬಿ. ಎಂ. ಕೃಷ್ಣೇಗೌಡ

ಜನನ : 6-3-1941

'ಕಂಚಿನ ಕಂಠದ ಕಲಾವಿದ'ರೆಂದು ಗುರುತಿಸುವ ಕೃಷ್ಣೇಗೌಡರು ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಯ ಪರಿಚಿತ ನಟರು.

ಕೋಲಾರ ಜಿಲ್ಲೆಯ ಬೈರಸಂದ್ರ ಗ್ರಾಮ ಇವರ ಹುಟ್ಟೂರು. ತಂದೆ ಮುನೇಗೌಡರು. ಅವರು ಕೂಡ ಪೌರಾಣಿಕ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ತಂದೆಯಲ್ಲಿದ್ದ ಈ ಕಲೆ ಮಗನಲ್ಲೂ ಪ್ರವಹಿಸಿತು. ತಂದೆಯು ಅಭಿನಯದ ನಾಟಕಗಳು ಕೃಷ್ಣೇಗೌಡರಿಗೆ ನಾಟಕಗಳಲ್ಲಿ ಪಾತ್ರ ವಹಿಸಬೇಕೆಂಬ ಹಂಬಲ ನೀಡಿತು.

ನಾಟಕದ ಗೀಳು ಶಾಲಾ ಕಾಲೇಜು ದಿನಗಳಲ್ಲಿ ಮುಂದುವರಿದು ಹಲವಾರು ನಾಟಕಗಳಲ್ಲಿ ಪಾತ್ರವಹಿಸಿದರು. 1964ರಲ್ಲಿ ಬಿ.ಎ. ಪದವಿ ಪಡೆದರು. ನಂತರ ಕಾನೂನು ಕಾಲೇಜಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸೇರ್ಪಡೆ ಹೊಂದಿದರು. ಅಲ್ಲಿಯೂ ಇವರ ರಂಗಚಟುವಟಿಕೆಗಳು ಮುಂದುವರೆದು ಅಂದಿನ ಪ್ರತಿಷ್ಠಿತ ಉಲ್ಲಾಳ್ ಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕ ಪಡೆದರು.

ಮುಂದೆ 1966ರಲ್ಲಿ ಬೆಂಗಳೂರಿನ ಎ. ಜಿ. ಕಛೇರಿಯಲ್ಲಿ ಉದ್ಯೋಗಿಯಾಗಿ ಸೇರ್ಪಡೆ ಹೊಂದಿದರು. ಅಲ್ಲಿ ಅಬ್ಬೂರು ಜಯತೀರ್ಥರವರ ನಿರ್ದೇಶನದಲ್ಲಿ ಅರ್ಧ ಘಂಟೆ ನಾಟಕಗಳ ಪ್ರದರ್ಶನ ನೀಡಿದರು. ಆ ನಂತರ ಹವ್ಯಾಸಿ ರಂಗಭೂಮಿ ಪ್ರವೇಶಿಸಿ ಕನ್ನಡ ಸಾಹಿತ್ಯ ಕಲಾಸಂಘ, ಕಲಾ ಗಂಗೋತ್ರಿ ತಂಡಗಳ ನಾಟಕಗಳಲ್ಲಿ ನಟಿಸತೊಡಗಿದರು. ಅಬ್ಬೂರು ಜಯತೀರ್ಥರ ನಿರ್ದೇಶನದ ಮಾರೀಚನ ಬಂಧುಗಳು, ಆಷಾಢದ ಒಂದು ದಿನ, ಭೂಕಂಪದ ನಂತರ, ಮಹಾಸ್ವಾಮಿ, ಇಷ್ಟಾರ್ಥ, ಯಮನ ಸೋಲು ನಾಟಕಗಳಲ್ಲಿ, ಬಿ.ಸಿ. ಚಂದ್ರಶೇಖರ್ ನಿರ್ದೇಶನದ ಜೂಲಿಯಸ್ ಸೀಝರ್, ಪರಹಿತ ಪಾಷಾಣ, ಶ್ರೀನಿವಾಸ ಪ್ರಭು ನಿರ್ದೇಶನದ ಬೆಳ್ಳಿಗುಂಡು, ಕಲೆಗೊಂದು ಕೋಗಿಲೆ, ಉದ್ಭವ, ಸಿಕ್ಕು, ಸುರೇಂದ್ರನಾಥ್ ನಿರ್ದೇಶನದ ಒಂದು ಆಕಸ್ಮಿಕ ಸಾವು, ಈ ಮುಖದವರು, ಬಿ.ವಿ. ರಾಜಾರಾಂ ನಿರ್ದೇಶನದ ಮುಖ್ಯಮಂತ್ರಿ ಕೃಷ್ಣೇಗೌಡರು ಸಮರ್ಥ ಅಭಿನಯ ನೀಡಿದ ಕೆಲವು ನಾಟಕಗಳು.

ನಾಟಕಗಳಲ್ಲದೆ ಸಿನಿಮಾ ಜಗತ್ತಿಗೂ ಕೃಷ್ಣೇಗೌಡರು ಪಾದಾರ್ಪಣೆ ಮಾಡಿ ಎರಡು ಬಾರಿ ರಾಜ್ಯಪ್ರಶಸ್ತಿ ಗಳಿಸಿದ್ದಾರೆ. ರಂಗಭೂಮಿಗೆ ಸಲ್ಲಿಸಿದ ಸೇವೆಗಾಗಿ 1998ನೇ ಸಾಲಿನ ಮಾನು ಪ್ರಶಸ್ತಿಗೂ ಪಾತ್ರರಾಗಿದ್ದಾರೆ.



## ಕೇಶವ (ಕೇಶವುಲು)

ಜನನ : 1951

ವಿಳಾಸ :
ನಂ. 130, ಮೈನ್, 3ನೇ ಕ್ರಾಸ್, ಈಜಿಪುರ
ವಿವೇಕ್‌ನಗರ, ಬೆಂಗಳೂರು

ಆಂಧ್ರದ ನೆಲ್ಲೂರು ಜಿಲ್ಲೆಯ ನಿವಾಸಿಗಳಾದ ನರಸಯ್ಯ, ಅಕ್ಕಮ್ಮ ದಂಪತಿಗಳ ಮಗ ಕೇಶವ. ಕಲಿತದ್ದು 6ನೇ ತರಗತಿವರೆಗೆ. 1976 ರಲ್ಲಿ ರವೀಂದ್ರ ಕಲಾಕ್ಷೇತ್ರದ ಸೇವೆಗೆ ಸೇರಿದರು. ರಂಗನೇಪಥ್ಯದಲ್ಲಿ ಹೆಚ್ಚಿನ ಆಸಕ್ತಿ ಇದ್ದ ಕೇಶವ ಆರಂಭದಲ್ಲಿ ಅಪರೂಪದ ರಂಗಕರ್ಮಿ ಪದ್ಮಣ್ಣನವರೊಂದಿಗೆ ಹಲವಾರು ನಾಟಕಗಳಿಗೆ, ಕಾರ್ಯಕ್ರಮಗಳಿಗೆ ರಂಗಸಜ್ಜಿಕೆಯಲ್ಲಿ ಪಾಲ್ಗೊಂಡು ಕೆಲಸ ಕಲಿತರು.

ಹಿರಿಯ ರಂಗ ನಿರ್ದೇಶಕ ಆರ್. ನಾಗೇಶ್‌ರ ಪ್ರೇರಣೆ, ಪ್ರೋತ್ಸಾಹದಿಂದ ಹವ್ಯಾಸಿ ತಂಡಗಳ ನಾಟಕಗಳಿಗೆ ರಂಗ ಸಜ್ಜಿಕೆಯಲ್ಲಿ ನೆರವಾಗತೊಡಗಿದರು. 'ಸಮುದಾಯ' ತಂಡಕ್ಕೆ ಪ್ರಸನ್ನ ನಿರ್ದೇಶಿಸಿದ 'ತಾಯಿ' ನಾಟಕಕ್ಕೆ ಮೊದಲ ಬಾರಿಗೆ ರಂಗಸಜ್ಜಿಕೆ ಮಾಡಿದರು. ನಂತರ ಸಿ.ಜಿ.ಕೆ. ನಿರ್ದೇಶನವ ಒಡಲಾಳ, ಯಯಾತಿ, ನಾಟಕಗಳಿಗೆ, ಟಿ.ಎಸ್. ನಾಗಾಭರಣ ನಿರ್ದೇಶನದ ಸಂಗ್ಯಾ ಬಾಳ್ಯ, ಚಾಕ್‌ಲೇಟ್ ಸಿಪಾಯಿ, ಆರ್. ನಾಗೇಶ್ ನಿರ್ದೇಶನದ ಸಂದರ್ಭ, ಕದಡಿದ ನೀರು, ಚೋಮನ ದುಡಿ, ಸಿ.ಆರ್.ಸಿಂಹ ನಿರ್ದೇಶನದ ಒಥೆಲೋ, ಕಾಕನಕೋಟೆ, ತೊಘಲಕ್, ಅಶೋಕ್ ಬಾದರದಿನ್ನಿ ನಿರ್ದೇಶನದ ಉತ್ತಮ ಪ್ರಭುತ್ವ ಲೊಳಲೊಟ್ಟೆ, ರಾಜಾರಾಂ ನಿರ್ದೇಶನದ ಮುಖ್ಯಮಂತ್ರಿ, ಅಚಲಾಯತನ, ಬಿ. ಜಯಶ್ರೀ ನಿರ್ದೇಶನದ ಕರಿಮಾಯಿ, ಲಕ್ಷಾಪತಿ ರಾಜನಕಥೆ, ದಿ|| ಶಂಕರ್‌ನಾಗ್ ನಿರ್ದೇಶನದ ನೋಡಿಸ್ವಾಮಿ ನಾವಿರೋದೆ ಹೀಗೆ, ಅಂಜುಮಲ್ಲಿಗೆ, ನಾಗಮಂಡಲ ಹೀಗೆ ಬೆಂಗಳೂರಿನ ಸರಿಸುಮಾರು ಎಲ್ಲ ಹವ್ಯಾಸಿ ತಂಡಗಳ ನಾಟಕಗಳಿಗೆ ರಂಗಸಜ್ಜಿಕೆ ಮಾಡಿದ್ದಾರೆ.

ಸಮುದಾಯ, ಬೆನಕ, ಕಲಾ ಗಂಗೋತ್ರಿ, ನಾಟ್ಯ ಸಂಘ, ಪ್ರಯೋಗ ರಂಗ, ಸ್ಪಂದನ, ಸಂಕೇತ್, ರಂಗಸಂಪದ, ರಂಗ ನಿರಂತರ ಕೇಶವ ಕೆಲಸ ನಿರ್ವಹಿಸಿರುವ ಹವ್ಯಾಸಿ ತಂಡಗಳು.

ಇವರ ಮತ್ತೊಂದು ಹೆಗ್ಗಳಿಕೆಯೆಂದರೆ ಪ್ರಭಾತ್ ಕಲಾವಿದರ 'ಸಿಂಡ್ರೆಲಾ' ನೃತ್ಯರೂಪಕದ 500 ಮಿಕ್ಕು ಪ್ರದರ್ಶನಗಳಿಗೆ ಹಾಗೂ ಅರುಣ್ ಕಲಾವಿದರ 'ಸ್ನೋವೈಟ್' ನೃತ್ಯರೂಪಕದ 60ಕ್ಕೂ ಹೆಚ್ಚಿನ ಪ್ರದರ್ಶನಗಳಿಗೆ ರಂಗಸಜ್ಜಿಕೆ ನೀಡಿರುವುದು.

ಖ್ಯಾತ ಬೆಳಕು ತಜ್ಞರಾದ ವಿ. ರಾಮಮೂರ್ತಿಯವರೊಂದಿಗೆ ಕಲಾಕ್ಷೇತ್ರದ ಆರಂಭದ ದಿನಗಳಲ್ಲಿ ಬೆಳಕು ಸಹಾಯಕ ಕೆಲಸ ಮಾಡಿದ್ದಾರೆ. ತಮ್ಮ ಸೇವಾ ಅವಧಿಯ 25 ವರ್ಷಗಳನ್ನು ಕಲಾಕ್ಷೇತ್ರದಲ್ಲೇ ಕಳೆದಿರುವ ಕೇಶವ 'ಕಲಾಕ್ಷೇತ್ರವೇ ಕಲಾದೇಗುಲ' ವೆಂದು ನಿಷ್ಠೆಯಿಂದ ದುಡಿಯುತ್ತಿರುವ ಶ್ರಮಜೀವಿ.

100 ಕ್ಕೂ ಹೆಚ್ಚಿನ ನಾಟಕಗಳಿಗೆ ರಂಗಸಜ್ಜಿಕೆ ಮಾಡಿರುವ ಕೇಶವ ಅವರ ಪ್ರತಿಭೆಗೆ ಮನ್ನಣೆಯಾಗಿ ಕರ್ನಾಟಕ ನಾಟಕ ಅಕಾಡೆಮಿ 1999ರ ಸಾಲಿನ 'ಪದ್ಮಣ್ಣ ಶ್ರಮ ಪ್ರಶಸ್ತಿ' ನೀಡಿ ಗೌರವಿಸಿದೆ.



## ಕೋಮಲಮ್ಮ

ಜನನ : 21-11-1940

*ವಿಳಾಸ :*

ಕೊಟ್ಟೂರು
ಕೂಡ್ಲಿಗಿ ತಾಲ್ಲೂಕು
ಬಳ್ಳಾರಿ ಜಿಲ್ಲೆ

ಕೋಮಲಮ್ಮ ವೃತ್ತಿ ರಂಗಭೂಮಿ ಕಲಾವಿದೆ. 4ನೇ ತರಗತಿವರೆಗೆ ಕಲಿತು ಹೊಟ್ಟೆಪಾಡಿಗಾಗಿ ಬಾಲನಟಿಯಾಗಿ ರಂಗಭೂಮಿ ಪ್ರವೇಶಿಸಿದರು. ಆಗ ಹೆಸರಾಂತ ಕಲಾವಿದರೆನಿಸಿದ್ದ ಕೊಟ್ಟೂರು ಚನ್ನಬಸಪ್ಪನವರ ಶಿಷ್ಯತ್ವದಲ್ಲಿ 'ಕೊಟ್ಟೂರೇಶ್ವರ ಮಹಾತ್ಮೆ' ನಾಟಕದಲ್ಲಿ ಬಾಲ 'ಕೊಟ್ಟೂರೇಶ್ವರ'ನ ಪಾತ್ರಧಾರಿಯಾಗಿ ನಟಿಸಿದರು.

ಮುಂದೆ ಏಣಗಿ ಕಾಶೀಮ ಸಾಹೇಬ ಮಾಸ್ತರ ಗರಡಿಯಲ್ಲಿ ಉತ್ತಮ ಕಲಾವಿದೆಯಾಗಿ ರೂಪುಗೊಂಡು, ರಾಜ್ಯದ ಹೆಸರಾಂತ ನಾಟಕ ಕಂಪನಿ ಸುಳ್ಯದ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘಕ್ಕೆ 1964ರಲ್ಲಿ ಸೇರಿದರು. ನಂತರ ಗುಡಗೇರಿಯ ಶ್ರೀ ಸಂಗಮೇಶ್ವರ ನಾಟ್ಯ ಸಂಘ, ಇಳಕಲ್‌ನ ವಿಜಯ ಕಲಾ ನಾಟ್ಯ ಸಂಘ, ಪಟ್ಟದಕಲ್‌ನ ಬಸವೇಶ್ವರ ನಾಟ್ಯಸಂಘ, ಕಡಪಟ್ಟಿಯ ಗುರುಪ್ರಸಾದ ನಾಟ್ಯಸಂಘ, ಗದಗ್‌ನ ವೀರೇಶ್ವರ ನಾಟ್ಯ ಸಂಘ, ಕಮತಗಿಯ
ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಮುಂತಾದ ಕಂಪನಿಗಳ ನಾಟಕಗಳಲ್ಲಿ ಗಮನ ಸೆಳೆದ ನಟನೆ ನೀಡಿದ್ದಾರೆ.

ಪ್ರಸ್ತುತ ಕೆ.ಬಿ.ಆರ್. ಡ್ರಾಮಾ ಕಂಪೆನಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



## ಮೈಷುಗರ್ ಗಂಗಾಧರ್

ವಿಳಾಸ :
ನಂ.154, 3ನೇ ಮುಖ್ಯರಸ್ತೆ,
8ನೇ ಅಡ್ಡರಸ್ತೆ, ಚಾಮರಾಜಪೇಟೆ
ಬೆಂಗಳೂರು - 18

ಗಂಗಾಧರ್ ವೃತ್ತಿಯಲ್ಲಿ ಕಾರ್ಮಿಕರಾದರೂ ಪ್ರವೃತ್ತಿಯಲ್ಲಿ ನಾಟಕ ಅಭಿನಯದ ಗೀಳು ಹಚ್ಚಿಕೊಂಡವರು.

ಬಿ.ಕಾಂ. ಪದವೀಧರರಾದ ಗಂಗಾಧರ್ ಮೈಷುಗರ್ ಕಾರ್ಖಾನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಂಗಭೂಮಿ, ಚಲನಚಿತ್ರ, ದೂರದರ್ಶನಗಳಲ್ಲಿ ಕಳೆದ 20 ವರ್ಷಗಳಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳಲ್ಲಿ ಸುಪ್ತವಾಗಿರುವ ತಮ್ಮ ಪ್ರತಿಭೆಯನ್ನು ಹೊರಗೆಡಹುತ್ತಿದ್ದಾರೆ.

ಶಿಡ್ಲುಪುರಿ, ಅಲಾಲ್‌ಟೋಪಿ, ಶಂಖವಾದ್ಯ, ಸಂತೆಯಲ್ಲಿ ನಿಂತ ಕಬೀರ, ಬಂಜೆ ತೊಟ್ಟಿಲು, ಪ್ರೇಮ ಪತನ, ಸೌಭಾಗ್ಯ ಸಿಂಧೂರ ಮುಂತಾದ ಸಾಮಾಜಿಕ ನಾಟಕಗಳಲ್ಲಿ, ಕಲಿ ಕಂಠೀರವ, ಎಚ್ಚಮನಾಯಕ, ಸಾಮ್ರಾಟ್ ಅಶೋಕ, ಕಿತ್ತೂರು ರಾಣಿ ಚೆನ್ನಮ್ಮ, ರಾಜಾ ಜಗದೇವರಾಯ, ಛತ್ರಪತಿ ಶಿವಾಜಿ, ಅಮೋಘವರ್ಷ ನೃಪತುಂಗ, ಕಳ್ಳಭಂಟ ರಾಮಾ ಇತ್ಯಾದಿ ಐತಿಹಾಸಿಕ ನಾಟಕಗಳಲ್ಲಿ ಸತ್ಯಹರಿಶ್ಚಂದ್ರ, ಪ್ರಚಂಡ ರಾವಣ, ರಕ್ತರಾತ್ರಿ, ಭಕ್ತ ಕನಕದಾಸ, ಚಂದ್ರಕುಲ ಚಕ್ರೇಶ್ವರ ಇತ್ಯಾದಿ ಪೌರಾಣಿಕ ನಾಟಕಗಳಲ್ಲಿ ತಮ್ಮ ಕಲಾಪ್ರತಿಭೆಯನ್ನು ತೋರಿದ್ದಾರೆ.

13 ರಿಂದ 15 ವರ್ಷದ ಬಾಲಕರಿಗಾಗಿ 'ಪ್ರಚಂಡ ರಾವಣ' ನಾಟಕವನ್ನು ನಿರ್ದೇಶಿಸಿರುವುದು ಇವರ ಮತ್ತೊಂದು ಸಾಧನೆ.



## ಡಿ. ಚೇತನಪ್ರಸಾದ್

ವಿಳಾಸ :
ದೊಡ್ಡ ಪಾಪಯ್ಯ
ಊರುಕುಂಟೆ ಮಿಟ್ಟೂರು
ಮುಳಬಾಗಿಲು
ಕೋಲಾರ ಜಿಲ್ಲೆ

ವೃತ್ತಿಯಿಂದ ಸರ್ಕಾರಿ ನೌಕರರು ಪ್ರವೃತ್ತಿಯಲ್ಲಿ ರಂಗಕಲಾವಿದರಾಗಿ ನಿರಂತರವಾಗಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಜಾನಪದ ನಾಟಕಗಳನ್ನು ಆಯೋಜಿಸುವುದು, ನಿರ್ದೇಶಿಸುವುದರೊಂದಿಗೆ ನಟಿಸುತ್ತ ಸಂಪೂರ್ಣವಾಗಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಚೇತನಪ್ರಸಾದ್.

ಚೇತನಪ್ರಸಾದ್ ಕೋಲಾರ ಜಿಲ್ಲೆಗೆ ಸೇರಿದವರು. ತಂದೆ ಎ. ದೊಡ್ಡಪಾಪಯ್ಯ ಕಲಾವಿದರು. ತಾಯಿ ಮುನಿವೆಂಕಟಮ್ಮ. ಹತ್ತನೇ ವಯಸ್ಸಿಗೆ 'ಸತ್ಯಹರಿಶ್ಚಂದ್ರ' ನಾಟಕದಲ್ಲಿ 'ಲೋಹಿತಾಶ್ವ' ನಾಗಿ ರಂಗಕ್ಕೆ ಪರಿಚಿತರಾದರು. ಅದೇ ನಾಟಕದಲ್ಲಿ ತಂದೆ ಹರಿಶ್ಚಂದ್ರನಾಗಿ, ಸೋದರಮಾವ ಗುರಪ್ಪನವರು ಚಂದ್ರಮತಿಯ ಪಾತ್ರವನ್ನು ಮಾಡಿದ್ದರು. ಕಲಾವಿದ ಕುಟುಂಬ ವಾತಾವರಣ ಚೇತನಪ್ರಸಾದ್ ಅವರನ್ನು ಕಳೆದ 30 ವರ್ಷಗಳಿಂದ ರಂಗಕ್ಕೆ ಅಂಟಿಕೊಳ್ಳುವಂತೆ ಮಾಡಿದೆ.

ಕೋಲಾರದ ನವೋದಯ ಕನ್ನಡ ಸಂಘದ ಅಧ್ಯಕ್ಷರಾಗಿ, ಉದಯಭಾನು ಕಲಾನಿಕೇತನದ ಅಧ್ಯಕ್ಷರಾಗಿ, ಕಾರ್ಮಿಕ ಇಲಾಖೆಯ ಕನ್ನಡ ಕಲಾ ಸಂಘದ ಅಧ್ಯಕ್ಷರಾಗಿ, ಭಾರ್ಗವ ಕಲಾನಿಕೇತನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ಜಿ. ಜಯಣ್ಣ**

ಜನನ : 18-6-1939

ವಿಳಾಸ :
ಶ್ರೀ ಗಂಗಾಧರೇಶ್ವರ ಕ್ಷೇತ್ರ
ಗುಡ್ಡೇನಹಳ್ಳಿ ಅಂಚೆ - 572227
ತುರುವೇಕೆರೆ ತಾಲ್ಲೂಕು
ತುಮಕೂರು ಜಿಲ್ಲೆ

ಕಳೆದ ನಾಲ್ಕು ದಶಕಗಳಿಂದ ಗ್ರಾಮೀಮ ಪ್ರದೇಶಗಳಲ್ಲಿ ರಂಗಕಲೆಯನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ ಜಯಣ್ಣ.

ತುರುವೇಕೆರೆ ತಾಲ್ಲೂಕಿನ ಗುಡ್ಡೇನಹಳ್ಳಿ ಗ್ರಾಮದ ಗಂಗಪ್ಪ, ಕೆಂಪಮ್ಮನವರ ಮಗನಾಗಿ ಜನಿಸಿದ ಜಯಣ್ಣ ಕಲಿತದ್ದು 4ನೇ ತರಗತಿವರೆಗೆ.

ತಮ್ಮ 18ನೇ ವಯಸ್ಸಿನಲ್ಲಿ ದಾನಶೂರ ಕರ್ಣ ನಾಟಕದ 'ವೃಷಿಕೇತು' ಪಾತ್ರಧಾರಿಯಾಗಿ ಬಣ್ಣ ಬಳಿದುಕೊಂಡು ಸ್ವಗ್ರಾಮದವರೆಗೆ ಅಚ್ಚರಿ ಮೂಡಿಸಿದರು. ಅದೇ ನಾಟಕದಲ್ಲಿ ನಾರದನ ಪಾತ್ರದಲ್ಲೂ ಮಿಂಚಿದರು. ಇವರ ತಂದೆ ಗಂಗಪ್ಪನವರು ಕಲಾವಿದರೇ. ಅವರ ನಿರ್ದೇಶನದ 'ಸುಭದ್ರ ಕಲ್ಯಾಣ' ನಾಟಕದಲ್ಲಿ ಅಭಿನಯಿಸಿದ್ದಾರೆ.

ಕುರುಕ್ಷೇತ್ರ, ಸಂಪೂರ್ಣ ರಾಮಾಯಣ, ತ್ರಿಜನ್ಮಮೋಕ್ಷ ನಾಟಕಗಳಲ್ಲಿ ಶ್ರೀಕೃಷ್ಣ, ಆಂಜನೇಯ ಪಾತ್ರಧಾರಿಯಾಗಿ ಉತ್ತಮ ನಟನೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ತಮ್ಮ ಹುಟ್ಟೂರಿನಲ್ಲೇ ಶ್ರೀಗಂಗಾಧರೇಶ್ವರ ಕಲಾ ಸಂಘವನ್ನು ಸ್ಥಾಪಿಸಿ ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದಾರೆ. ರಂಗಗೀತೆ, ಹರಿಕಥೆ ರಂಗದಲ್ಲೂ ಉತ್ತಮ ಪರಿಶ್ರಮ ಹೊಂದಿದ್ದಾರೆ.

'ಕಲಾಚತುರ' ಎಂಬ ಬಿರುದಿಗೆ ಪಾತ್ರರಾಗಿದ್ದ ಜಯಣ್ಣ 'ನನ್ನ ಕೊನೆ ಉಸಿರುವವರೆಗೂ ಕಲಾ ಸೇವೆ ಮಾಡಬೇಕು' ಎಂಬ ಹಂಬಲ ಉಳ್ಳವರಾಗಿದ್ದಾರೆ.



ಜೀರ್‍ರ ಎರ್ರೆಪ್ಪ
ಜನನ : 1-1-1945

ವಿಳಾಸ :
ಚೇಳ್ಳಗುರ್ಕಿ ಗ್ರಾಮ
ಬಳ್ಳಾರಿ ಜಿಲ್ಲೆ - 583111

ಶ್ರೀಯುತ ಜೀರ್‍ರ ನಾಗಣ್ಣನವರ ಮಗನಾಗಿ ಜನಿಸಿದ ಜೀರ್‍ರ ಎರ್ರೆಪ್ಪನವರು ಬಾಲ್ಯದಲ್ಲಿಯೇ ರಂಗಭೂಮಿಗೆ ಪಾದಾರ್ಪಣೆ ಮಾಡಿದರು. ಬಾಲನಟನಾಗಿ ಅಭಿನಯಿಸಿ ಅನೇಕರ ಮನಸ್ಸನ್ನು ಗೆದ್ದರು.

ರಕ್ತರಾತ್ರಿ, ಕುರುಕ್ಷೇತ್ರ, ಪಾಂಡವರ ಪಾಣಿಪಥ, ಭಕ್ತ ಸುಧನ್ವ, ಕೃಷ್ಣಗಾರುಡಿ, ಶಿವಜಲಂಧರ, ರತ್ನಮಾಂಗಲ್ಯ, ಅಣ್ಣತಂಗಿ ಹೀಗೆ ಹಲವಾರು ನಾಟಕಗಳಲ್ಲಿ ನಾಯಕನಾಗಿ, ಪೋಷಕ ನಟನಾಗಿ, ಹಾಸ್ಯನಟನಾಗಿ ವೈವಿಧ್ಯಮಯ ಪಾತ್ರಗಳಲ್ಲಿ ಮಿಂಚಿದರು. ಯಕ್ಷಗಾನದಲ್ಲೂ ಪರಿಣತಿ ಪಡೆದವರು. ಸಂಪೂರ್ಣ ರಾಮಾಯಣ, ಗಿರಿಜಾ ಕಲ್ಯಾಣ, ರತಿ ಕಲ್ಯಾಣ ಇನ್ನೂ ಮುಂತಾದ ಬಯಲಾಟಗಳಲ್ಲಿ ಉತ್ತಮ ನಟನಾಗಿ ಜನರ ಅಭಿಮಾನ ಪಡೆದಿದ್ದಾರೆ. ಬಿಡುವಿನ ವೇಳೆಯಲ್ಲಿ ಡೋಲಾಕ್ ಬಾರಿಸುವುದು ಇವರ ಮತ್ತೊಂದು ಹವ್ಯಾಸ.

ವೃತ್ತಿಯಿಂದ ಮಣ್ಣಿನ ಸೇವೆಗೈಯುತ್ತಾ, ಪ್ರವೃತ್ತಿಯಿಂದ ಕಲಾಸೇವೆ ಮಾಡುತ್ತಿದ್ದಾರೆ ಎರ್ರೆಪ್ಪ.



**ಜಗದೀಶ್**

ಜನನ : 1975

*ವಿಳಾಸ :*

ಚಿಕ್ಕಜಾಲ,

ಬೆಂಗಳೂರು (ಉತ್ತರ) - 562157

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚಿಕ್ಕಜಾಲ ಗ್ರಾಮದ ಜಗದೀಶ್ ಕಾಲೇಜು ರಂಗಭೂಮಿಯಲ್ಲಿ ಸಾಕಷ್ಟು ಪರಿಚಿತರು. ಹವ್ಯಾಸಿ ರಂಗ ಭೂಮಿಯಲ್ಲಿ ಯುವ ಕಲಾವಿದರ ಪ್ರವೇಶಕ್ಕೆ ಹೆಜ್ಜೆಯಾಗುವ ಕಾಲೇಜು ಉತ್ಸವದ ರೂವಾರಿಯಾಗಿ ಎಂಟು ವರ್ಷಗಳಿಂದ ಸಂಘಟಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಸ್.ಜೆ.ಆರ್.ಸಿ. ಕಾಲೇಜಿನ ವಿದ್ಯಾರ್ಥಿಯಾಗಿ ರಂಗಭೂಮಿಗೆ ಪಾದಾರ್ಪಣೆ ಮಾಡಿದ ಜಗದೀಶ್ ನಂತರದ ದಿನಗಳಲ್ಲಿ ವೇಣುಗೋಪಾಲ್‌ರೊಂದಿಗೆ ರಂಗಭೂಮಿಯ ಕಮಿಟೆಡ್ ಕಲಾವಿದರಾದರು. ಯಾವುದೇ ತಂಡದ ನಾಟಕವಾದರು ಅಲ್ಲಿ ಹಾಜರಾಗುವ ಜಗದೀಶ್ ನಟರಾಗಿ, ವಸ್ತ್ರವಿನ್ಯಾಸಕರಾಗಿ, ರಂಗಪರಿಕರ ನಿರ್ಮಾಣದಲ್ಲೂ ಪಳಗಿದವರು. ಮಂಟೆಸ್ವಾಮಿ ಕಥಾಪ್ರಸಂಗ, ಸಂತೆಯಲ್ಲಿ ನಿಂತ ಕಬೀರ, ಮಲ್ಲಮ್ಮನ ಮನೆ ಹೋಟ್ಲು, ಸೊನ್ನಲಿಗೆ ಸಿದ್ಧರಾಮ, ಪರಿಹಾರ, ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಿ.ಜಿ.ಕೆ. ಸುರೇಶ್‌ಆನಗಳ್ಳಿ, ವಾಲ್ಟರ್ ಡಿ ಸೋಜ, ಗೋಪಾಲಕೃಷ್ಣ ನಾಯರಿ ಮುಂತಾದ ಯಶಸ್ವಿ ನಿರ್ದೇಶಕರೊಂದಿಗೆ ನಟರಾಗಿ ಅಭಿನಯಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದೂರದರ್ಶನ ಧಾರವಾಹಿಗಳ ಸಹನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಬೀದಿ ನಾಟಕಗಳಲ್ಲಿ ಸಾಕಷ್ಟು ಕೆಲಸ ಮಾಡಿರುವ ಜಗದೀಶ್ ಸ್ವತಃ ಬೀದಿನಾಟಕಗಳ ಸಂಘಟಕರಾಗಿ ಹಲವು ಬೀದಿ ನಾಟಕ ಉತ್ಸವಗಳನ್ನು ನಿರ್ವಹಿಸಿದ್ದಾರೆ. ಮತ್ತೊಬ್ಬ ಕ್ರೈಸ್ತ, ಕಳ್ಳಬುಂಡೆ, ವಿದ್ಯುತ್ ವಿದ್ಯುತ್, ಬೀದಿನಾಟಕಗಳ ಯಶಸ್ವಿ ನಟರು.




ಚಿಂತಕಾಯಿಲ ತಿಪ್ಪೇರುದ್ರಪ್ಪ

ಹಾಸ್ಯ ಪಾತ್ರವನ್ನು ಲೀಲಾಜಾಲವಾಗಿ ಅಭಿನಯಿಸಿ, ಪ್ರೇಕ್ಷಕರ ನಕ್ಕು ನಗಿಸುವ ಕಲಾವಿದರಾಗಿದ್ದಾರೆ ಚೇಳ್ಳಗುರ್ಕಿ ಗ್ರಾಮದ ಚಿಂತಕಾಯಿಲ ತಿಪ್ಪೇರುದ್ರಪ್ಪನವರು. ಇವರ ತಂದೆ ಚಿಂತಕಾಯಿಲ ಲಕ್ಷ್ಮಪ್ಪನವರು ಬಳ್ಳಾರಿ ಪ್ರಾಂತಕ್ಕೆಲ್ಲಾ ಹೆಸರು ವಾಸಿಯಾದ ನಟರಾಗಿದ್ದರು. ತಂದೆಯಂತೆಯೇ ಮಗನೂ ಕಲಾರಂಗಕ್ಕೆ ಬಾಲ್ಯದಿಂದಲೇ ಆಕರ್ಷಿತರಾದರೂ, ಹೆಚ್ಚಾಗಿ ಹಾಸ್ಯನಟ ಪಾತ್ರಧಾರಿಯಾಗಿಯೇ ಗಮನ ಸೆಳೆದಿದ್ದಾರೆ.

ಹೆಣ್ಣಿಗೊಂದು ಗಂಡು, ಅಣ್ಣತಂಗಿ, ಮದುವೆ ಮಾರ್ಕೆಟ್, ಕಲಿಯುಗದ ಶಕುನಿ, ತಾಯಿಗೆ ತಕ್ಕ ಮಗ ಹೀಗೆ ಅನೇಕಾನೇಕ ನಾಟಕಗಳಲ್ಲಿ ಹಾಸ್ಯಪ್ರಧಾನ ಪಾತ್ರಗಳಲ್ಲಿ ಜನರನ್ನು ರಂಜಿಸಿದ್ದಾರೆ. ಕೆಲ ನಾಟಕಗಳಲ್ಲಿ ಸ್ತ್ರೀಪಾತ್ರವನ್ನು ಸಹ ಮಾಡಿದ್ದಾರೆ. ಹಲವಾರು ಬಯಲು ನಾಟಕಗಳಲ್ಲೂ ಅಭಿನಯಿಸಿದ ಅನುಭವ ಹೊಂದಿದ್ದಾರೆ.

*ವಿಳಾಸ :*
S/o ದಿ|| ಚಿಂತಕಾಯಿಲ ಲಕ್ಷ್ಮಪ್ಪ
ಚೇಳ್ಳಗುರ್ಕಿ
ಬಳ್ಳಾರಿ ಜಿಲ್ಲೆ - 588111



ಜಿ. ತಿಮ್ಮಯ್ಯ

ಜನನ : 1952

ವಿಳಾಸ :
ಚಂದನ ಹೊಸಹಳ್ಳಿ, ದಾಬಸ್‌ಪೇಟೆ ಪೋಸ್ಟ್
ನೆಲಮಂಗಲ ತಾಲ್ಲೂಕು
ಬೆಂಗಳೂರು ಜಿಲ್ಲೆ

ಸ್ಟೇಟ್ ಬ್ಯಾಂಕ್ ಇಂಡಿಯಾದ ನೌಕರರಾಗಿರುವ ಜಿ. ತಿಮ್ಮಯ್ಯನವರು ಹವ್ಯಾಸಿ ರಂಗ ಕಲಾವಿದರು. ತಂದೆ ದಿವಂಗತ ಗಂಗಯ್ಯನವರೂ ರಂಗಭೂಮಿ ನಟರಾಗಿದ್ದು, ತಮ್ಮ 14ನೇ ವಯಸ್ಸಿನಲ್ಲಿ ಭಕ್ತ ಪ್ರಹ್ಲಾದನಾಗಿ ರಂಗಕ್ಕೆ ಪಾದಾರ್ಪಣೆ ಮಾಡಿದರು. ನಂತರ ರಾಜಾ ವಿಕ್ರಮದಲ್ಲಿ ವಿಕ್ರಮನಾಗಿ, ರಾಜಾ ಸತ್ಯವ್ರತದ ಸತ್ಯವ್ರತನಾಗಿ, ರಾಮಾಯಣದ ಭರತನಾಗಿ, ಕುರುಕ್ಷೇತ್ರದ ಕೃಷ್ಣ, ಅರ್ಜುನ, ಅಭಿಮನ್ಯು ಪಾತ್ರಗಳಲ್ಲಿ ನಟಿಸಿದ್ದಾರೆ.

ಇದುವರೆಗೂ ಸುಮಾರು 75ಕ್ಕೂ ಹೆಚ್ಚು ನಾಟಕಗಳಲ್ಲಿ ನಟಿಸಿರುವ ತಿಮ್ಮಯ್ಯ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ 'ನಲ್ಲತಂಗ' ನಾಟಕಕ್ಕೆ ಉತ್ತಮ ನಟನಾ ಪ್ರಶಸ್ತಿ ಪಡೆದಿದ್ದಾರೆ. ಬ್ಯಾಂಕ್ ನೌಕರರ ನಾಟಕೋತ್ಸವಗಳಲ್ಲೂ ಉತ್ತಮ ನಟನೆಗೆ ಪ್ರಶಸ್ತಿ ಪುರಸ್ಕಾರವನ್ನು ಪಡೆದಿದ್ದಾರೆ.

'ಬಸವ ಕಲಾ ನಿಕೇತನ' ಸಂಸ್ಥೆಯ ಅಧ್ಯಕ್ಷರಾಗಿ ಹಲವಾರು ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡು, ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದ್ದಾರೆ ತಿಮ್ಮಯ್ಯ.



## ದತ್ತಾತ್ರೇಯ ಅರಳೀಕಟ್ಟೆ

*ವಿಳಾಸ :*
ಪುತ್ಥಲೀ,
2, 6ನೇ ಮುಖ್ಯರಸ್ತೆ,
6ನೇ ಅಡ್ಡರಸ್ತೆ, ಬನಶಂಕರಿ 3ನೇ ಹಂತ,
ಬಾಲಾಜಿ ಕಲ್ಯಾಣ ಮಂಟಪದ ಸಮೀಪ
ಬೆಂಗಳೂರು - 85

ಶೃಂಗೇರಿ ಸಮೀಪದ ಅರಳೀಕಟ್ಟೆ ದತ್ತಾತ್ರೇಯ ಅರಳೀಕಟ್ಟೆಯವರ ಜನ್ಮಸ್ಥಳ. ಸುಸಂಸ್ಕೃತ ಮನೆತನಕ್ಕೆ ಸೇರಿದ ಸ್ವಾತಂತ್ರ್ಯ ಹೋರಾಟಗಾರ ಅರಳೀಕಟ್ಟೆ ರಾಮರಾಯರು ಮತ್ತು ಲಲಿತಮ್ಮ ಇವರ ತಂದೆ ತಾಯಿಯರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ., ಬಿ.ಎಡ್. ಪದವಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ., ಎಂ.ಎಡ್. ಪದವಿಗಳನ್ನು ಗಳಿಸಿ ಆರ್.ವಿ. ಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದತ್ತಾತ್ರೇಯ ವಿದ್ಯಾರ್ಥಿ ದೆಸೆಯಿಂದಲೇ ರಂಗಭೂಮಿಗೆ ಪರಿಚಿತರು. ಕಾಲೇಜು ದಿನಗಳಲ್ಲಿ ಮೈಸೂರು ವಿ.ವಿ.ಯನ್ನು ನಾಟಕ ಕ್ಷೇತ್ರದಲ್ಲಿ ಪ್ರತಿನಿಧಿಸುವ ಅವಕಾಶ ದೊರೆತು, ರಂಗದ ನಂಟು ಬೆಳೆಯಿತು. 1974ರಿಂದ ಬೆಂಗಳೂರು ಹವ್ಯಾಸಿ ರಂಗಭೂಮಿಯೊಂದಿಗೆ ನಿಕಟ ಸಂಬಂಧ ಬೆಳೆಸಿಕೊಂಡಿದ್ದಾರೆ. ಆಧುನಿಕ ನಾಟಕಕಾರರಾದ ಪರ್ವತವಾಣಿ ಹಾಗೂ ಬಿ.ಎಸ್. ನಾರಾಯಣರಾವ್ ಅವರೊಡನೆ ಹುತ್ತದಲ್ಲಿ ಹುತ್ತ, ಶಾಕುಂತಲ, ಮಣ್ಣಿನ ಬಂಡಿ ಮೊದಲಾದ ನಾಟಕಗಳಲ್ಲಿ ನಟಿಸಿದ್ದಾರೆ. ನಟನೆಯೊಂದಿಗೆ ರಂಗ ನೇಪಥ್ಯದಲ್ಲೂ ಇವರಿಗೆ ಅಪಾರ ಆಸಕ್ತಿ ಇದೆ. ಇವರೇ ಬರೆದು ನಿರ್ದೇಶಿಸಿದ 'ಸಂಭವಾಮಿ ಯುಗೇ ಯುಗೇ' ಹಾಗೂ 'ಇಂದ್ರಶಾಪ' ಪೌರಾಣಿಕ ನಾಟಕಗಳು ಯಶಸ್ವಿ ಪ್ರಯೋಗವೆನಿಸಿಕೊಂಡಿವೆ. ಅಂತೆಯೇ ಕಲಬೆರಕೆ, ಪರಸರ ಮಾಲಿನ್ಯಗಳನ್ನೊಳಗೊಂಡ ಹಲವಾರು ಮೌಲಿಕ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ದತ್ತಾತ್ರೇಯ ಅವರ ಪ್ರಮುಖ ಸಾಧನೆಯೆಂದರೆ ಇಂದು ಮರೆಯಾಗುತ್ತಿರುವ ಪ್ರಾಚೀನ, ಸಾಂಪ್ರದಾಯಿಕ ಬೊಂಬೆಯಾಟವನ್ನು ಪುನರುತ್ಥಾನಗೊಳಿಸುವುದರ ದಿಟ್ಟಹೆಜ್ಜೆ. ದೇಶ ವಿದೇಶಗಳಲ್ಲಿ ಬೊಂಬೆಯಾಟದ ಪ್ರದರ್ಶನ ನೀಡಿದ್ದಾರೆ. ಇರಾನಿನಲ್ಲಿ ನಡೆದ ವಿಶ್ವ ಬೊಂಬೆ ಮೇಳದಲ್ಲಿ SAARC ಹಾಗೂ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ ದೇಶಕ್ಕೆ ಕೀರ್ತಿ ತಂದಿದ್ದಾರೆ. ಶ್ರೀಕೃಷ್ಣ ತುಲಾಭಾರ, ಲಂಕಾದಹನ, ಕುಮಾರ ಸಂಭವ, ಶ್ರೀಕೃಷ್ಣ ದಿಗ್ವಿಜಯ ನಾಟಕಗಳನ್ನು ಬೊಂಬೆಯಾಟ ಕ್ಷೇತ್ರಕ್ಕೆ ಸಮರ್ಥವಾಗಿ ಅಳವಡಿಸಿದ್ದಾರೆ.

ಅರಳೀಕಟ್ಟೆಯವರ ಕಲಾ ವೈಖರಿಗಳನ್ನು ಗುರುತಿಸಿ, ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದೆ. ರಾಜ ಶಿಕ್ಷಣ ಮತ್ತು ಸಂಶೋಧನಾ ಇಲಾಖೆಯಿಂದ ಪ್ರಶಸ್ತಿ ದೊರೆತಿದೆ 1998ರ ಜುಲೈನಲ್ಲಿ ಸಿ.ಸಿ.ಆರ್.ಟಿ. ರಾಷ್ಟ್ರಪ್ರಶಸ್ತಿ ಸ್ವೀಕರಿಸಿದ್ದಾರೆ. ಬಂಗಶ್ರೀಯಿಂದ 'ಕಲಾರತ್ನ' ಪ್ರಶಸ್ತಿಗೂ ಪಾತ್ರರಾಗಿದ್ದಾರೆ. ಅಮೆರಿಕನ್ ಬಯಾಗ್ರಫಿಕಲ್ ಇನ್‌ಸ್ಟಿಟ್ಯೂಟ್‌ನ ವರ್ಷದ ವ್ಯಕ್ತಿ ಪ್ರಶಸ್ತಿ, ಏಷಿಯಾ ಫೆಸಿಫಿಕ್ ಮ್ಯಾನ್ ಆಫ್ ಆರ್ಟ್ ಮತ್ತು ಕಲ್ಚರ್ ಪ್ರಶಸ್ತಿ ಹೀಗೆ ಪ್ರಶಸ್ತಿಗಳ ಸರಮಾಲೆಯನ್ನೇ ತಮ್ಮ ಕೊರಳಿಗೆ ಧರಿಸಿದ್ದಾರೆ.

ಪುತ್ಥಲಿ ಕಲಾರಂಗದ ಮೂಲಕ ಕಲಾಸೇವೆ ಮಾಡುತ್ತಿರುವ ದತ್ತಾತ್ರೇಯ ಅರಳೀಕಟ್ಟೆಯವರು ಪ್ರಪಂಚದ ಬೊಂಬೆಯಾಟದ ಕಲಾವಿದರ ವಿಶ್ವಕೋಶಕ್ಕೆ ಸೇರ್ಪಡೆಯಾದ ಅತ್ಯಂತ ಕಿರಿಯ ಭಾರತೀಯ ಕಲಾವಿದರಾಗಿದ್ದಾರೆ.



**ದಾಸಪ್ಪ**

ಜನನ :1942

ವಿಳಾಸ :
ನಂ. ಎ.ಎಂ.ಆರ್ -27
'ಶ್ರೀ ರಾಘವೇಂದ್ರ ನಿಲಯ'
ನಂದಿನಿ ಬಡಾವಣೆ, ಬೆಂಗಳೂರು - 97

59 ವಯಸ್ಸಿನ ಹಿರಿಯ ಕಲಾವಿದ ದಾಸಪ್ಪನವರು ತಮ್ಮ 5ನೇ ವಯಸ್ಸಿಗೆ ರಾಜಾ ವಿಕ್ರಮ, ಸತ್ಯಹರಿಶ್ಚಂದ್ರ ನಾಟಕಗಳಲ್ಲಿ ಬಾಲ ಪಾತ್ರಧಾರಿಯಾಗಿ ರಂಗಭೂಮಿಗೆ ಪರಿಚಿತವಾದರು. ಇವರ ತಂದೆ ಕೆ.ವಿ. ದಾಸಪ್ಪನವರೂ. ನಟರಾಗಿದ್ದು ಮಗನ ನಟನಾ ಕಲೆಗೆ ಪ್ರೋತ್ಸಾಹವೀಯುತ್ತಿದ್ದರು. ಸಂಗೀತ ವಿದ್ವಾಂಸರಾದ ಬಿ.ಎಸ್. ರಾಜ ಅಯ್ಯಂಗಾರ್ ಹಾಗೂ ತಮ್ಮ ತಂದೆಯವರ ಒಡನಾಟದಿಂದ ಬಂದ ಸಂಗೀತ ಶಿಕ್ಷಣ ರಂಗಕಲೆಗೆ ಪೂರಕವಾಯಿತು. ದಾಸಪ್ಪ ಉತ್ತಮ ಗಾಯಕರೂ ಆಗಿದ್ದು, ಹಲವಾರು ನಾಟಕಗಳಿಗೆ ರಂಗಗೀತೆಗಳನ್ನು ಹಾಡಿದ್ದಾರೆ.

ನಿವೃತ್ತ ಸರ್ಕಾರಿ ನೌಕರರಾದ ದಾಸಪ್ಪನವರು 1966 ರಲ್ಲಿ 'ರಕ್ತಾಕ್ಷಿ' ನಾಟಕದಲ್ಲಿ ವಹಿಸಿದ ಸೋಮಯ್ಯನ ಪಾತ್ರ ಜನಪ್ರಿಯತೆಯನ್ನು ತಂದುಕೊಟ್ಟಿತು. ಅದೇ ಉತ್ಸಾಹದಲ್ಲಿ ಭಟ್ಟಿ ಮಹದೇವಪ್ಪ, ಆರ್. ನಾಗೇಶ್, ಸಿ.ಆರ್. ಸಿಂಹ, ಎಂ.ಆರ್. ಸುಬ್ರಾಂ ಇವರುಗಳ ನಾಟಕದಲ್ಲಿ ಅಭಿನಯಿಸಿದರು. ಕರ್ನಾಟಕ ಸರ್ಕಾರಿ ಸಚಿವಾಲಯ ಕ್ಲಬ್‌ನ ಕಲಾ ಕಾರ್ಯದರ್ಶಿಯಾಗಿ ಆಯ್ಕೆಯಾದ ಮೇಲೆ 1982 ರಲ್ಲಿ ಪ್ರಾರಂಭಿಸಿದ 'ಸುಂದರ ಸಂಜೆ' ಕಾರ್ಯಕ್ರಮ ಬೆಂಗಳೂರಿಗೆ ಪ್ರಸಿದ್ಧವಾಯಿತು. ಉತ್ತಮ ತಂಡದಿಂದ ಪ್ರತಿ ತಿಂಗಳಲ್ಲಿ ಒಂದು ನಾಟಕವನ್ನು ಪ್ರದರ್ಶಿಸುವ ಸುಯೋಗ. ಇವರ ಎರಡು ವರ್ಷಗಳ ಅವಧಿಯಲ್ಲಿ 28 ನಾಟಕಗಳು ಪ್ರದರ್ಶಿತವಾದವು. ಅಲ್ಲದೆ 1986 ರಿಂದ 1989 ರವರೆಗೂ ಅಖಿಲ ಕರ್ನಾಟಕ ಕನ್ನಡ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿದ ಕೀರ್ತಿ ಇವರದು.

ಬ್ಯಾಡ್ಮಿಂಟನ್ ಕ್ರೀಡೆಯ ಕೋಚ್ ಸಹ ಆಗಿರುವ ಇವರು 1991 ರಲ್ಲಿ ಕರ್ನಾಟಕ ಸರ್ಕಾರದಿಂದ 'ದಸರಾ ಪುರಸ್ಕಾರ'ವನ್ನು ಪಡೆದಿದ್ದಾರೆ.



## ದೇವೇಂದ್ರ ರೆಡ್ಡಿ

ಜನನ : 20-10-1925

ವಿಳಾಸ :
S/o ರಾಮರೆಡ್ಡಿ, ನಂದಿಪುರ
ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

ನಂದಿಪುರದ ರಾಮರೆಡ್ಡಿಯವರ ಮಗನಾದ ದೇವೇಂದ್ರರೆಡ್ಡಿ 20-10-1925ರಲ್ಲಿ ಜನಿಸಿದರು. ತಮ್ಮ 16ನೇ ವಯಸ್ಸಿನಲ್ಲಿ ಗದಗಿನ ಪುಣ್ಯಾಶ್ರಮದಲ್ಲಿ ಸಂಗೀತಾಭ್ಯಾಸ ಮಾಡಿದರು. ಎರಡು ವರ್ಷದ ಅಭ್ಯಾಸದ ನಂತರ ಗುಡಿಗೇರಿ ಬಸವರಾಜರ ನಾಟಕ ಕಂಪನಿ ಸೇರಿ ಕೆಲವು ವರ್ಷ ಸೇವೆ ಸಲ್ಲಿಸಿದರು.

ಆನಂತರ ಹಳ್ಳಿ ಹಳ್ಳಿಗಳಲ್ಲಿ ನಾಟಕ ನಿರ್ದೇಶನ ಮಾಡಿ ಸಂಗೀತವನ್ನು ನೀಡಿದ್ದಾರೆ. ರಕ್ತರಾತ್ರಿ, ಕುರುಕ್ಷೇತ್ರ, ಹೇಮರೆಡ್ಡಿ ಮಲ್ಲಮ್ಮ, ಬಾಲಚಂದ್ರ, ಚಿತ್ರಾಂಗದ ಇವರು ನಿರ್ದೇಶಿಸಿ, ಸಂಗೀತ ನೀಡಿದ ಕೆಲವು ನಾಟಕಗಳು. ಹಳ್ಳಿಗಳಲ್ಲಿ ನಡೆಯುವ ಕೀರ್ತನೆಗಳಿಗೆ, ಪುರಾಣಗಳಿಗೆ ಹಾರ್ಮೋನಿಯಂ ಹಾಗೂ ತಬಲ ನುಡಿಸಿದ್ದಾರೆ.

ಸಂಗೀತ ಮಾಸ್ತರರಾಗಿ ಸುತ್ತಮುತ್ತಲ ಜಿಲ್ಲೆಗಳಲ್ಲಿ ಹೆಸರಾಗಿರುವ ದೇವೇಂದ್ರರೆಡ್ಡಿ ಈ ಸಂಜೆಗಾಲದಲ್ಲೂ ರಂಗಭೂಮಿಯ ಬಗೆಗೆ ಉತ್ಸಾಹ ಉಳಿಸಿಕೊಂಡಿದ್ದಾರೆ.



## ಡಿ.ಎಲ್. ನಂಜುಂಡಸ್ವಾಮಿ


ವಿಳಾಸ:
ಹಾರ್ಮೋನಿಯಂ ವಾದಕರು
ದಬ್ಬೆ ಘಟ್ಟ, ತುರುವೇಕೆರೆ ತಾಲ್ಲೂಕು
ತುಮಕೂರು ಜಿಲ್ಲೆ

ತುರುವೇಕೆರೆ ತಾಲ್ಲೂಕು ಹಲವಾರು ಕಲಾವಿದರನ್ನು ರಂಗಭೂಮಿಗೆ ಕಾಣಿಕೆಯಾಗಿ ನೀಡಿದೆ. ಅಂತಹ ಅಪರೂಪದ ಕಲಾವಿದಲ್ಲಿ ಹಾರ್ಮೋನಿಯಂ ಹಾಗೂ ಕೀಬೋರ್ಡ್ ವಾದನ ಚತುರ ಡಿ. ಎಲ್. ನಂಜುಂಡಸ್ವಾಮಿಯವರು ಒಬ್ಬರು.

ನಂಜುಂಡಸ್ವಾಮಿ ರಂಗವನ್ನು ಆಶ್ರಯಿಸಿದ್ದು ಪ್ರವೃತ್ತಿಗಾಗಿ ಅಲ್ಲ, ಹೊಟ್ಟೆಪಾಡಿಗಾಗಿ. ಒಂದು ರೀತಿಯಲ್ಲಿ ಸಾಧಕನ ಬದುಕು ಇವರದು. ಎನ್. ಲಿಂಗಾಚಾರ್, ನಂಜಮ್ಮ ದಂಪತಿಗಳ ನಾಲ್ಕು ಜನ ಮಕ್ಕಳಲ್ಲಿ ಎರಡನೆಯವರಾಗಿ ನಂಜುಂಡಸ್ವಾಮಿ ಜನಿಸಿದರು. ತಂದೆ ಹೆಸರಾಂತ ತಬಲ ವಾದಕರು. ಅದೇ ವೃತ್ತಿ, ಬಡತನದ ಬೇಗೆಯಿಂದ ಹೊರಬರಲು ನಂಜುಂಡಸ್ವಾಮಿ ಶಾಲೆಯ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಇತ್ತು ತಂದೆಯಿಂದಲೇ ತಬಲ ವಾದನವನ್ನು, ಮೃದಂಗ ವಾದನವನ್ನು ಕಲಿತುಕೊಂಡರು. ಮುಂದೆ ಹಾರ್ಮೋನಿಯಂ ನುಡಿಸುವುದನ್ನು ಕಲಿತುಕೊಂಡು ತಮ್ಮ 12 ನೇ ವಯಸ್ಸಿಗೆ ಹುಟ್ಟೂರಿನಲ್ಲಿ 'ದೀಪಾವಳಿ ಅರ್ಥಾತ್ ಸಹೋದರ' ನಾಟಕ ಆಡಿಸುವುದರ ಮೂಲಕ ತಮ್ಮ ಕಲೆಯನ್ನು ಊರಿನ ಜನರ ಮುಂದಿಟ್ಟರು.

ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ರಂಗಕ್ಕೆ ಅಳವಡಿಸಬೇಕಂದು ಮೂಗನಾಯಕನ ಕೋಟೆ ಪುಟ್ಟಣ್ಣ, ಆಂಧ್ರದ ನಾರಾಯಣಾಚಾರ್ ಇವರಿಂದ ಸಂಗೀತವನ್ನು, ದಿವಂಗತ ನರಸಿಂಹಮೂರ್ತಿಗಳಿಂದ ರಂಗ ಶಿಕ್ಷಣವನ್ನು ಪಡೆದುಕೊಂಡು ಮುಂದೆ ಹಲವಾರು ರಂಗ ಕಲಾವಿದರಿಗೆ, ಆಕಾಶವಾಣಿ ಕಲಾವಿದರಿಗೆ, ಸುಗಮ ಸಂಗೀತ ಹಾಡುವವರಿಗೆ ಅನಿವಾರ್ಯವಾಗಿ ಬೇಕಾದ ಕೀಬೋರ್ಡ್, ಹಾರ್ಮೋನಿಯಂ ವಾದಕರಾಗಿ ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ.

ವೃತ್ತಿನಿರತ ಈ ವಾದನ ಚತುರರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ.



ಜೆ. ನರಸಿಂಹಮೂರ್ತಿ
ಜನನ : 23-7-1961

*ವಿಳಾಸ :*
ನಂ.3, 2 ನೇ ಮುಖ್ಯರಸ್ತೆ
ಕಸ್ತೂರಬಾನಗರ, ಮೈಸೂರು ರಸ್ತೆ
ಬೆಂಗಳೂರು-26

ಹವ್ಯಾಸಿ ಕಲಾವಿದ ನರಸಿಂಹಮೂರ್ತಿ ಬಿ.ಎ. ಪದವೀಧರರು. ಜಯರಾಮಪ್ಪ ಹಾಗೂ ನರಸಮ್ಮನವರು ಇವರ ತಂದೆ ತಾಯಿಯರು.


1973ರಲ್ಲಿ ಮುನೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಮಂಡಲಿಯ 'ಮಹಾಭಾರತ' ನಾಟಕದಲ್ಲಿ 'ಸ್ತ್ರೀ' ವೇಷಧಾರಿಯಾಗಿ ನಾಟಕ ರಂಗ ಪ್ರವೇಶಿಸಿದ ನರಸಿಂಹಮೂರ್ತಿ ಶಾಲಾ ಕಾಲೇಜು ದಿನಗಳಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದರು. 'ಏಕಪಾತ್ರಾಭಿನಯ' ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದರು.

ಉತ್ತಮ ದೇಹದಾರ್ಢ್ಯತೆ ಹಾಗೂ ಕಂಠ ಹೊಂದಿರುವ ನರಸಿಂಹಮೂರ್ತಿ ಪೌರಾಣಿಕ ಹಾಗೂ ಐತಿಹಾಸಿಕ ನಾಟಕದ ಪಾತ್ರಗಳಿಗೆ ಹೆಚ್ಚು ಒಪ್ಪುವಂಥವರು. ಆ ಕಾರಣಕ್ಕಾಗಿಯೇ ದಿ|| ಆರ್. ಗುರುರಾಜುಲುನಾಯ್ಡುರವರ ಅರುಣ್‌ಕುಮಾರ್ ಮಿತ್ರ ಮಂಡಲಿಯ ಅನೇಕ ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಶ್ರೀ ಕೃಷ್ಣ ಸಂಧಾನ, ಭಕ್ತ ಕನಕದಾಸ, ಟಿಪ್ಪೂ ಸುಲ್ತಾನ್, ಎಚ್ಚಮ ನಾಯಕ, ಭೀಮ ವಿಜಯ, ಪ್ರಚಂಡ ರಾವಣ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಪೌರಾಣಿಕ ಕಲಾವಿದನಾಗಿಯೇ ಗುರುತಿಸಲ್ಪಡುತ್ತಾರೆ.

ಅಭಿನಯ ಕಲಾ ಸಂಘ ಹಾಗೂ ಎನ್.ಎಸ್. ಸಿಂಹ ಮಿತ್ರ ಮಂಡಲಿಯಲ್ಲೂ ನಟನಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಹಲವಾರು ಹಿರಿ ಕಿರಿಯ ಪ್ರತಿಭಾವಂತ ಕಲಾವಿದರೊಂದಿಗೆ ನಟಿಸುವ ಅವಕಾಶ ಪಡೆದುದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಪ್ರಸ್ತುತ ನಗರದ ಹೆಸರಾಂಥ ಹವ್ಯಾಸಿ ತಂಡ 'ಪ್ರಯೋಗ ರಂಗ'ದ ಸದಸ್ಯನಾಗಿ ನಾಟಕ ಹಾಗೂ ಬೀದಿ ನಾಟಕಗಳಲ್ಲಿ ನಟನಾಗಿ ಪಾಲ್ಗೊಳ್ಳುತ್ತಿದ್ದಾರೆ. ತಂಡದ ಉತ್ತಮ ಪ್ರಯೋಗಗಳಾದ ಮಂಟೇಸ್ವಾಮಿ ಕಥಾ ಪ್ರಸಂಗ, ಮಹೀಪಥ ಕ್ವಾಣನತಂಬ್ಗಿ ಎಂ.ಎ., ಪರಿಹಾರ, ಬೇರಿಲ್ಲದವರು, ಕರ್ಣಭಾರ, ಸ್ಮಶಾನ ಕುರುಕ್ಷೇತ್ರ ನಾಟಕಗಳಲ್ಲದೆ ತ್ಯಾಗಿ, ಕಂಬನಿ, ಮೀನಿನ ಹೆಜ್ಜೆ, ಕಲೆಯ ಕೊಲೆ, ರಕ್ತಾಕ್ಷಿ, ನಾ ಮೆಚ್ಚಿದ ಹುಡುಗಿ, ವಿಪ್ಲವ, ಮುಸುಕು ಇತ್ಯಾದಿ ನಾಟಕಗಳಲ್ಲಿ ಗಮನಾರ್ಹ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ರಂಗಭೂಮಿಯ ನಟನೆಯೊಂದಿಗೆ ಕಿರುತೆರೆಯ ಹಲವಾರು ಧಾರಾವಾಹಿಗಳಲ್ಲಿ, ಕೆಲವು ಚಲನಚಿತ್ರಗಳಲ್ಲಿ ನಟಿಸಿದ ಅನುಭವ ನರಸಿಂಹಮೂರ್ತಿಯವರದು.



## ಆರ್. ನರೇಂದ್ರಬಾಬು

ಜನನ : 16-11-1963

ವಿಳಾಸ :
ಕಾರ್ಯದರ್ಶಿ
ಕನ್ನಡ ಕಲಾ ಸಂಘ,
ಎಸ್-28, ಅಫಿಶಿಯಲ್ ಕಾಲೋನಿ,
ಟಿ.ಬಿ. ಡ್ಯಾಂ-583 225. ಬಳ್ಳಾರಿಜಿಲ್ಲೆ.

ವೃತ್ತಿಯಲ್ಲಿ ಇಂಜಿನಿಯರ್ ಪ್ರವೃತ್ತಿಯಲ್ಲಿ ರಂಗನಟರಾಗಿ, ಕಲೆ, ಸಾಹಿತ್ಯ, ಸಂಸ್ಕೃತಿಯಲ್ಲಿ ಆಸಕ್ತಿ ಹೊಂದಿದ್ದಾರೆ ಆರ್. ನರೇಂದ್ರಬಾಬು. 1985 ರಲ್ಲಿ ಬಿ.ಇ. ಪದವಿಯನ್ನು ಮುಗಿಸಿ, ಕರ್ನಾಟಕ ನೀರಾವರಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರಾಗಿ, ಸದ್ಯ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿ ಇರುವ ತುಂಗಭದ್ರಾ ಡ್ಯಾಂನ ತುಂಗಭದ್ರಾ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶಾಲಾ ಕಾಲೇಜು ದಿನಗಳಿಂದಲೇ ಕಲಾಸಕ್ತಿಯನ್ನು ರೂಢಿಸಿಕೊಂಡಿರುವ ಇವರು ವ್ಯಾಸಂಗದ ಅವಧಿಯಲ್ಲಿ ನಾಟಕ, ಮೂಕಾಭಿನಯ, ಅಣುಕು, ಚರ್ಚಾಸ್ಪರ್ಧೆ ಇವುಗಳಲ್ಲಿ ಭಾಗವಹಿಸಿ ರಾಜ್ಯಮಟ್ಟದಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ.

ಭಾವ ಮೈದುನ, ಕಲೆಯ ಕೊಲೆ, ಬಿಚ್ಚುಗತ್ತಿ, ಗೌರವ ಧನ, ವಿಶಾಲೂ ಸಂಸಾರ, ಬೇಸ್ತು ಬಿದ್ದ ಹೆಂಡತಿ, ದಫನ್, ನಾಯೀಕತೆ, ರಾಕ್ಷಸ ಇತ್ಯಾದಿ ನಾಟಕಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 1999ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರೊ|| ಚಿ.ನ. ಮಂಗಳ ಸ್ಮಾರಕ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ 'ದಫನ್' ನಾಟಕದಲ್ಲಿ ಅಭಿನಯಿಸಿ ಸರಣಿಯ ಅತ್ಯುತ್ತಮ ನಟ ಶಂಕರ್‌ನಾಗ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಮುಂಬಯಿ ಕರ್ನಾಟಕ ಸಂಘ 2000ರ ಫೆಬ್ರವರಿಯಲ್ಲಿ ಏರ್ಪಡಿಸಿದ್ದ ಕುವೆಂಪು ಸ್ಮಾರಕ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ ಟಿ.ಬಿ. ಡ್ಯಾಂನ ಕನ್ನಡ ಕಲಾ ಸಂಘ ಪ್ರದರ್ಶಿಸಿದ 'ನಾಯೀಕತೆ' ನಾಟಕದಲ್ಲಿ ಅಭಿನಯಿಸಿ ಪ್ರಥಮ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲದೆ ಖ್ಯಾತ ವನ್ಯಜೀವಿ ಛಾಯಾ ಚಿತ್ರಗಾರರಾದ ಕೃಪಾಕರ ಸೇನಾನಿ ನಿರ್ದೇಶಿಸಿ, ತಯಾರಿಸಿರುವ 'ಹರಿವ ನದಿಗೆ ಅಂಕುಶ' ಎಂಬ ಕನ್ನಡ ಸಾಕ್ಷ್ಯಚಿತ್ರಕ್ಕೆ ನಿರ್ಮಾಣ ನಿರ್ವಾಹಕರಾಗಿ ಕಾರ್ಯವಹಿಸಿದ್ದಾರೆ.

ಟಿ.ಬಿ. ಡ್ಯಾಂನ ಕನ್ನಡ ಕಲಾ ಸಂಘ ಮೂರು ದಶಕಗಳಿಂದ ಸಾಂಸ್ಕೃತಿಕ ರಂಗದಲ್ಲಿ ವಿಭಿನ್ನ ಅಭಿರುಚಿಯ ಕಾರ್ಯಕ್ರಮಗಳನ್ನು ನೀಡುತ್ತಾ, ರಾಜ್ಯದ ಗಮನ ಸೆಳೆದಿದೆ. ಈಗ್ಗೆ ಮೂರು ವರ್ಷಗಳಿಂದ ನರೇಂದ್ರಬಾಬು ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು, ಮುಂಬಯಿಯಲ್ಲಿ ಪ್ರತಿ ವರ್ಷ ಜರುಗುತ್ತಿರುವ ಕುವೆಂಪು ಸ್ಮಾರಕ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ, ವಿಭಿನ್ನ ನಾಟಕಗಳನ್ನು ಪ್ರದರ್ಶಿಸಿ ಮೂರು ವರ್ಷವೂ ಪ್ರಥಮ ಅತ್ಯುತ್ತಮ ನಾಟಕ ಪ್ರಶಸ್ತಿಯನ್ನು ಗಳಿಸಿ ಹ್ಯಾಟ್ರಿಕ್ ಸಾಧಿಸಿದ್ದಾರೆ. ಅಲ್ಲದೆ ಸಂಘದ ಆತ್ಮೀಯರೊಡಗೂಡಿ ಬೀchi ಹಾಸ್ಯಲಹರಿ, ಕೈಲಾಸಂ ದಿನಾಚರಣೆ, ಜಾನಪದ ಸಂಜೆ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿ ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

ವೃತ್ತಿ ಮತ್ತು ಪ್ರವೃತ್ತಿಯಲ್ಲಿ ಉತ್ತಮ ಸಾಧನೆ ಮಾಡಿ ರಂಗಪ್ರೇಮಿಯಾಗಿ, ನಟರಾಗಿ, ಸಾಂಸ್ಕೃತಿಕ ಸಂಘಟಕರಾಗಿ, ಜಿಲ್ಲೆಯಾದ್ಯಂತ ಸಾಂಸ್ಕೃತಿಕ ಪ್ರಜ್ಞೆ ಹಾಗೂ ಕಲಾವಲಯವನ್ನು ಬೆಳೆಸಲು ಶ್ರಮಿಸುತ್ತಿರುವ ಆರ್. ನರೇಂದ್ರಬಾಬು ಎಂದರೆ ಹೊಸಪೇಟೆಯ ಕಲಾಸಕ್ತರಿಗೆ ವಿಶೇಷ ಗೌರವ ಮತ್ತು ಒಲವು.



ಜಿ. ನಾಗರಾಜ

ಜನನ :11-10-1952

*ವಿಳಾಸ :*

ನಂ. 9, 4ನೇ ಮುಖ್ಯರಸ್ತೆ
ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ
ಬೆಂಗಳೂರು - 19

ಶ್ರೀ ಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿ 1962 ರಲ್ಲಿ ಪ್ರಯೋಗಿಸಿದ ಶನಿಪ್ರಭಾವ ಅಥವಾ ರಾಜಾ ವಿಕ್ರಮ ನಾಟಕದ ಮೂಲಕ ನಾಗರಾಜ್ ಬಾಲನಟನಾಗಿ ರಂಗಭೂಮಿಗೆ ಪರಿಚಿತರಾದರು. ಅವರ ತಂದೆ ಗವಿಯಪ್ಪನವರು ಕಲಾವಿದರೇ. ಅದೇ ನಾಟಕದಲ್ಲಿ ಶನಿದೇವರ ಪಾತ್ರದಲ್ಲಿ ಅಭಿನಯಸುತ್ತಿದ್ದರು. ತಂದೆಯ ಪ್ರೇರಣೆ, ಪ್ರೋತ್ಸಾಹ, ಮಾರ್ಗದರ್ಶನ ನಗರದ ನಾನಾ ಸಂಘ ಸಂಸ್ಥೆಗಳ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದ ನಾಟಕಗಳಲ್ಲಿ ನಟನಾಗಿ ಪಾಲ್ಗೊಳ್ಳುವಂತಾಯಿತು.

ಹೆಚ್.ಎ.ಎಲ್.ನಲ್ಲಿ ಉದ್ಯೋಗಿಯಾದ ಮೇಲೂ ರಂಗಸೆಳೆತದಿಂದಾಗಿ ಕಾರ್ಖಾನೆಯ ಲಲಿತ ಕಲಾ ಸಂಘದಿಂದ ಪ್ರಯೋಗಗೊಂಡ ಎಲ್ಲಾ ನಾಟಕಗಳಲ್ಲೂ ಅಭಿನಯಿಸುವ ಅವಕಾಶ ಪಡೆದರು. ಪ್ರಚಂಡರಾವಣ, ಸಂಗ್ಯಾ ಬಾಳ್ಯ, ಜೋಕುಮಾರಸ್ವಾಮಿ, ಕಲ್ಯಾಣ ಕ್ರಾಂತಿ, ನಂಕಂಪ್ನಿ, ಜೈಸಿದ ನಾಯಕ, ಮಕ್ಮಲ್ ಟೋಪಿ, ರಕ್ತ ಕಣ್ಣೀರ್ ಇವು ಕಾರ್ಖಾನೆಯ ರಂಗಮಂಚದಿಂದ ಪ್ರಯೋಗಿಸಿದ ನಾಟಕಗಳು. ನಾಗರಾಜ ಕಾರ್ಮಿಕ ಕಲಾವಿದರಾಗಿ ಮಾತ್ರ ಉಳಿಯದೆ ಹಲವಾರು ಹವ್ಯಾಸಿ ತಂಡಗಳ ನಾಟಕಗಳಲ್ಲೂ, ನಟನಾಗಿ ಪಾಲ್ಗೊಂಡಿದ್ದಾರೆ. 'ಕಾಲಭೈರವ ಕಲಾನಿಕೇತನ'ದಿಂದ ಪ್ರಚಂಡ ರಾವಣ, ಭಕ್ತ ಪ್ರಹ್ಲಾದ, ಭೂ ಕೈಲಾಸ, 'ರಂಗಭೈರವ ಕಲಾವಿದರು' ತಂಡದಿಂದ ರಕ್ತಾಂಜಲಿ, ಪಾಂಡವರ ವಿಜಯ ಅವುಗಳಲ್ಲಿ ಕೆಲವು.

ಇದುವರೆಗೂ ಇನ್ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುವ ನಾಗರಾಜ, ತಮ್ಮ ಸಮರ್ಥ ಪಾತ್ರ ನಿರ್ವಹಣೆಗಾಗಿ ರಾಜ್ಯ ಮಟ್ಟದ ಹಲವಾರು ಪುರಸ್ಕಾರಗಳನ್ನು ಪಡೆದಿದ್ದಾರೆ. ಅನೇಕ ಪೌರಾಣಿಕ ನಾಟಕಗಳ ನಿರ್ದೇಶನವನ್ನೂ ಮಾಡಿದ್ದಾರೆ. ಹಾರ್ಮೋನಿಯಂ ನುಡಿಸುವುದು ಇವರ ಹವ್ಯಾಸಗಳಲ್ಲಿ ಒಂದು.



## ಎಂ. ನಾಗರಾಜ್

ಜನನ : 6-6-1946


ವಿಳಾಸ :
ನಂ.136 ವಿವೇಕಾನಂದ ಬ್ಲಾಕ್
ಅರಮನೆ ರಸ್ತೆ, ಮಲ್ಲೇಶ್ವರಂ
ಬೆಂಗಳೂರು - 3

'ಕಲೆಯೇ ನನ್ನ ಆರಾಧ್ಯ ದೈವ ವೆಂದು' ನಂಬಿ ಸದಾ ರಂಗಕಲೆಗಳಲ್ಲಿ ತಲ್ಲೀನರಾಗಿರುವ ವ್ಯಕ್ತಿ ಎಂ.ನಾಗರಾಜ್. ಮಾಯಣ್ಣ, ಗಂಗಮ್ಮ ಇವರ ತಂದೆ, ತಾಯಿಯರು. ಮೈಸೂರ್ ಅಸಿಟೇಲ್ ಕೆಮಿಕಲ್ಸ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ.

ರಂಗಭೂಮಿ ಇವರ ಹವ್ಯಾಸ ಕ್ಷೇತ್ರ. ಹೈಸ್ಕೂಲು ವಿದ್ಯಾಭ್ಯಾಸದಲ್ಲಿರುವಾಗಲೇ ಬಿ.ಎಂ. ಶಂಕರ್‌ರವರ ನಿರ್ದೇಶನದ 'ರಾಜ ಮುದ್ರಿಕೆ' ನಾಟಕದಲ್ಲಿ ಪಾತ್ರವಹಿಸಿ ಕಲಾರಂಗಕ್ಕೆ ಪರಿಚಿತರಾದರು.

ಮುಂದೆ ರಂಗಭೂಮಿಯನ್ನೇ ವೃತ್ತಿಯ ಒಂದು ಭಾಗವಾಗಿಸಿಕೊಂಡರು. ಪೌರಾಣಿಕ ನಾಟಕಗಳಾದ ಕುರುಕ್ಷೇತ್ರ, ಪ್ರಚಂಡ ರಾವಣ, ರಾಮಾಯಣ, ಮಹಾಭಾರತ, ದಕ್ಷಯಜ್ಞ, ಶಿವಲೀಲೆ, ಶನಿದೇವರ ಮಹಾತ್ಮೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಜನರ ಮೆಚ್ಚುಗೆ ಪಡೆದರು. ಹಲವಾರು ನಾಟಕ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಉತ್ತಮ ನಟನೆಗೆ ಪ್ರಶಸ್ತಿ ಪಡೆದುದಲ್ಲದೆ ನಿರ್ದೇಶನ ಪ್ರಶಸ್ತಿಯನ್ನೂ ಪಡೆದರು.

ಕಲಾರಂಗದಲ್ಲಿ ಇನ್ನಷ್ಟು ದುಡಿಯಬೇಕೆಂಬ ಉತ್ಸಾಹದಿಂದ ಕಸುವನ ಹಳ್ಳಿಯಲ್ಲಿ 'ಮಾರುತಿ ಕಲಾ ಸಂಘ'ವನ್ನು ಸ್ಥಾಪಿಸಿ, ಈ ಸಂಸ್ಥೆಯಿಂದ ಹಳ್ಳಿಗಳಲ್ಲಿ, ನಗರಗಳಲ್ಲಿ ನಾಟಕ ಪ್ರದರ್ಶನ ನೀಡಿದ್ದಾರೆ. ಹಲವಾರು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ.



**ನಾಗೇಶ್ ವಿ.**

ಜನನ : 4-7-1959

ವಿಳಾಸ :
ನಂ. 39/57, ಬಾಂಧನವರ ಬೇಂದ್ರೆ
ಬಸವನಗುಡಿ
ಬೆಂಗಳೂರು - 4

ನಾಗೇಶ್ ಕಲಾವಿದರ ಮನೆತನಕ್ಕೆ ಸೇರಿದವರು. ಇವರ ತಾತ ಗುಬ್ಬಿ ಕಂಪನಿಯಲ್ಲಿ ನಟ ಭಯಂಕರರೆಂದು ಖ್ಯಾತರಾಗಿದ್ದ ಎಮ್.ಎನ್. ಗಂಗಾಧರರಾಯರು. ತಾತನ ನಟನೆ ನಾಗೇಶ್‌ಗೆ ರಂಗಭೂಮಿಯ ಕಡೆಗೆ ಸೆಳೆಯಲು ಕಾರಣವಾಯಿತು.

ಬಸವನಗುಡಿ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ 'ಡ್ರಮ್ಯಾಟಿಕ್ಸ್' ವಿಷಯವನ್ನು ಬೋಧಿಸುತ್ತಿದ್ದ ಗುರು ದಿ|| ಬಿ. ಎಸ್. ನಾರಾಯಣರಾವ್ ನಿರ್ದೇಶಿಸಿದ ಪರ್ವತವಾಣಿಯವರ 'ವಿಪರ್ಯಾಸ' ನಾಟಕದಲ್ಲಿ ನಟಿಸಿದರು. ಮುಂದೆ ನ್ಯಾಷನಲ್ ಕಾಲೇಜು ರಂಗಮಂಚದಿಂದ ರಂಗಸಜ್ಜಿಕೆ, ಬೆಳಕು ವಿನ್ಯಾಸಗಳಲ್ಲಿ ಪರಿಣತಿಯನ್ನು ಸಾಧಿಸಿಕೊಂಡರು.

ರಂಗಭೂಮಿಯ ಬಗೆಗಿನ ಔಪಚಾರಿಕ ಶಿಕ್ಷಣವನ್ನು ಮೈಗೂಡಿಸಿಕೊಂಡ ನಾಗೇಶ್ ಬೆಂಗಳೂರಿನ ಖ್ಯಾತ ಹವ್ಯಾಸಿ ರಂಗ ತಂಡ 'ನಟರಂಗ'ದ ಸದಸ್ಯರಾದರು. ಅಲ್ಲಿನ ಕಾಕನಕೋಟೆ, ತುಘಲಕ್, ಹಂಚು ಬೆಳದಿಂಗಳು, ಋಷ್ಯಶೃಂಗ, ಮೋಟೇರಾಮ್, ಗುಣಮುಖ, ತಲೆದಂಡ ನಾಟಕಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ.

ಕಿರುತೆರೆಯ ಹಲವಾರು ಧಾರಾವಾಹಿಗಳಲ್ಲೂ ಟೆಲಿಚಿತ್ರಗಳಲ್ಲೂ ನಟಿಸಿದ ಅನುಭವ ಹೊಂದಿದ್ದಾರೆ.



## ಪದ್ಮನಾಭಯ್ಯ (ಪದ್ಮಣ್ಣ)

ಜನನ : 7-6-1936

ವಿಳಾಸ :
'ನಂಜುಂಡೇಶ್ವರ ನಿಲಯ'
2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು-79

ಹಿರಿಯ ರಂಗಕಲಾವಿದ ಪದ್ಮನಾಭಯ್ಯ ನಾಗಮಂಗಲ ತಾಲ್ಲೂಕಿನ ಕಂಚನಹಳ್ಳಿಯ ರೈತ ಕುಟುಂಬವೊಂದರಲ್ಲಿ ಜನಿಸಿದರು. ಹುಚ್ಚಮ್ಮ-ನಂಜುಂಡಯ್ಯ ಪದ್ಮಣ್ಣನವರ ತಂದೆ ತಾಯಿಯರು. ಅಣ್ಣ ಪಟೇಲ್ ರಂಗೇಗೌಡರು ಪೌರಾಣಿಕ ನಾಟಕದಲ್ಲಿ ನಟಿಸುತ್ತಿದ್ದರು. ಅವರ ರಾಮಾಯಣ ನಾಟಕದ ಆಂಜನೇಯ ಪಾತ್ರ ಇವರಲ್ಲಿ ನಾಟಕದ ಗೀಳನ್ನು ಹಚ್ಚಿತ್ತು. ರಂಗಭೂಮಿ ಪ್ರವೇಶಕ್ಕೆ ಅದೇ ಕಾರಣವಾಯಿತು. 'ರಾಮಾಯಣ'ದಲ್ಲಿ ಜಟಾಯು, ಭಕ್ತ ಪ್ರಹ್ಲಾದ ನಾಟಕದಲ್ಲಿ ಪ್ರಹ್ಲಾದ, 'ಭಕ್ತ ಮಾರ್ಕಂಡೇಯ'ದಲ್ಲಿ ಮಾರ್ಕಂಡೇಯ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸಿದರು.

ಜೀವನ ನಿರ್ವಹಣೆಗಾಗಿ ಬೆಂಗಳೂರಿಗೆ ಬಂದು, ಬಿ. ಎಂ. ನಾರಾಯಣದಾಸ್‌ರವರ ಸಹಕಾರದಿಂದ ನಾಟಕಗಳಲ್ಲಿ ಅಭಿನಯಿಸುವ ಅವಕಾಶ ಪಡೆದರು. 'ಕುರುಕ್ಷೇತ್ರ'ದ ಧರ್ಮರಾಯ, 'ರಾಮಾಯಣ'ದ ದಶರಥ, 'ಪ್ರಚಂಡ ರಾವಣ'ದ ಕುಂಭಕರ್ಣ, 'ರಾವಣ ಬ್ರಹ್ಮ'ದಲ್ಲಿ ಆಂಜನೇಯ, ಕೃಷ್ಣಸಂಧಾನದ ಭೀಷ್ಮ, ವಿದುರ, ದ್ರೋಣ ಪಾತ್ರಗಳಿಂದ ಜನಪ್ರಿಯ ನಟರಾಗಿ ಬೆಳೆದರು. ಅದರಲ್ಲೂ ದಶರಥ, ಧರ್ಮರಾಯ ಪಾತ್ರಗಳಿಗೆ ಅತಿ ಬೇಡಿಕೆಯ ಕಲಾವಿದರಾಗಿದ್ದಾರೆ.

ತಮ್ಮ ಐವತ್ತು ವರ್ಷಗಳ ದೀರ್ಘ ಕಾಲದ ರಂಗಾನುಭವದಲ್ಲಿ ಸಾವಿರಾರು ನಾಟಕಗಳಲ್ಲಿ ಅಭಿನಯಿಸಿ ಜನಮೆಚ್ಚುಗೆ ಪಡಿದಿದ್ದಾರೆ. ಇವರ ಕಲಾಪ್ರೌಢಿಮೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ, ಪ್ರಶಸ್ತಿ ನೀಡಿವೆ.

ಈ ಇಳಿವಯಸ್ಸಿನಲ್ಲಿಯೂ ಕಲಾವಿದನಾಗಿ ಸದಾ ಚೈತನ್ಯದ ಚಿಲುಮೆಯಾಗಿ, ಕಲೆಗಾಗಿಯೇ ಬದುಕನ್ನು ಮುಡಿಪಾಗಿಟ್ಟಿದ್ದಾರೆ ಪದ್ಮನಾಭಯ್ಯ.



## ಡಿ. ಪದ್ಮರಾಜು

ಜನನ : 10-12-1960

*ವಿಳಾಸ :*
ನಂ.100, ಮಾಗಡಿ ಮುಖ್ಯರಸ್ತೆ
ಗೋವಿಂದರಾಜನಗರ
ಬೆಂಗಳೂರು-40

ಡಿ. ಪದ್ಮರಾಜು ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಿ 30 ವರ್ಷಗಳಿಗೂ ಮೇಲ್ಪಟ್ಟು ನಟನೆ, ನಿರ್ದೇಶನ, ಸಂಗೀತ ಸಂಯೋಜನೆ, ಹಿನ್ನೆಲೆ ಗಾಯನದಲ್ಲಿ ಅಪಾರ ಅನುಭವ ಗಳಿಸಿದ್ದಾರೆ.

ಶ್ರೀಮತಿ ಗಂಗಾಬಿಕೆ ಮತ್ತು ಶ್ರೀ ದೊಡ್ಡಣ್ಣನವರ ಮಗನಾಗಿ 1960 ರಲ್ಲಿ ಪದ್ಮರಾಜು ಜನಿಸಿದರು. ತಂದೆಯವರ ಮಾರ್ಗದರ್ಶನದಲ್ಲಿ 1966ರಲ್ಲಿ 'ಸತ್ಯಹರಿಶ್ಚಂದ್ರ' ನಾಟಕದಿಂದ ಬಾಲನಟನಾಗಿ ರಂಗಕ್ಕೆ ಪರಿಚಿತರಾದರು. ಶ್ರೀಯುತ ರಾಮಯ್ಯ ಮತ್ತು ವಿದ್ವಾನ್ ಕೃಷ್ಣಮೂರ್ತಿಯವರಲ್ಲಿ ಹಾರ್ಮೋನಿಯಂ ಕಲಿತು 1970ರಲ್ಲಿ ಅಂದರೆ ತನ್ನ ಹತ್ತನೆಯ ವಯಸ್ಸಿನಲ್ಲಿಯೇ 'ದಾನಶೂರ ಕರ್ಣ' ನಾಟಕಕ್ಕೆ ಹಾರ್ಮೋನಿಯಂ ಮಾಸ್ತರನಾಗಿ ಕನ್ನಡ ಪೌರಾಣಿಕ ರಂಗಭೂಮಿ ಕಂಡ ಅತೀ ಚಿಕ್ಕ 'ಹಾರ್ಮೋನಿಯಂ ಮಾಸ್ಟರ್' ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅಂದಿನಿಂದ ಸುಮಾರು 60 ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರೆ.

ನಂತರ 'ಕೀ-ಬೋರ್ಡ್' ವಾದನೆಯಲ್ಲಿ ಆಸಕ್ತಿ ಹೊಂದಿ ಅಂದಿನ ಹೆಸರಾಂತ ನಾಟಕ ಕಂಪನಿಗಳಿಗೆ ಸಂಗೀತಗಾರನಾಗಿ ಕೆಲಸ ನಿರ್ವಹಿಸಿದ್ದಾರೆ. ಭಟ್ಟಿ ಮಹದೇವಪ್ಪ ಮಿತ್ರ ಮಂಡಳಿ, ವಜ್ರಪ್ಪನವರ ಶ್ರೀನಿವಾಸ ಕಲಾ ವೃಂದ, ಪ್ರತಿಭಾ ಕಲಾನಿಕೇತನ ಸೇರಿದಂತೆ ಇನ್ನೂ ಹಲವಾರು ಕಲಾಮಂಡಳಿಗಳಿಗೂ, ನೂರಾರು ಧ್ವನಿ ಸುರುಳಿಗಳಿಗೂ, ಭಾವಗೀತೆ, ಜಾನಪದ ಗೀತೆ ಕಾರ್ಯಕ್ರಮಗಳಿಗೂ ಕೀಬೋರ್ಡಿನ ಕೈಚಳಕದ ರುಚಿ ಉಣಬಡಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ.

ಪದ್ಮರಾಜು ಸಂಗೀತ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಹಲವಾರು ಬಾರಿ ನಟನಾಗಿಯೂ ಗಮನ ಸೆಳೆದಿದ್ದಾರೆ, ಮುಖ್ಯವಾಗಿ ಇವರ 'ಅಭಿಮನ್ಯು' ಪಾತ್ರ ಅವಿಸ್ಮರಣೀಯ.

ಇವರ ಅಸಾಮಾನ್ಯ ಪ್ರತಿಭೆ ಮತ್ತು ಕಲಾಸೇವೆಯನ್ನು ಗುರುತಿಸಿ ಕರ್ನಾಟಕದ ನಾನಾ ಸಂಘ, ಸಂಸ್ಥೆಗಳು ಪ್ರಶಸ್ತಿ ನೀಡಿ, ಸನ್ಮಾನಿಸಿದ್ದಾರೆ. ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ, ಹಲವು ಬಾರಿ 'ಅತ್ಯುತ್ತಮ ಸಂಗೀತ ನಿರ್ದೇಶಕ' ಪ್ರಶಸ್ತಿಗಳಿಸಿದ್ದಾರೆ.



ಡಾ|| ಬಿ.ಎಸ್. ಪರೇಶ್‌ಕುಮಾರ್

ಬೆಂಗಳೂರು ಹವ್ಯಾಸಿ ರಂಗಭೂಮಿಯಲ್ಲಿ ಅತ್ಯುತ್ತಮ ಬೆಳಕು ವಿನ್ಯಾಸಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಡಾ|| ಬಿ.ಎಸ್. ಪರೇಶ್‌ಕುಮಾರ್.

ಬಿಜ್ಜಹಳ್ಳಿ ಸಿದ್ಧಲಿಂಗಯ್ಯ ಪರೇಶ್‌ಕುಮಾರ್ ಹುಟ್ಟಿದ್ದು ಬೆಂಗಳೂರಿನಲ್ಲಿ. ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಾಲ್ಯದಿಂದಲೇ ರಂಗೂಭೂಮಿಯ ಕಡೆಗೆ ಆಸಕ್ತಿ ಇದ್ದು, ಬೆಳಕು ತಜ್ಞನಾಗಬೇಕೆಂಬ ನಿಟ್ಟಿನಲ್ಲಿ ಬಿ.ಎಸ್. ನಾಣಿ ಅವರಿಂದ ಬೆಳಕಿನ ಬಗ್ಗೆ ಪ್ರಾಥಮಿಕ ಶಿಕ್ಷಣ ಪಡೆದರು. ಮುಂದೆ ಜಿ. ಶ್ರೀನಿವಾಸರೊಂದಿಗೆ ಬೆಳಕು ಸಹಾಯಕರಾಗಿ ಜೊತೆ ಸೇರಿದರು. ಬಿ.ವಿ. ಕಾರಂತ್ ನಿರ್ದೇಶನದ 'ನೀಕೊಡೆ ನಾ ಬಿಡೆ' ನಾಟಕಕ್ಕೆ ಸಹಾಯಕ ಬೆಳಕು ವಿನ್ಯಾಸಕಾರರಾಗಿ ತಮ್ಮ ಕೈಚಳಕ ಪ್ರದರ್ಶಿಸಿ ರಂಗ ಗಣ್ಯರ ಗಮನ ಸೆಳೆದರು. ಪ್ರೊ|| ಬಿ. ಚಂದ್ರಶೇಖರ್ ನಿರ್ದೇಶನದ 'ತುಘಲಕ್' ನಾಟಕಕ್ಕೆ ಸ್ವತಂತ್ರವಾಗಿ ಬೆಳಕು ವಿನ್ಯಾಸ ಮಾಡಿ ಸೈ ಎನಿಸಿಕೊಂಡರು. 'ನಟರಂಗ'ದ ಕಾಕನಕೋಟೆ, ತುಘಲಕ್, ವೈಟಿಂಗ್ ಫಾರ್ ಗೋಡೋ, ಮಿಡ್ ಸಮ್ಮರ್ ನೈಟ್ಸ್ ಡ್ರೀಮ್, ಮೊದಲಾದ ಮಹತ್ವದ ನಾಟಕಗಳಿಗೆ ಪ್ರಸನ್ನ ನಿರ್ದೇಶನದ 'ಬಯಲು ಸೀಮೆ ಸರದಾರ, ಹುತ್ತವ ಬಡಿದರೆ, ತಾಯಿ ನಾಟಕಗಳಿಗೆ, 'ಕಲಾ ಗಂಗೋತ್ರಿ'ಯ ಕಾಲಿಗುಲ, ಮುಖ್ಯಮಂತ್ರಿ ನಾಟಕಗಳಿಗೆ ಬೆಳಕು ತಜ್ಞರಾಗಿ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ.

ಅಷ್ಟೇ ಅಲ್ಲದೆ ನಾಟ್ಯ ಸಂಘ ಥಿಯೇಟರ್ ಸೆಂಟರ್‌ನವರ ಉಲ್ಲಾಳ ನಾಟಕ ಸ್ಪರ್ಧೆಗಳಿಗೆ, ರಾಷ್ಟ್ರೀಯ ನಾಟಕ ಸ್ಪರ್ಧೆಗಳಿಗೂ ಇವರದೇ ದೀಪ ವಿನ್ಯಾಸ, ಇಂಗ್ಲೀಷ್ ರಂಗಭೂಮಿಗೂ ಡಾ|| ಪರೇಶ್‌ಕುಮಾರ್ ಪರಿಚಿತರು ವಿದೇಶಿ ಬ್ಯಾಲೆಗಳಿಗೆ, ನಾಟಕಗಳಿಗೆ ಬೆಳಕು ಹಿಡಿದಿದ್ದಾರೆ.

ಆಧುನಿಕ ರಂಗಭೂಮಿಗೆ ಡಾ|| ಪರೇಶ್‌ರು ನೀಡಿದ ಅಪಾರ ಕೊಡುಗೆಯನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿಯು 1999ರಲ್ಲಿ ಫೆಲೋಶಿಪ್ ನೀಡಿ ಗೌರವಿಸಿದೆ.



**ಪಾಪಯ್ಯರೆಡ್ಡಿ**

ಜನನ : 14-1-1956

ವಿಳಾಸ :
ಹೊಂಗಸಂದ್ರ
ಬೇಗೂರು ರಸ್ತೆ,
ಬೆಂಗಳೂರು-68.

ಕಳೆದ 28 ವರ್ಷಗಳಿಂದ ಕಲಾಸೇವೆ ಮಾಡುತ್ತಾ ಬಂದಿದ್ದಾರೆ ಪಾಪಯ್ಯರೆಡ್ಡಿ. ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಪೂರೈಸಿದ್ದಾರೆ.

1978ರಲ್ಲಿ ಪಿ. ಧರ್ಮರತ್ನಂ ನಿರ್ದೇಶಿಸಿದ 'ಮಹಾಭಾರತ' ನಾಟಕದಲ್ಲಿ ದುರ್ಯೋಧನ ಪಾತ್ರಧಾರಿಯಾಗಿ ರಂಗಕ್ಕೆ ಪರಿಚಿತರಾದರು. ಆ ನಂತರದ ದಿನಗಳಲ್ಲಿ ಪಿ. ವಜ್ರಪ್ಪ, ನರಸಿಂಹಯ್ಯ, ಕಲ್ಲೂರು ಶ್ರೀನಿವಾಸ್ ಮುಂತಾದ ನಿರ್ದೇಶಕರುಗಳ ನಾಟಕಗಳಲ್ಲಿ ನಟಿಸಿ, ಅಭಿನಯ ಕಲೆ ಬೆಳೆಸಿಕೊಂಡರು.

ನಾಟಕದಲ್ಲಿ ನಟಿಸುವುದನ್ನು ಪ್ರವೃತ್ತಿಯಾಗಿ ಸ್ವೀಕರಿಸಿರುವ ಪಾಪಯ್ಯರೆಡ್ಡಿ, ಬಡಕಲಾವಿದರಿಗೆ ಸಹಾಯಾರ್ಥ ನಾಟಕ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಹಲವು ಸಾಮಾಜಿಕ ಸೇವೆಗಳಿಗಾಗಿ ರಂಗಭೂಮಿಯ ಒಡನಾಟ ಉಳಿಸಿಕೊಂಡಿದ್ದಾರೆ.



**ಪಿಂಜಾರ ಅಬ್ದುಲ್ ಸಾಬ್**
ಜನನ : 1-6-1958

ವಿಳಾಸ :
ಭಾವೈಕ್ಯತಾ ವೇದಿಕೆ, ಅಮೀನಾ ಬೆಡ್ಸ್
ಸಿದ್ಧಲಿಂಗಪ್ಪ ಚೌಕಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ

ಪಿ. ನೂರ್‌ಸಾಬ್ ಹಾಗೂ ಅಮೀನಾಬಿಯರವರ ಪುತ್ರರಾಗಿ ಜನಿಸಿದ ಪಿಂಜಾರ ಅಬ್ದುಲ್ ಸಾಬ್‌ರವರು, ತಮ್ಮ ತಂದೆ ತೀರಿಕೊಂಡಾಗ ತಮ್ಮ ಚಿಕ್ಕಪ್ಪನಾದ ಶ್ರೀ ಎಚ್. ಇಬ್ರಾಹಿಂರವರ ಪೋಷಣೆಯಲ್ಲಿ ಬೆಳೆದರು. ಇಬ್ರಾಹಿಂರವರು ಮೊದಲಿನಿಂದಲೂ ಸಾಹಿತ್ಯ ಹಾಗೂ ನಾಟಕ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವರಾಗಿದ್ದರಿಂದ ಅಬ್ದುಲ್ ಸಾಬ್‌ರವರಿಗೆ ಕಲಾವಿದರ ಸಂಪರ್ಕ ದೊರೆಯಿತು.

ಹಯವದನ, ಜೋಕುಮಾರ ಸ್ವಾಮಿ, ಸತ್ತವರ ನೆರಳು, ಕಾಕನಕೋಟೆ, ಒಂದು ಲೋಕದ ಕಥೆ, ಹ್ಯಾಮ್ಲೆಟ್, ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಜೈಸಿದ ನಾಯ್ಕ, ದಹನ, ಕುರಿಗಳು ಸಾರ್ ಕುರಿಗಳು, ಚೋರ ಚರಣದಾಸ ಹೀಗೆ ಹತ್ತು ಹಲವು ಉತ್ತಮ ಪ್ರಯೋಗಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ.

ಪ್ರಗತಿಪರ ವಿಚಾರವಾದಿ ಸಂಘಟಕರಾಗಿ, ಅನೇಕ ಬೀದಿ ನಾಟಕಗಳನ್ನು ನಿರ್ದೇಶಿಸಿ, ನಟಿಸಿದ್ದಾರೆ. ಹರಕೆ, ವಿಸರ್ಜನೆ, ಹುಡುಗಿ ಓದಲೇ ಬೇಕು ಮುಂತಾದ ಬೀದಿ ನಾಟಕಗಳ ಜೊತೆಗೆ ಸುಮಾರು 35 ಬೀದಿ ನಾಟಕಗಳನ್ನು ತಯಾರಿಸಿ, ಕರ್ನಾಟಕ ರಾಜ್ಯದ ಬಹುತೇಕ ಕಡೆಗಳಲ್ಲಿ ನೂರಾರು ಪ್ರದರ್ಶನ ನೀಡಿ, ರಂಗಕರ್ಮಿಗಳ ಮೆಚ್ಚುಗೆ ಪಡೆದಿದ್ದಾರೆ.

1992 ರಲ್ಲಿ 'ಭಾರತ ಜನ ವಿಜ್ಞಾನ ಜಾಥಾ'ದ ಮೂಲಕ ಬಳ್ಳಾರಿ ಜಿಲ್ಲೆಯಲ್ಲಿನ 106 ಹಳ್ಳಿಗಳಲ್ಲಿ ಸಾಕ್ಷರತೆ, ವಾತಾವರಣ ನಿರ್ಮಾಣ, ಸ್ತ್ರೀಸ್ವಾತಂತ್ರ್ಯ ಮುಂತಾದ ವಿಚಾರಗಳ ಕುರಿತು ಬೀದಿ ನಾಟಕಗಳನ್ನು ಆಡಿಸಿ, ಜನರಲ್ಲಿ ಜಾಗೃತ ಭಾವನೆಯನ್ನು ಮೂಡಿಸಿದರಲ್ಲದೆ, ಹಿಂದೂ, ಮುಸ್ಲಿಂ ಕೋಮು ಗಲಭೆಗಳು ಉಂಟಾದಾಗ ಭಾವೈಕ್ಯತಾ ವೇದಿಕೆ ಸ್ಥಾಪಿಸಿದರು. 'ಮೊಹರಂ ಸವಾಲು ಪದಗಳು' ಎಂಬ ರಾಜ್ಯ ಮಟ್ಟದ ಸ್ಪರ್ಧೆ ಏರ್ಪಡಿಸಿ ಜನರಲ್ಲಿ ಕಳಕಳಿಯ ಭಾವ ಮೂಡಿಸುವಲ್ಲಿ ಒಬ್ಬರಾಗಿದ್ದಾರೆ.

ತಮ್ಮ ಮನೆಯಲ್ಲೇ ರಂಗಶಾಲೆಯನ್ನಾಗಿ ಪರಿವರ್ತಿಸಿ ಮಕ್ಕಳಿಗಾಗಿ ಭಾವೈಕ್ಯತಾ ವೇದಿಕೆ ಕಟ್ಟಿಕೊಂಡು ಗುಲ್ಬರ್ಗಾ ವಿಭಾಗೀಯ ಮಟ್ಟದಲ್ಲಿ 30 ಸ್ಥಳಗಳಲ್ಲಿ ಬೀದಿ ನಾಟಕ ಪ್ರದರ್ಶನವನ್ನು ನೀಡಿದ್ದಾರೆ.

ಪ್ರಸ್ತುತ ಕೇಂದ್ರೀಯ ಸಂಗೀತ ಮತ್ತು ನಾಟಕ ವಿಭಾಗದಲ್ಲಿ 'ಬಿ' ಗ್ರೇಡ್ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನಿರ್ದೇಶಿಸಿದ 'ನಾವು ಮನುಜರು' ಮತ್ತು 'ಈ ನೆಲ-ಈ ಜಲ' ಬೀದಿ ನಾಟಕಗಳು ದೇಶದ ನಾಲ್ಕು ಮಹಾನಗರಗಳಲ್ಲಿ ಪ್ರದರ್ಶನ ಕಂಡಿವೆ. ಇತ್ತೀಚೆಗೆ ಸಮುದಾಯದವರು ಧಾರವಾಡದಲ್ಲಿ ನಡೆಸಿದ ರಾಜ್ಯಮಟ್ಟದ ಬೀದಿ ನಾಟಕ ಪ್ರದರ್ಶನದಲ್ಲಿ ಪ್ರಥಮ ಪುರಸ್ಕಾರ ಇವರಿಗೆ ಸಂದಿದೆ. ಶಿವಮೊಗ್ಗದ ಸೃಷ್ಟಿ ಎಂಬ ಸಾಹಿತ್ಯ ವೇದಿಕೆಯಲ್ಲಿ ಸಕ್ರಿಯ ಸದಸ್ಯರಾಗಿ, ರಂಗಾಯಣದ ರಂಗ ಸಮಾಜದ ಸದಸ್ಯರಾಗಿ ಆಯ್ಕೆಗೊಂಡು ರಂಗಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ.



ಪುಟ್ಟಬಸವಯ್ಯ ಎಂ. ಎಸ್.

ಜನನ : 1-6-1956

*ವಿಳಾಸ :*

ಮೇರುಗಾನ ಹಳ್ಳಿ

ತೀತ ಪೋಸ್ಟ್, ಕೊರಟಗೆರೆ ತಾಲ್ಲೂಕು

ತುಮಕೂರು

ತುಮಕೂರು ಜಿಲ್ಲೆಗೆ ಸೇರಿದ ಹಳ್ಳಿಯೊಂದರ ರೈತಾಪಿ ಕುಟುಂಬದಲ್ಲಿ ಪುಟ್ಟಬಸವಯ್ಯನವರ ಜನನವಾಯಿತು. ವಿದ್ಯಾರ್ಥಿ ದೆಸೆಯಲ್ಲೇ ದಾನ ಶೂರ ಕರ್ಣನಾಗಿ ನಾಟಕ ರಂಗಕ್ಕೆ ಪಾದಾರ್ಪಣೆ ಮಾಡಿದರು. ನಂತರ ಕಾಲೇಜು ರಂಗಮಂಚದಿಂದ ಜೀಮೂತವಾಹನ, ಉಂಡಾಡಿ ಗುಂಡ, ಪುರೂರವ ನಾಟಕಗಳಲ್ಲಿ ನಟಿಸಿ ಪ್ರಶಂಸೆ ಗಳಿಸಿದರು.

ತಂದೆ ಶಿವಣ್ಣನವರ ಪ್ರೋತ್ಸಾಹದಿಂದ ನಾಟಕಗಳಲ್ಲಿ ನಟಿಸುವುದನ್ನು ಮುಂದುವರೆಸಿದರು. ಇದುವರೆಗೂ ನೂರಾರು ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ನಟಿಸಿರುವ ಅನುಭವದೊಂದಿಗೆ ನಾಟಕ ನಿರ್ದೇಶನವನ್ನು ಮಾಡಿ ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಪುಟ್ಟಬಸವಯ್ಯ ಪಾತ್ರರಾಗಿರುವರು.

ಸಮಾನ ಆಸಕ್ತಿಯುಳ್ಳ ಸ್ನೇಹಿತರೊಡಗೂಡಿ 'ಬಸವ ಕಲಾನಿಕೇತನ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಹಲವಾರು ನಾಟಕಗಳನ್ನು ರಂಗಕ್ಕೆ ಅಳವಡಿಸುವುದರಲ್ಲಿ ಶ್ರಮಿಸಿದ್ದಾರೆ. ಬಂದ ಹಣದಿಂದ ಸಮಾಜ ಸೇವೆಯನ್ನು ಮಾಡುತ್ತಾ ಬಂದಿರುವರು. ರಾಜ್ಯಮಟ್ಟದ ಹಲವಾರು ನಾಟಕ ಸ್ಪರ್ಧೆಗಳಲ್ಲಿ ಪುಟ್ಟಬಸವಯ್ಯನವರು ಪಾಲ್ಗೊಂಡಿದ್ದಾರೆ. ಕಿರುತೆರೆ, ಬೆಳ್ಳಿತೆರೆಯಲ್ಲೂ ಅವಕಾಶ ಸಿಕ್ಕಾಗ ನಟಿಸುವುದುಂಟು.



## ಆರ್. ಬದರಿ ನಾರಾಯಣ

ಜನನ : 12-10-1953

ವಿಳಾಸ :

ಸಂಚಾಲಕರು

ಕನ್ನಡ ಕಲಾ ಸಂಘ

ಟಿ.ಬಿ. ಡ್ಯಾಂ - 583 225. ಬಳ್ಳಾರಿ ಜಿಲ್ಲೆ

ನಾಟಕ ಆಡುವ ಹಾಗೂ ಆಡಿಸುವ ಚಟ ಬಿಟ್ಟರೆ ಬೇರೆ ಯಾವ ಚಟವೂ ಇಲ್ಲ ಎನ್ನುತ್ತಾರೆ ಹವ್ಯಾಸಿ ರಂಗಭೂಮಿಯಲ್ಲಿ ಸಾಕಷ್ಟು ಪರಿಶ್ರಮ ಹೊಂದಿರುವ ಬದರಿ ನಾರಾಯಣ. ವೃತ್ತಿಯಿಂದ ಕಾರ್ಖಾನೆಯಲ್ಲಿ ಸೂಪರ್‌ವೈಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಾದ್ಯಂತ ನಟರಾಗಿ ಚಿರಪರಿಚಿತರಾಗಿದ್ದಾರೆ.

ಚಿಕ್ಕಂದಿನಲ್ಲೇ ನಾಟಕ ನೋಡುವ ಗೀಳು, ಮುಂದೆ ರಂಗಭೂಮಿ ಸೇರಲು ಹವ್ಯಾಸಿ ರಂಗನಟರಾಗಿ ಬೆಳೆಯಲು ಕಾರಣವಾಯಿತು. ಟಿ.ಬಿ. ಡ್ಯಾಂನಲ್ಲಿ 5ನೇ ತರಗತಿ ಓದುತ್ತಿರುವಾಗಲೇ 'ಮಾವನ ಮಗಳು' ನಾಟಕದಲ್ಲಿ ಹಾಸ್ಯ ಪಾತ್ರ ಮಾಡಿದರು. ಮುಂದೆ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಖ್ಯಾತ ಹಾಸ್ಯ ರಂಗನಟ ದಿ|| ಮಲ್ಲೋಜಿ ರಾವ್ ಹಾಗೂ ಕೆ.ಆರ್. ಭಟ್‌ರವರ ಒಡನಾಟದಲ್ಲಿ ಹವ್ಯಾಸಿ ಕಲಾವಿದರ ಸಂಘ ಸ್ಥಾಪಿಸಿ ಹಲವಾರು ಯಶಸ್ವಿ ನಾಟಕಗಳಲ್ಲಿ, ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿ ರಂಗಪ್ರೇಮಿಗಳ ಮೆಚ್ಚುಗೆ ಪಡೆದರು.

ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಜಾನಪದ, ಅಸಂಗತ ಪ್ರಕಾರದ ಪ್ರಯೋಗಗಳಲ್ಲಿ ನೂರಕ್ಕೂ ಹೆಚ್ಚು ನಾಟಕಗಳಲ್ಲಿ 300 ಸುಮಾರು ಪ್ರದರ್ಶನಗಳಲ್ಲಿ ನಾಯಕ ಪಾತ್ರಧಾರಿಯಾಗಿ, ಹಾಸ್ಯ ನಟನಾಗಿ, ಪೋಷಕ ನಟನಾಗಿ ಗಮನ ಸೆಳೆದಿದ್ದಾರೆ. ನಾಯೀಕತೆ, ಮಹಿಮಾಪುರ, ದಫನ್, ರಾಕ್ಷಸ, ಅಂತ್ಯವಲ್ಲ-ಇದು-ಆರಂಭ, ಮಹಾನಟಿ, ಆರ್, ಹುಚ್ಚ, ಸಾಕ್ಷಿಕಲ್ಲು, ಗೋರಿಗೊಂದು ಹದ್ದು, ಬೆಕ್ಕು- ಬಾವಿ, ಕಾಲ ಧರ್ಮ, ಗಂಡಸ್ಕತ್ರಿ, ಬಂಡ್ವಾಳವಿಲ್ಲದ ಬಡಾಯಿ, ಕುಂಟಾ ಕುಂಟಾ ಕುರುವತ್ತಿ, ಗುರ್ತಿನವರು, ಅಳಿಯ ದೇವರು, ಹೆಂಡತಿಯೇ ನಿನಗೆ ನಮೋ ನಮೋ, ಸಂಗೊಳ್ಳಿ ರಾಯಣ್ಣ ಇವರು ಅಭಿನಯಿಸಿದ ಕೆಲವು ಪ್ರಮುಖ ನಾಟಕಗಳು. ಅಲ್ಲದೆ ಹೊಸಪೇಟೆ ಆಕಾಶವಾಣಿಯ ನಾಟಕ ಕಲಾವಿದರೂ ಆಗಿದ್ದಾರೆ.

ಕರ್ನಾಟಕದಾದ್ಯಂತ ನಡೆಯುವ ಹಲವಾರು ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ನಟನೆಗೆ, ವಸ್ತ್ರ ವಿನ್ಯಾಸಕ್ಕೆ ಪ್ರಶಸ್ತಿ ಪ್ರಶಂಸೆ ಗಳಿಸಿದ್ದಾರೆ. ಐದು ವರ್ಷಗಳಿಂದ ಮುಂಬಯಿಯಲ್ಲಿ ಜರುಗುತ್ತಿರುವ ಕುವೆಂಪು ಸ್ಮಾರಕ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ ಕನ್ನಡ ಕಲಾ ಸಂಘದಿಂದ ಭಾಗವಹಿಸಿ ಹ್ಯಾಟ್ರಿಕ್ ಪ್ರಶಸ್ತಿ ಗಳಿಸಲು ಕಾರಣರಾಗಿದ್ದಾರೆ. ಟಿ.ಪಿ. ಕೈಲಾಸಂ ಬಗ್ಗೆ ಅಪಾರ ಪ್ರೀತಿಯುಳ್ಳ ಬದರಿ ನಾರಾಯಣ ಸಂಘದ ವತಿಯಿಂದ ಪ್ರತಿ ವರ್ಷ ಕೈಲಾಸಂ ದಿನಾಚರಣೆಯನ್ನು ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದಿದ್ದಾರೆ. ಇವರ ಮತ್ತೊಂದು ಹೆಗ್ಗಳಿಕೆಯ ಕಾರ್ಯವೆಂದರೆ ನಾಟಕ ಪುಸ್ತಕಗಳನ್ನು ಸಂಗ್ರಹಿಸಿ ತಮ್ಮ ಮನೆಯಲ್ಲಿ ಚಿಕ್ಕ ನಾಟಕ ಪುಸ್ತಕಗಳ ಗ್ರಂಥಾಲಯವನ್ನು ಹೊಂದಿದ್ದಾರೆ.

ಬಹುಮುಖ ಪ್ರತಿಭೆಯ ಬದರಿ ನಾರಾಯಣ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಬಗ್ಗೆ ಅಪಾರ ಕಾಳಜಿವುಳ್ಳವರಾಗಿ, ರಂಗಭೂಮಿಯ ಮೂಲಕ ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ.



**ಕೆ. ಪಿ. ಬಲರಾಮೇಗೌಡ**

ಜನನ : 5-5-1951

*ವಿಳಾಸ :*

ಕಾಮನ ಘಟ್ಟ, ಡಿ. ತುಮಕೂರು ಅಂಚೆ
ಚನ್ನರಾಯಪಟ್ಟಣ
ಹಾಸನ - 574 131

ಬಲರಾಮೇಗೌಡರು ಬಿ.ಎ. ಪದವೀಧರರು. ಸಮಾಜ ಸೇವೆಯಲ್ಲಿ ಉತ್ಸುಕತೆ ಇರುವವರು. ರಂಗಭೂಮಿಯ ನಟನೆ ಅವರ ಪ್ರವೃತ್ತಿ.

'ಕಲ್ಲೇಶ್ವರ ಯುವಕ ಸಂಘ' ವನ್ನು ಹುಟ್ಟೂರಿನಲ್ಲಿ ಸ್ಥಾಪಿಸಿ, ಸಂಸ್ಥೆಯ ಅಧ್ಯಕ್ಷರಾಗಿ ಸಾಮಾಜಿಕ ಸೇವಾಕಾರ್ಯಗಳೊಂದಿಗೆ, ರಂಗ ಪ್ರಯೋಗಗಳನ್ನು ಮಾಡುತ್ತಾ ರಾಜ್ಯದ ವಿವಿಧ ಭಾಗಗಳಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿದ್ದಾರೆ.

ಬಸ್‌ಹಮಾಲ, ದೇವದಾಸಿ, ಗೌಡರ ಗದ್ದಲ, ಕುರಿದೊಡ್ಡಿ ಕುರುಕ್ಷೇತ್ರ, ಸಮಕ್ಷಮ, ಎಲ್ಲರೂ ನಮ್ಮವರೇ, ಕರಿಭಂಟ, ಕುರುಕ್ಷೇತ್ರ, ರಾಮಾಯಣ, ಕಂಬಳಿ ನಾಗದೇವ ಇವರ ಅಭಿನಯದ ಕೆಲವು ನಾಟಕಗಳು.

ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಇವರ ಅಭಿನಯದ ನಾಟಕಗಳು ಪಾಲ್ಗೊಂಡು ಉತ್ತಮ ನಟನೆಗಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.



ಬಷೀರ್

ಬೆಂಗಳೂರಿನವರೇ ಆದ ಬಷೀರ್ ಪ್ರಸಿದ್ಧ ನಾಟಕಕಾರರು. ಕಳೆದ ನಲವತ್ತು ವರ್ಷಗಳಿಂದ ಹಲವಾರು ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಜಾನಪದ ನಾಟಕಗಳನ್ನು ರಚಿಸಿ ಪ್ರೇಕ್ಷಕರ ಒಲುಮೆ ಗಳಿಸಿದವರು. ಇದುವರೆಗೂ ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ ಕನ್ನಡ ರಂಗಭೂಮಿಗಾಗಿ ನೀಡಿದ್ದಾರೆ. ಎಲ್ಲ ನಾಟಕಗಳು ರಂಗಕ್ಕೆ ಅಳವಡಿಸಿ ನೂರಾರು ಪ್ರದರ್ಶನಗಳನ್ನೂ ಕಂಡಿವೆ. ರಕ್ತಾಂಜಲಿ, ಟಿಪ್ಪು ಸುಲ್ತಾನ, ಕಿತ್ತೂರು ಚೆನ್ನಮ್ಮ ಇವರ ಕೆಲವು ಪ್ರಸಿದ್ಧ ನಾಟಕಗಳು.

ಸುಬ್ಬಯ್ಯನಾಯ್ಡು ಕಂಪೆನಿಯಲ್ಲಿ ಸೇವೆ ಸಲ್ಲಿಸಿರುವ ಬಷೀರ್, ಅವರದೇ ರಚನೆಯ 'ನಂದಾದೀಪ' ನಾಟಕವನ್ನು ಪ್ರದರ್ಶಿಸಿದ್ದಾರೆ. ಜಯಚಾಮ ರಾಜೇಂದ್ರ ಒಡೆಯರು, ಗುಬ್ಬಿ ವೀರಣ್ಣ, ಅನಕೃ, ಕಾರ್ಯಪ್ಪ ಮುಂತಾದ ಹಿರಿಯರ ಸಮುಖ್ಯದಲ್ಲಿ ನಾಟಕಾಭಿನಯ ನೀಡಿದ್ದಾರೆ. ದೆಹಲಿ ಹಾಗೂ ಭೂಪಾಲಿನಲ್ಲಿ ಟಿಪ್ಪು, ಶಿವಶಕ್ತಿ, ರಕ್ತಾಂಜಲಿ ನಾಟಕಗಳ ಪ್ರದರ್ಶನ ನೀಡಿದ್ದಾರೆ.

ಕನ್ನಡ ನಾಡು ನುಡಿಯ ಕುರಿತು ರಚಿಸಿದ ಹಲವು ರೂಪಕಗಳು ದೂರದರ್ಶನದಲ್ಲಿ ಪ್ರಸಾರವಾಗಿದೆ. ಆಕಾಶವಾಣಿಯಲ್ಲಿ ಪ್ರಮುಖ ನಾಟಕಗಳಲ್ಲಿ ಕಲಾವಿದನಾಗಿ ಪಾಲ್ಗೊಂಡಿದ್ದಾರೆ.

ಕೆಂಪೇಗೌಡ ಪ್ರಶಸ್ತಿ, ಡಾ|| ರಾಜ್‌ಕುಮಾರ್ ಪ್ರಶಸ್ತಿಯೊಂದಿಗೆ ಕರ್ನಾಟಕ ನಾಟಕ ಅಕಾಡೆಮಿ 1999ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.



**ಎಸ್. ಬಸವರಾಜು**

ಜನನ : 1953

*ವಿಳಾಸ :*

ನಂ.19, ನಾಗಸಂದ್ರ ಕಾಲೋನಿ
ನಾಗಸಂದ್ರ, ಅಂಚೆ
ಬೆಂಗಳೂರು - 73

ಕಳೆದ 38 ವರ್ಷಗಳಿಂದ ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಿ ಅಭಿನಯದೊಂದಿಗೆ, ಪ್ರಸಾಧನ ಕಲಾವಿದರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ ಬಸವರಾಜು.

ನಟ ಎಂ. ಎಸ್. ಸತ್ಯ ಮತ್ತು ಎಂ.ಎಸ್. ಉಮೇಶ್‌ರವರ ಉತ್ತೇಜನದಿಂದ ವರದಾಚಾರ್ಯರ ನಾಟಕ ಕಂಪೆನಿಯಿಂದ ರಂಗಭೂಮಿಗೆ ನಟನಾಗಿ ಪರಿಚಿತರಾದರು. ಡಿಂಗ್ರಿ ನಾಗರಾಜ್, ನರಸಿಂಹರಾಜು, ಮುಸುರಿ ಕೃಷ್ಣಮೂರ್ತಿ, ಗುರುರಾಜುಲು ನಾಯ್ಡು ಮುಂತಾದವರು ನಡೆಸುತ್ತಿದ್ದ ವೃತ್ತಿ ಕಂಪೆನಿಗಳ ಟಿಪ್ಪುಸುಲ್ತಾನ್, ಸತ್ಯಹರಿಶ್ಚಂದ್ರ, ಸದಾರಮೆ, ಮಕ್ಮಲ್ ಟೋಪಿ, ಜೀವ ಯಾವ ಕುಲ ಆತ್ಮ ಯಾವ ಕುಲ, ಬೀದಿ ಕಾಮಣ್ಣ, ಸಾಹುಕಾರ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಅಂತೆಯೇ ಹವ್ಯಾಸಿ ರಂಗಭೂಮಿಯ ಮಹಾಮನೆ, ಹುತ್ತವ ಬಡಿದರೆ, ಕತ್ತಲೆ ದಾರಿ ದೂರ, ಮ್ಯಾಕ್‌ಬೆತ್, ತ್ಯಾಗಿ, ಗೆಲಿಲಿಯೋ, ಮುಖ್ಯಮಂತ್ರಿ, ಕುರಿ, ಎಮರ್ಜೆನ್ಸಿ, ಮೋಡಗಳು, ಕಾಲಿಗುಲಾ, ತೊಘಲಕ್, ಉತ್ತಮ ಪ್ರಭುತ್ವ, ಲೊಳಲೊಟ್ಟೆ, ಲಕ್ಷಾಪತಿ ರಾಜನ ಕಥೆ, ಸತ್ತವರ ನೆರಳು ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯದ ಛಾಪು ಮೂಡಿಸಿದ್ದಾರೆ.

1970ರಿಂದ ವೃತ್ತಿ ರಂಗಭೂಮಿಯ ಹಾಗೂ ಹವ್ಯಾಸಿ ರಂಗಭೂಮಿಯ ನಾಟಕಗಳಿಗೆ, ಶಾಲೆ ಕಾಲೇಜು ನಾಟಕಗಳಿಗೆ, ಹಲವಾರು ನೃತ್ಯ ಕಾರ್ಯಕ್ರಮಗಳಿಗೆ ಪ್ರಸಾಧನ ಮಾಡಿದ್ದಾರೆ. ಪ್ರಸಾಧನ ಕಲೆಗೆ ಇವರ ಗುರು ಮೇಕಪ್ ನಾಣಿ.



**ಭಗವಂತಪ್ಪ ಹೂಗಾರ**

ಜನನ : 4-9-1953

ವಿಳಾಸ :
ಬಗ್ಗೂರು, ರಾರಾವಿ
ಶಿರಗುಪ್ಪಾ, ಬಳ್ಳಾರಿ

ತಬಲವೆಂದರೆ ಭಗವಂತಪ್ಪ, ಭಗವಂತಪ್ಪ ಎಂದರೆ ತಬಲ ಎನ್ನುವಷ್ಟರ ಮಟ್ಟಿಗೆ ಲಿಂಗಸುಗೂರು ಭಾಗದ ಜನತೆಗೆ ಭಗವಂತಪ್ಪನವರು ಚಿರಪರಿಚಿತರು. ಮೂಲತಃ ಇವರು ಗುಲ್ಬರ್ಗಾ ಜಿಲ್ಲೆಯ ಅಪಜಲಪೂರ ತಾಲೂಕಿನ ಕಲ್ಲೂರಿನವರು. ಇವರ ತಂದೆ ಶಂಕ್ರಪ್ಪ ಹೂಗಾರ ಚರ್ಮ ವಾದ್ಯ ನುಡಿಸುವುದರಲ್ಲಿ ಪರಿಣತರು. ಭಗವಂತಪ್ಪನವರು ಪ್ರಾರಂಭಿಕ ತಬಲ ಶಿಕ್ಷಣವನ್ನು ತಂದೆಯಿಂದಲೇ ಪಡೆದುಕೊಂಡರು. ನಂತರ ಗದುಗಿನ ವಿರೇಶ್ವರ ಪುಣ್ಯಾಶ್ರಮದಲ್ಲಿ 15 ವರ್ಷ ತಬಲ ಶಿಕ್ಷಣ ಪಡೆದುಕೊಂಡರು. 1975 ರಿಂದ ಬಳ್ಳಾರಿ ಜಿಲ್ಲೆಯ ಶಿರಗುಪ್ಪಾ ತಾಲೂಕಿನ ಅಗಸನೂರ ಗ್ರಾಮದಲ್ಲಿ ನೆಲೆಸಿ ತಬಲಾ ಸೇವೆ ಮಾಡುತ್ತಿದ್ದಾರೆ. ನಾಡಿನ ಹಾಗೂ ರಾಷ್ಟ್ರದ ಹೆಸರಾಂತ ಗಾಯಕ ವಾದಕರಿಗೆ ತಬಲ ಸಾಥ್ ನೀಡಿದ್ದಾರೆ.

ಪೂನಾ, ಭೂಪಾಲ್, ಮುಂಬೈ, ಮದ್ರಾಸ್, ಹೈದ್ರಾಬಾದ್, ಮೈಸೂರು, ಮಂಗಳೂರು, ಧರ್ಮಸ್ಥಳ, ಶಿವಮೊಗ್ಗ, ಮುಂತಾದ ಕಡೆ ತಬಲ ಸಾಥ್ ನೀಡಿ ಜನಮೆಚ್ಚುಗೆ ಗಳಿಸಿದ್ದಾರೆ.



## ಭಗವಂತರಾವ್ ಕಾಳಪ್ಪ ವಿಶ್ವಕರ್ಮ

ಜನನ : 1943

*ವಿಳಾಸ :*
ಕಣ್ಣೂರು
ಗುಲಬರ್ಗಾ - 585316

ಭಗವಂತರಾವ್ ಗುಲಬರ್ಗಾ ಜಿಲ್ಲೆಯ ಕಣ್ಣೂರ ನಿವಾಸಿಗಳು. ಬಾಲ್ಯದಿಂದಲೇ ರಂಗಕಲೆಗೆ ಮಾರು ಹೋದವರು.

ಇವರ ಚಿಕ್ಕಪ್ಪ ತೀರ್ಥಪ್ಪ ವಿಶ್ವಕರ್ಮ ಕಣ್ಣೂರ ತಬಲ ಶಿಕ್ಷಕರು ಹಾಗೂ ವೀರಯ್ಯಸ್ವಾಮಿ ಹಾರ್ಮೋನಿಯಂ ಶಿಕ್ಷಕರಾಗಿ, ಸ್ಥಳೀಯ ಪ್ರತಿಭೆಗಳಿಗೆ ನಾಟಕ ಕಲಿಸುತ್ತಾ ಬಂದವರು. ಅಲ್ಲದೆ ಇವರ ತಂದೆ ಕಾಳಪ್ಪಾ ಹಾಗೂ ಅಜ್ಜ ಭಗವಂತಪ್ಪಾ ಬಯಲಾಟ, ದೊಡ್ಡಾಟಗಳಲ್ಲಿ ಪಾತ್ರವಹಿಸಿ ಜನಮೆಚ್ಚುಗೆ ಪಡೆದಿದ್ದರು. ಇಂಥ ಕಲಾವಿದ ಕುಟುಂಬದ ಬೆಂಬಲದಿಂದಾಗಿ ಭಗವಂತರಾವ್ ಸಂಗೀತ, ನಟನೆ ಎರಡರಲ್ಲೂ ಆಸಕ್ತಿ ಬೆಳೆದು, 'ಅಕ್ಷಯಾಂಬರ' ಎಂಬ ಪೌರಾಣಿಕ ನಾಟಕದಿಂದ ರಂಗಭೂಮಿ ಪ್ರವೇಶವಾಯಿತು.

ರಂಗ ಸಂಗೀತದಲ್ಲೂ ಆಸಕ್ತಿಯಿಂದ ಶ್ರೀ ಅಂಕಾರಾವ್ ಮಾಸ್ತರ ಅವರಲ್ಲಿ ಹಾರ್ಮೋನಿಯಂ ಕಲಿತರು. ಚನ್ನವೀರ ಶಿವಾಚಾರ್ಯ ನಾಟ್ಯ ಸಂಘದ ವತಿಯಿಂದ ಹಳ್ಳಿ ಹಳ್ಳಿಯ ನಾಟಕ ಪ್ರದರ್ಶನಗಳಲ್ಲಿ ಹಾರ್ಮೋನಿಯಂ ವಾದಕರಾಗಿ ದುಡಿದಿದ್ದಾರೆ. ಗುಲಬರ್ಗಾ ಜಿಲ್ಲೆಯಾದ್ಯಂತ ನಾಟಕ ಮಾಸ್ತರಾಗಿ ಕೆಲಸ ಮಾಡಿದ್ದಾರೆ.

ತಮ್ಮ 12ನೇ ವಯಸ್ಸಿಗೆ ಆರಂಭಿಸಿದ ಕಲಾಸೇವೆ ಇಲ್ಲಿಯವರೆಗೆ ನಿರಂತರವಾಗಿ ಮುಂದುವರೆಸುತ್ತಾ ಬಂದು, ತಮ್ಮ ಇಳಿ ವಯಸ್ಸಿನಲ್ಲೂ ಕಲಾಸೇವೆಗಾಗಿ ತುಡಿಯುವ ವ್ಯಕ್ತಿಯಾಗಿದ್ದಾರೆ ಭಗವಂತರಾವ್. ಪ್ರಸ್ತುತ ಶ್ರೀ ಸರ್ವಜ್ಞ ಗ್ರಾಮೀಣ ಜನಪದ ಕಲಾವೃಂದದ ಖಜಾಂಚಿಯಾಗಿ ಗ್ರಾಮೀಣ ಹೊಸ ಪ್ರತಿಭೆಗಳನ್ನು ರಂಗಕ್ಕೆ ಪರಿಚಯಿಸುವ ಕಾರ್ಯ ಮಾಡುತ್ತಿದ್ದಾರೆ.



ಜಿ. ಭೈರಪ್ಪ
ಜನನ : 12-6-1952

ವಿಳಾಸ :
ಗುಡ್ಡೇನ ಹಳ್ಳಿ ಅಂಚೆ
ತುರುವೇಕೆರೆ ತಾಲ್ಲೂಕು - 572227

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಗುಡ್ಡೇನಹಳ್ಳಿ ಗ್ರಾಮದ ಕೃಷಿಕ ಕುಟುಂಬದಲ್ಲಿ ಭೈರಪ್ಪ ಜನಿಸಿದರು. ಗಂಗಪ್ಪ, ಕೆಂಪಮ್ಮ ಇವರ ತಂದೆ ತಾಯಿಯರು. ತಂದೆ ಕಲಾವಿದರಾಗಿದ್ದು ಅವರ ಮಾರ್ಗದರ್ಶನದಲ್ಲಿ 'ಸುಭದ್ರಾ ಕಲ್ಯಾಣ' ನಾಟಕದಲ್ಲಿ ಬಾಲ ನಟನಾಗಿ ಬಣ್ಣ ಬಳಿದುಕೊಂಡರು.

ಶಾಲಾದಿನಗಳಲ್ಲಿ ನಾಟಕದ ವ್ಯಾಮೋಹ ಹೆಚ್ಚಿ ಕೆಲವು ನಾಟಕಗಳಲ್ಲಿ ನಟಿಸಿದರು. ಕಾಲೇಜು ದಿನಗಳಲ್ಲಿ 'ದೇವದಾಸಿ', 'ಸಂಗೊಳ್ಳಿ ರಾಯಣ್ಣ' ನಾಟಕಗಳಲ್ಲಿ ಕಾಲೇಜು ಉಪನ್ಯಾಸಕರ ಸಹಯೋಗದೊಂದಿಗೆ ಪಾತ್ರವಹಿಸಿ ಮೆಚ್ಚುಗೆ ಗಳಿಸಿದರು. ಪದವೀಧರನಾಗಿ ಸ್ವಗ್ರಾಮಕ್ಕೆ ಮರಳಿ, ಕಲೆಯ ನಂಟನ್ನು ಗ್ರಾಮೀಣ ಪ್ರದೇಶದಲ್ಲೂ ಬಿಂಬಿಸಬೇಕೆಂಬ ಇಚ್ಛೆಯಿಂದ ತುರುವೇಕೆರೆಯ ಹೆಸರಾಂತ ನಾಟಕದ ಮೇಷ್ಟ್ರರಾಗಿದ್ದ ಎಚ್. ಬಿ. ಹುಚ್ಚಪ್ಪನವರ ಗರಡಿಯಲ್ಲಿ ರಾಮಾಯಣ, ತ್ರಿಜನ್ಮಮೋಕ್ಷ, ಕುರುಕ್ಷೇತ್ರ ನಳವಿಜಯ ನಾಟಕಗಳನ್ನು ಪ್ರಯೋಗಿಸಿದರು.

ಇವರ ಕಲಾಪ್ರೌಢಿಮೆಯನ್ನು ಕಂಡು ಹಲವಾರು ಸಂಘ, ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಸ್ವಗ್ರಾಮದಲ್ಲಿ ಕಿರಿಯ ಕಲಾವಿದರಿಗೆ ಸ್ಫೂರ್ತಿಯಾಗಿ, ಮಾರ್ಗದರ್ಶಕರಾಗಿರುವ ಭೈರಪ್ಪನವರು, ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರಂಗೋತ್ಸವ ನಡೆಸಬೇಕೆಂಬ ಬಯಕೆ ಉಳ್ಳವರಾಗಿದ್ದಾರೆ.



**ಕೆ. ಎಸ್. ಮಂಜುನಾಥ್**

ವಿಳಾಸ :
ಕೆ. ಎಸ್. ಮಂಜುನಾಥ್
ಆಪ್ತ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪ್ರಸ್ತುತ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಗರಾಭಿವೃದ್ಧಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಕೆ. ಎಸ್. ಮಂಜುನಾಥ್ ಕಳೆದ ಎರಡು ದಶಕಗಳಿಂದ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆ.ಜಿ.ಎಸ್. ಕ್ಲಬ್‌ನ ಕಲಾದರ್ಶಿಯಾಗಿಯೂ ಸೇವೆ ಸಲ್ಲಿಸಿರುವ ಮಂಜುನಾಥ್ ತಮ್ಮ ಈ ಅವಧಿಯಲ್ಲಿ 'ರಂಗ-ವೈಶಾಖ-95' ಎಂಬ ಹೆಸರಿನಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಹುಣಸವಾಡಿ ರಾಜನ್ ನಿರ್ದೇಶನದ 'ಉದ್ಭವ', ಅಶೋಕ್ ಸಂದೀಪ್ ನಿರ್ದೇಶನದ 'ಸೂರ್ಯ ಶಿಕಾರಿ', ಅನಂತ ರಂಗಾಚಾರ್ ನಿರ್ದೇಶನದ 'ಕೋಮಲ ಗಾಂಧಾರ', ಪ್ರಭಾಕರ ಬಾಬು ನಿರ್ದೇಶನದ ವೀರಯೋಧ, ಹೀಗೆ ವಿವಿಧ ನಿರ್ದೇಶಕರ ಮಾರ್ಗದರ್ಶನದಲ್ಲಿ ಉತ್ತಮ ನಟನಾಗಿ ರೂಪುಗೊಂಡಿದ್ದಾರೆ.

ಅಖಿಲಭಾರತ ಸಿವಿಲ್ ಸರ್ವೀಸಸ್ ನಾಟಕ ಸ್ಪರ್ಧೆಗಳಲ್ಲಿಯೂ ಭಾಗವಹಿಸಿರುವ ಮಂಜುನಾಥ್ ಪ್ರಸ್ತುತ ಸಚಿವಾಲಯ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಹಾಗೂ ಹೊಸಬರು ರಂಗ ತಂಡದ ಕಾರ್ಯದರ್ಶಿಯಾಗಿ ಎರಡೂ ತಂಡಗಳಿಂದ ಉತ್ತಮ ನಾಟಕ ಪ್ರದರ್ಶನಕ್ಕೆ ಪ್ರಯತ್ನಿಸುತ್ತಿದ್ದಾರೆ. ಇವರ ನೇತೃತ್ವದಲ್ಲಿ ಉಡುಪಿ ರಂಗಭೂಮಿ ನಾಟಕ ಸ್ಪರ್ಧೆ 99 ರಲ್ಲಿ 'ಹೊಸಬರು' ತಂಡ ಐದು ಪ್ರಶಸ್ತಿಗಳನ್ನು ಪಡೆದಿದೆ. 'ಗಾನವಿನೋದಿನಿ' ಹಾಗೂ ಹೆಚ್.ಆರ್.ಎಂ. ತಂಡಗಳ ಒಡನಾಡಿಯಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನಾಯೀಕತೆ, ರಂಗೀದೊಡ್ಡಿ ರಾಮಾಣ್ಯ, ಹಂಬಲ, ಹುತ್ತದಲ್ಲಿ ಹುತ್ತ, ಸಂಕ್ರಾಂತಿ, ಪತಿತೋದ್ಧಾರ, ಬಸವೇಶ್ವರ, ಟಿಪ್ಪು ಸುಲ್ತಾನ್‌ನಂಥ ಪ್ರಯೋಗಾತ್ಮಕ ನಾಟಕಗಳಲ್ಲಿ ನಟಿಸಿದ್ದಾರೆ. ಹಲವಾರು ರಂಗ ತರಬೇತಿ ಶಿಬಿರಗಳನ್ನು ಏರ್ಪಡಿಸಿರುವ ಮಂಜುನಾಥ್ ಉತ್ತಮ ಕಾದಂಬರಿಗಳ ರಂಗ ರೂಪಾಂತರ ಮಾಡಿ, ಪ್ರಯೋಗಿಸುವ ಕಾಯಕದಲ್ಲಿ ಮಗ್ನರಾಗಿದ್ದಾರೆ.



## ಬಿ. ಟಿ. ಮಂಜುನಾಥ್

ಜನನ : 10-2-1963

ವಿಳಾಸ :

C/o ಶ್ರೀ ಮಂಜುನಾಥ ಸೈಕಲ್ ಮಾರ್ಟ್
ಹೊಸಕೆರೆ ಹಳ್ಳಿ
ಬನಶಂಕರಿ 3ನೇ ಹಂತ,
ಬೆಂಗಳೂರು - 85.

ಎ. ತಿಮ್ಮಯ್ಯ, ಬಿ.ಟಿ. ಕಮಲಮ್ಮ ದಂಪತಿಗಳ ಮಗ ಮಂಜುನಾಥ್ ರಂಗಕಲೆಯನ್ನು ಹವ್ಯಾಸವಾಗಿ ಸ್ವೀಕರಿಸಿದವರು. ತಾತ ತಿಮ್ಮನಾಯಕನವರಿಂದ ಬಳುವಳಿಯಾಗಿ ಬಂದ ನಾಟಕದ ಗೀಳು, ಶಾಲಾ ದಿನಗಳಲ್ಲೇ ನಾಟಕಗಳಲ್ಲಿ ಪಾತ್ರವಹಿಸಲು ಕಾರಣವಾಯಿತು.

ಆನಂತರ ವಿಶ್ವದಾಖಲೆ ನಿರ್ಮಿಸಿದ ಬಿ.ಜಿ. ರಾಮಕೃಷ್ಣರವರ ಜೊತೆ ನಾಟಕ ಕ್ಷೇತ್ರದ ಕೆಲಸ ಆರಂಭಿಸಿದರು. ನಾಟಕದಲ್ಲಿ ಹೆಚ್ಚಿನ ತಿಳುವಳಿಕೆಗಾಗಿ ಎ.ಎಸ್.ಮೂರ್ತಿರವರ ನಾಟಕ ಶಾಲೆಯಲ್ಲಿ ಶಿಷ್ಯರಾಗಿ ಸೇರಿ ಒಂದು ವರ್ಷದ ಔಪಚಾರಿಕ ರಂಗ ಶಿಕ್ಷಣವನ್ನು ಪೂರೈಸಿಕೊಂಡರು. ನಂತರ ಜನಪ್ರಿಯ ನಿರ್ದೇಶಕ ಮೈನಾಚಂದ್ರು ನಿರ್ದೇಶನದ 'ಮಾರನಾಯಕ' ನಾಟಕದಿಂದ ಕಲಾಪ್ರಿಯರಿಗೆ ಪರಿಚಿತರಾದರು. 'ಸಾಕ್ಷಿಕಲ್ಲು' ನಾಟಕ ಪಟ್ಟದಕಲ್ಲು ಉತ್ಸವದಲ್ಲಿ ಪಾಲ್ಗೊಂಡು ಒಳ್ಳೆಯ ಹೆಸರನ್ನು ತಂದುಕೊಟ್ಟಿತು.

ಕಲಾಭಿಲಾಷೆಯುಳ್ಳ ಗೆಳೆಯರನ್ನು ಒಗ್ಗೂಡಿಸಿ 'ದರ್ಪಣ ಕಲಾವಿದರು' ಎಂಬ ಸಂಸ್ಥೆಯನ್ನು ಸ್ಥಾಪಿಸಿ 11 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ತಂಡದಿಂದ 'ತೆರೆಗಳು', 'ಸುಳಿಗೆ ಸಿಕ್ಕವರು', 'ಸಂಗ್ಯಾಬಾಳ್ಯ', 'ಹೆಬ್ಬೆಟ್ಟು', 'ಕುರಿತೇರು', 'ಹೆಣ್ಣಿಗೊಂದು ಗಂಡು', 'ತ್ಯಾಗಿ', 'ವಿಷಜ್ವಾಲೆ', 'ಸಿದ್ಧ', 'ಮೂವತ್ತಾರಲ್ಲ ಅರವತ್ತ ಮೂರು' ನಾಟಕಗಳಿಗೆ ನಿರ್ದೇಶಕರಾಗಿ 'ಹಾವು ಹರಿದಾಡ್ತಾವಾ', 'ನನ್ನವಳ ಕಾಗದ', 'ಸಾವು ಕಾಣದ ಆತ್ಮಹತ್ಯೆ' 'ಜೋಕುಮಾರಸ್ವಾಮಿ', 'ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ', ಬೆಕುವಾ ನಾಟಕಗಳಲ್ಲಿ ನಟರಾಗಿ ಪಾಲ್ಗೊಂಡಿದ್ದಾರೆ.

ದರ್ಪಣ ತಂಡದಿಂದಲೇ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕೆ.ಎಸ್.ಭಾರತಿಯವರ ನಿರ್ದೇಶನದಲ್ಲಿ ಸಾಕ್ಷರತೆಯ 'ಬೆಳಕು' ನಾಟಕವನ್ನು ರಾಜ್ಯದ ಸುತ್ತಮುತ್ತ 22 ಪ್ರದರ್ಶನಗಳನ್ನು ನೀಡಿದ್ದಾರೆ. ಕಿರುತೆರೆಗಾಗಿ ಎಚ್.ಎಸ್. ಶಿವಶಂಕರ್‌ರವರ 'ದಾರಿ ಯಾವುದಯ್ಯ ಮುಂದೆ' ನಾಟಕವನ್ನು ನಿರ್ದೇಶಿಸಿದ್ದಾರೆ ಮಂಜುನಾಥ್. ಸುವರ್ಣ ಮಹೋತ್ಸವ ಸಲುವಾಗಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ, ಸಂಸ್ಕೃತಿ ಕಲಾಮೇಳದಲ್ಲಿ ಕಾಶಿ ಮತ್ತು ನೇಪಾಳ ರಂಗಕರ್ಮಿಯಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ ಇವರ ಮತ್ತೊಂದು ಹೆಗ್ಗಳಿಕೆ ಎಂದರೆ 1998ರ ಆಗಸ್ಟ್‌ನಲ್ಲಿ 51 ಗಂಟೆಗಳ ಸತತ ನಾಟಕ ಮಾಡಿದ್ದಲ್ಲದೆ, 24.23 ಸೆಕೆಂಡುಗಳ ಸಣ್ಣ ನಾಟಕವಾಡಿ ವಿಶ್ವದಾಖಲೆ ಮಾಡಿದ್ದಾರೆ.

ಸಾಹಿತ್ಯದಲ್ಲೂ ಸಾಕಷ್ಟು ಕೃಷಿ ಮಾಡಿರುವ ಮಂಜುನಾಥ್ ಕಿರುತೆರೆಯ ಹಲವು ಧಾರಾವಾಹಿಗಳಿಗೆ ಸಹ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. 'ದರ್ಪಣ ಕಲಾವಿದರು' ಸಂಸ್ಥೆಯ ಕಾರ್ಯದರ್ಶಿಯಾಗಿ ನಿರಂತರವಾಗಿ ರಂಗ ಚಟುವಟಿಕೆಗಳಲ್ಲಿ ಮಗ್ನರಾಗಿದ್ದಾರೆ.



## ಎನ್. ಮಂಜುನಾಥ ಗೌಡ್ರು

ಜನನ : 1952

ವಿಳಾಸ :
ಕುರುಗೋಡ ಗ್ರಾಮ
ಬಳ್ಳಾರಿ ತಾಲ್ಲೂಕು
ಬಳ್ಳಾರಿ ಜಿಲ್ಲೆ.

ಎನ್. ಮಂಜುನಾಥ ಗೌಡ್ರು ಬಳ್ಳಾರಿ ಜಿಲ್ಲೆಯ ಕುರುಗೋಡ ಗ್ರಾಮದ ನಿವಾಸಿಗಳು. ಬಿ.ಎಸ್ಸಿ.ವರೆಗೆ ವಿದ್ಯಾಭ್ಯಾಸಗೈದು, ವ್ಯವಸಾಯವನ್ನು ವೃತ್ತಿಯನ್ನಾಗಿ ಮಾಡಿಕೊಂಡರು.

ಇವರನ್ನು ರಂಗಭೂಮಿಗೆ ಪ್ರವೇಶಿಸಲು ಪ್ರೋತ್ಸಾಹ, ಮಾರ್ಗದರ್ಶನ ನೀಡಿದವರು ಶ್ರೀ ಎಳಿವಾಳ ಸಿದ್ದಯ್ಯ ಸ್ವಾಮಿಗಳು. 'ಕೊಂಡು ತಂದ ಗಂಡ' ನಾಟಕದ ಮೂಲಕ ಆರಂಭವಾದ ಇವರ ನಟನಾ ಬದುಕು ಮುಂದೆ ವಿಭಿನ್ನವಾದ ಪಾತ್ರಗಳಲ್ಲಿ ಅಭಿನಯಿಸಲು ಮೂಲವಾಯಿತು. ನಾಟಕ, ಖಳನಾಯಕ, ಪೋಷಕ, ಹಾಸ್ಯ ಹೀಗೆ ಯಾವುದೇ ಪಾತ್ರವಿರಲಿ ಲೀಲಾಜಾಲವಾಗಿ ನಟಿಸುತ್ತಿದ್ದರು.

ಚಿಕ್ಕೇನಕೊಪ್ಪದ ಶ್ರೀಶರಣರ ಬಳಗದ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಈತನಕ ಸಾವಿರಾರು ಪ್ರದರ್ಶನಗಳನ್ನು ಕಂಡಿದೆ. ಈ ನಾಟಕದಲ್ಲಿ 'ಭರಮರೆಡ್ಡಿ' ಹಾಸ್ಯಪಾತ್ರವಹಿಸಿ, ರಂಗಪ್ರಿಯರಲ್ಲಿ 'ಭರಮರೆಡ್ಡಿ', ಎಂದೇ ಖ್ಯಾತರಾದರು. ಶ್ರೀ ದೊಡ್ಡ 'ಬಸವೇಶ್ವರ ಮಹಾತ್ಮೆ' ಇವರ ಮತ್ತೊಂದು ಮಹತ್ವದ ನಾಟಕ. ಇಲ್ಲಿಯ ತನಕ ಸುಮಾರು 2000ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ ಹೆಗ್ಗಳಿಕೆ ಇವರದು. ಹಾಸ್ಯರಸಋಷಿ, ಹಾಸ್ಯ ಚಕ್ರವರ್ತಿ, ರಂಗಭೂಮಿ ನಟರಾಜ ಎಂಬೆಲ್ಲ ಬಿರುದುಗಳಿಗೆ ಪಾತ್ರರಾಗಿದ್ದಾರೆ.

ನಾಟಕವಲ್ಲದೆ ದೂರದರ್ಶನ ನಾಟಕ, ಧಾರಾವಾಹಿಗಳಲ್ಲೂ ನಟಿಸುತ್ತಿದ್ದಾರೆ. ನಟನೆ, ನಿರ್ದೇಶನ ಎರಡರಲ್ಲೂ ಪಳಗಿದ ಶ್ರೀ ಮಂಜುನಾಥ ಗೌಡರು ಬಯಲಾಟ, ದೊಡ್ಡಾಟಗಳಲ್ಲೂ ಅಭಿನಯಿಸಿದ ಅನುಭವ ಹೊಂದಿದ್ದಾರೆ. ಹಲವಾರು ಸಂಘ, ಸಂಸ್ಥೆಗಳು ಇವರನ್ನು ಸನ್ಮಾನಿಸಿ, ಗೌರವಿಸಿವೆ.



## ಮಯಬ್ರಹ್ಮಚಾರ್ ಹೆಚ್. ಎಂ.

ಜನನ : 21-7-1960

ಡಿಪ್ಲಮಾ ಪದವೀಧರರಾದ ಮಯಬ್ರಹ್ಮಚಾರ್ 1981ರಲ್ಲಿ ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ ಉದ್ಯೋಗಿಯಾಗಿ ಸೇರ್ಪಡೆ ಹೊಂದಿದರು. ಕಾರ್ಖಾನೆಯ ಲಲಿತ ಕಲಾ ಸಂಘದ ವತಿಯಿಂದ ಏರ್ಪಡಿಸುವ ವಿಭಾಗೀಯ ನಾಟಕ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಮುಖಾಂತರ ಇವರ ನಟನಾ ಬದುಕು ಆರಂಭವಾಯಿತು. ಲಲಿತ ಕಲಾಸಂಘದವರು ಏರ್ಪಡಿಸಿದ್ದ ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ರಂಗಭೂಮಿಯ ಪ್ರಾಥಮಿಕ ಶಿಕ್ಷಣವನ್ನು ಪಡೆದರು. ಶಿಬಿರದಲ್ಲಿ ತಯಾರಾದ ಹೂಲಿ ಶೇಖರ್‌ರ 'ಹಾವು ಹೆರಿದಾಡುತಾವ' ನಾಟಕದಲ್ಲಿ ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಿ ಜನಮನ್ನಣೆ ಪಡೆದರು. ರಾಜ್ಯಮಟ್ಟದ ನಾಟಕಸ್ಪರ್ಧೆಗಳಲ್ಲೂ ಮನ್ನಣೆ ಗಳಿಸಿದರು. ನಟನೆಯೊಂದಿಗೆ ಬೆಳಕು ವಿನ್ಯಾಸದ ಬಗೆಗೆ ಆಸಕ್ತಿ ಬೆಳೆಸಿಕೊಂಡರು.

ಕಾರ್ಖಾನೆಯ ನಾಟಕಗಳಿಗೆ ಮಾತ್ರ ಸೀಮಿತವಾಗದೆ ರಾಜ್ಯದ ಹೆಸರಾಂತ ಹವ್ಯಾಸಿ ತಂಡ 'ಪ್ರಯೋಗ ರಂಗ'ದ ಮಂಟೇಸ್ವಾಮಿ ಕಥಾಪ್ರಸಂಗ, ಶ್ರೀನಿವಾಸಪ್ರಭು ನಿರ್ದೇಶನದ 'ರಾಜಬೇಟೆ', ಬಿ. ಸುರೇಶ್ ನಿರ್ದೇಶನದ ಮಲ್ಲಮನ ಮನೆ ಹೋಟ್ಲು, ವಾಲ್ಟರ್ ಡಿ'ಸೋಜಾ ನಿರ್ದೇಶನದ ಸಂತೆಯಲ್ಲಿ ನಿಂತ ಕಬೀರ, ಮಹಿಪಥ ಕ್ವಾಣನ ತಂಬ್ಗಿ ಎಂ.ಎ.,ಪರಿಹಾರ, ಸುರೇಶ್ ಆನಗಳ್ಳಿ ನಿರ್ದೇಶನದ 'ವಧೂಟಿ' ಸುರೇಂದ್ರನಾಥ್ ನಿರ್ದೇಶನದ 'ಊರುಭಂಗ', ರಾಜಾರಾಂ ನಿರ್ದೇಶನದ 'ಸ್ಮಶಾನ ಕುರುಕ್ಷೇತ್ರ' ಮುಂತಾದ ಹೆಸರಾಂತ ನಾಟಕಗಳಲ್ಲಿ ಅಭಿನಯಿಸಿ, ದೇಶಾದ್ಯಂತ ನಾಟಕ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ.

ಪ್ರಸ್ತುತ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸುತ್ತಿರುವ ಮಯಬ್ರಹ್ಮಚಾರ್, ರಂಗಕ್ಷೇತ್ರದಲ್ಲಿ ಬೆಳೆಯಲು ಪ್ರೋತ್ಸಾಹ, ಅವಕಾಶಗಳನ್ನು ನೀಡುತ್ತಿರುವ ಶ್ರೀ ಕೆ.ವಿ. ನಾಗರಾಜ ಮೂರ್ತಿಯವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.



## ಮಲ್ಲಿಕಾರ್ಜುನ .ಬಿ

ಜನನ : 1953

*ವಿಳಾಸ :*
ನಂಜಪ್ಪ ಕಾಂಪೌಂಡ್
ಕೆ. ನಾರಾಯಣಪ್ಪರ
ಕೊತ್ತನೂರು ಪೋಸ್ಟ್
ಬೆಂಗಳೂರು - 77

ಹಾಸ್ಯಪಾತ್ರಗಳಲ್ಲಿ ಜೀವತುಂಬಿ ಅಭಿನಯಿಸುವ ಅಪರೂಪದ ಕಲಾವಿದ ಮಲ್ಲಿಕಾರ್ಜುನ. ವೃತ್ತಿರಂಗಭೂಮಿಯ ನಾಟಕಗಳಲ್ಲಿ ಹಾಸ್ಯನಟನಾಗಿ ಹೆಚ್ಚಾಗಿ ಪಾಲ್ಗೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆ ರಾಮಗಿರಿಯವರಾದ ಮಲ್ಲಿಕಾರ್ಜುನ ಕಲಿತದ್ದು 8ನೇ ತರಗತಿವರೆಗೆ. 1968ರಲ್ಲಿ ಕವಿಗಳಾದ ಎಸ್.ಕೆ. ಮಂಜುನಾಥ್‌ರವರ ಕಂಪನಿಯ ಮೂಲಕ ನಟರಾಗಿ ರಂಗಕ್ಕೆ ಪರಿಚಿತರಾದರು. ನಂತರ ಉತ್ತರ ಕರ್ನಾಟಕದ ಪ್ರಸಿದ್ಧ ಕಂಪನಿಗಳಾದ ಮೈಂದರ್ಗಿ ಕಂಪನಿ, ಕಡಪಟ್ಟೆ ಕಂಪನಿ, ಗೋಕಾಕ ಕಂಪನಿ, ಯೋಗಾನರಸಿಂಹರವರ ಸರ್ವೋದಯ ನಾಟಕ ಸಂಘ, ಓಬಳೇಶ್ವರ ಕಂಪನಿ, ಗುಬ್ಬಿ ಕಂಪನಿ, ಕುಮಾರೇಶ್ವರ ನಾಟ್ಯ ಸಂಘ ಹೀಗೆ ಸತತವಾಗಿ 35 ವರ್ಷಗಳಿಂದ ವೃತ್ತಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿ ಹಾಲಿ ಜಿ.ವಿ. ಕೃಷ್ಣರವರ ನಾಟಕ ಮಂಡಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಎಚ್ಚಮ ನಾಯಕ, ಟಿಪ್ಪುಸುಲ್ತಾನ್, ಹೇಮರೆಡ್ಡಿ ಮಲ್ಲಮ್ಮ, ಹರಿಶ್ಚಂದ್ರ, ಬಸ್ ಕಂಡಕ್ಟರ್, ಕೊಂಡು ತಂದ ಗಂಡ, ಚೆನ್ನಪ್ಪ ಚನ್ನೇಗೌಡ ಇತ್ಯಾದಿ ನಾಟಕಗಳಲ್ಲಿ ಮುಖ್ಯ ಹಾಸ್ಯಪಾತ್ರಧಾರಿಯಾಗಿ ಅಭಿನಯಿಸಿದ್ದಾರೆ.

ಇವರ ಪಾತ್ರಗಳ ತಲ್ಲೀನತೆಯನ್ನು ಮೆಚ್ಚಿ ಸುತ್ತ ಮುತ್ತಲಿನ ರಂಗಪ್ರಿಯರು ಹಾಸ್ಯಕಿಶೋರ, ಹಾಸ್ಯ ಚಕ್ರವರ್ತಿ, ಹಾಸ್ಯರತ್ನ ಎಂಬೆಲ್ಲಾ ಬಿರುದುಗಳನ್ನು ನೀಡಿ ಸನ್ಮಾನಿಸಿದ್ದಾರೆ.



**ಎಂ. ಸಿ. ಮಹದೇವಪ್ಪ**
ಜನನ : 2-6-1953

ವಿಳಾಸ :
2501, ಅಶೋಕನಗರ
ಮಳವಳ್ಳಿ, - 571430
ಮಂಡ್ಯ ಜಿಲ್ಲೆ

ಕರ್ನಾಟಕ ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಎಂ. ಸಿ. ಮಹದೇವಪ್ಪ, ಕಳೆದ 35ವರ್ಷಗಳಿಂದ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಚೆಲುವಯ್ಯ, ದೊಡ್ಡಮ್ಮ ಇವರ ತಂದೆ, ತಾಯಿಯರು. ತಾವು ಬಾಲ್ಯದಲ್ಲಿ ನೋಡಿದ 'ರಾಜ ಸುಯೋಗ' ಪೌರಾಣಿಕ ನಾಟಕದಿಂದ ಪ್ರಭಾವಿತರಾಗಿ ತಮ್ಮ 13ನೇ ವರ್ಷದಲ್ಲಿ 'ಧರ್ಮರತ್ನಾಕರ' ನಾಟಕದಿಂದ ರಂಗ ಪ್ರವೇಶ ಮಾಡಿದರು. ಮುಂದೆ ಕಾಲೇಜು ವಿದ್ಯಾರ್ಥಿಯಾಗಿದ್ದಾಗ 'ಮಾಂಗಲ್ಯ ಯೋಗ' ನಾಟಕದಿಂದ ಮರುಪ್ರವೇಶ ಆಯಿತು.

ಧರ್ಮರತ್ನಾಕರ, ಮಾಂಗಲ್ಯ ಯೋಗ, ಪಂಚಭೂತ, ಮೀರಿದ ಮಡದಿ, ದೇವದಾಸಿ, ಸಮಯಕ್ಕೊಂದು ಸುಳ್ಳು, ಕಂಬನಿ, ಮಹಾತ್ಯಾಗಿ ಪುಟ್ಟಕ್ಕನ ಮೆಡಿಕಲ್ ಕಾಲೇಜು, ಬೆಳ್ಳಕ್ಕಿ ಹಿಂಡು ಬೆದರ್‍ಯಾವೋ, ನಂಜು ನುಂಗಿದವರು, ಎಚ್ಚಮ ನಾಯಕ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿ, ಕೆಲವು ನಾಟಕಗಳಲ್ಲಿ ಸಹ ನಿರ್ದೇಶಕರಾಗಿ ಹಾಗೂ ನಿರ್ದೇಶಕರಾಗಿ ದುಡಿದಿದ್ದಾರೆ.

1987ರಲ್ಲಿ ನೀನಾಸಂನಲ್ಲಿ ಚಲನಚಿತ್ರ ಸಹೃದಯತೆ ಶಿಬಿರ, ಜಾನಪದ ಲೋಕದಲ್ಲಿ ಜಾನಪದ ಅಭಿರುಚಿ ಶಿಬಿರ, 1989 ಮತ್ತು 1995ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ, 1994ರಲ್ಲಿ ರಾಷ್ಟ್ರೀಯ ನಾಟಕ ಶಾಲೆ ನಡೆಸಿದ ಶಿಬಿರಗಳಲ್ಲಿ ಭಾಗವಹಿಸಿ ಔಪಚಾರಿಕವಾಗಿ ರಂಗ ಶಿಕ್ಷಣ ಪಡೆದಿದ್ದಾರೆ.

ಕಿರುತೆರೆ, ಬೆಳ್ಳಿತೆರೆಯಲ್ಲೂ ನಟರಾಗಿ ಮಿಂಚಿದ್ದಾರೆ.



## ಮಹಾಲಿಂಗು

ಜನನ : 1957

*ವಿಳಾಸ :*
ಬಾಣಾವಾರ ಗ್ರಾಮ
ನರಗನಹಳ್ಳಿ ಅಂಚೆ
ತುಮಕೂರು - 572122

ಕಳೆದ ಇಪ್ಪತ್ತು ವರ್ಷಗಳಿಗೂ ಮಿಕ್ಕು ರಂಗಭೂಮಿಯಲ್ಲಿ ನಟನಾಗಿ, ಸಂಘಟಕರಾಗಿ ಕ್ರಿಯಾಶೀಲ ರಂಗಕರ್ಮಿಯಾಗಿದ್ದಾರೆ ಮಹಾಲಿಂಗು.

'ಚಂದುಳ್ಳಿ ಚೆಲುವೆ' ಎಂಬ ಹಾಸ್ಯ ನಾಟಕದ ಮೂಲಕ ರಂಗ ಪ್ರವೇಶಿಸಿದ ಇವರು ಇದುವರೆಗೆ ಪುತ್ಥಳಿ, ಮದುವೆ ಮಾರ್ಕೆಟ್, ಎಚ್ಚಮ ನಾಯಕ, ಇನ್‌ಸ್ಪೆಕ್ಟರ್ ತಾರಾನಾಥ್, ನಾಡದೇವತೆ, ನಾನಿನ್ನು ಸತ್ತಿಲ್ಲ, ಸುಳಿ, ನಾಯಿ, ಬಸ್ ಕಂಡಕ್ಟರ್, ಚಿನ್ನದ ಗೊಂಬೆ, ಕಾರ್ಗಿಲ್ ಕಾರ್ಗಿಲ್, ಹಯವದನ ಸೇರಿದಂತೆ ಇನ್ನೂ ಹಲವಾರು ನಾಟಕಗಳಲ್ಲಿ ತಮ್ಮ ಪರಿಣತ ಪಾತ್ರಾಭಿನಯದ ಮೂಲಕ ರಂಗಪ್ರಿಯರಿಗೆ ಪರಿಚಿತರಾಗಿದ್ದಾರೆ.

ಖ್ಯಾತ ವೃತ್ತಿಪರ ಸಂಸ್ಥೆಗಳಾದ ಉದಯ ಕಲಾನಿಕೇತನ, ತುಮಕೂರಿನ ಕುಸುಮ ಕಲಾಸಂಘ, ಅಮರೇಶ್ವರ ವಿಜಯ ನಾಟಕ ಮಂಡಳಿ, ಚಿಕ್ಕಬಳ್ಳಾಪುರದ ಐಶ್ವರ್ಯ ಕಲಾನಿಕೇತನಗಳಲ್ಲೂ, ನಗರದ ಖ್ಯಾತ ಹವ್ಯಾಸಿ ತಂಡಗಳಾದ ಗೆಜ್ಜೆಹೆಜ್ಜೆ, ಸಮಸ್ತರು ಮತ್ತು ಯಕ್ಷದೇಗುಲ ರಂಗತಂಡಗಳ ಸಂಘಟನೆಯಲ್ಲಿ ಇವರು ಸಕ್ರಿಯಾತ್ಮಕವಾಗಿ ಪಾಲ್ಗೊಂಡಿದ್ದಾರೆ.

ಕನ್ನಡ ರಂಗಭೂಮಿಯ ಖ್ಯಾತ ನಾಮರಾದ ವಿ. ರಾಮಮೂರ್ತಿ, ಬಿ.ವಿ. ಕಾರಂತ, ಬಿ.ಎನ್. ನಾಣಿ, ಗೋಪಾಲಕೃಷ್ಣ ನಾಯರಿ, ಹೆಚ್.ವಿ. ವೆಂಕಟಸುಬ್ಬಯ್ಯರಂಥ ದಿಗ್ಗಜರೊಂದಿಗೆ ದುಡಿದು ಸಾಕಷ್ಟು ರಂಗಾನುಭವವನ್ನು ಪ್ರಾಪ್ತಿಮಾಡಿಕೊಂಡಿದ್ದಾರೆ.

ಮಹಾಲಿಂಗು ರಂಗಭೂಮಿಯಲ್ಲಿ ತಮ್ಮದೇ ಆದ ಧ್ಯೇಯವನ್ನು ಹೊಂದಿದ್ದಾರೆ. ಮುಖ್ಯವಾಗಿ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವುದು ಇವರ ಸದಾಶಯಗಳಲ್ಲಿ ಒಂದು. ಇದಕ್ಕೆ ಪೂರಕವಾಗಿ 1999 - 2000 ಸಾಲಿನ ಭಾರತ ಸರ್ಕಾರದ ಸಚಿವಾಲಯದ ಪರಿಕಲ್ಪದಡಿಯಲ್ಲಿ ಮೇಲ್ಕಂಡ ರಂಗದಿಗ್ಗಜರ ಮಾರ್ಗದರ್ಶನದಲ್ಲಿ ತುಮಕೂರು ಪಕ್ಕದ ಗೂಳೂರು ಗ್ರಾಮದಲ್ಲಿ ರಂಗಾಭಿನಯ ತರಬೇತಿ ಶಿಬಿರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.



## ಮಾಲತಿ ಮೇಲ್ಮನೆ

ಜನನ : 5-6-1961

ಮಾಲತಿ ಮೇಲ್ಮನೆ ವೃತ್ತಿಯಿಂದ ಕಾಲೇಜು ಉಪನ್ಯಾಸಕಿ. ಸಾಗರದವರಾದ ಮಾಲತಿ ಮೈಸೂರು ವಿಶ್ವವಿದ್ಯಾಲಯದಿಂದ 'ರಸಾಯನ ಶಾಸ್ತ್ರ' ವಿಷಯದಲ್ಲಿ ಎಂ.ಎಸ್ಸಿ. ಪದವಿ ಪಡೆದಿದ್ದಾರೆ. ರಂಗಭೂಮಿ ಇವರಿಗೆ ಹವ್ಯಾಸಿ ಕ್ಷೇತ್ರ. ನಾಟಕ ಶಾಸ್ತ್ರದಲ್ಲಿ ಡಿಪ್ಲೊಮಾ ಪದವಿ ಪಡೆದು ರಂಗಭೂಮಿಯ ಔಪಚಾರಿಕ ಶಿಕ್ಷಣವನ್ನು ಪಡೆದಿದ್ದಾರೆ.

ಬಿ. ಜಯಶ್ರೀಯವರ 'ಸ್ಪಂದನ' ತಂಡದ ಸದಸ್ಯೆಯಾಗಿರುವ ಮಾಲತಿ ಈ ಮುಂಚೆ ಪ್ರೊ॥ ಬಿ.ಸೀ., ನಾಣಿ, ವೆಂಕಟಸುಬ್ಬಯ್ಯ, ಸುಧೀಂದ್ರಶರ್ಮ, ಆರ್.ಟಿ. ರಮಾ, ಬಿ. ಸುರೇಶ್, ಸುರೇಶ್ ಆನಗಳ್ಳಿ, ಪ್ರಮೋದ್ ಶಿಗ್ಗಾಂವ್, ಬಿ.ವಿ. ರಾಜಾರಾಂ, ಜಯಶ್ರೀ, ಎಸ್.ಕೆ. ಮಾಧವರಾವ್ ಹೀಗೆ ಹೆಸರಾಂತ ರಂಗ ನಿರ್ದೇಶಕರ ಅಡಿಯಲ್ಲಿ ನಟಿಸಿದ ಅನುಭವ ಹೊಂದಿದ್ದಾರೆ. ಮುಖ್ಯಮಂತ್ರಿ, ಮೃಚ್ಛಕಟಿಕ, ಒಥೆಲೋ, ಅಮ್ಮಾ ರಿಟೈರ್ಡ್ ಆಗ್ತಾಳೆ, ಸಂಚಯನ, ಸ್ವಪ್ನ ವಾಸವದತ್ತ, ಪ್ರತಿಜ್ಞಾ ಯೌಗಂಧರಾಯಣ, ಪಂಚರಾತ್ರಿ, ಅಂತಿಗೊನೆ, ಲಕ್ಷಾಪತಿ ರಾಜನ ಕಥೆ, ಚಿತ್ರಪಟ, ಕರಿಮಾಯಿ, ಅಗ್ನಿಪಥ, ಆಷಾಢಭೂತಿ, ಕಿಸಾಗೌತಮಿ, ನೆರಳು, ಮ್ಯಾಕ್‌ಬೆತ್, ಯಯಾತಿ, ಸ್ಮಶಾನ ಕುರುಕ್ಷೇತ್ರ, ಚಿರಸ್ಮರಣೆ, ಸಂಕ್ರಾಂತಿ ಇವರು ಪಾತ್ರವಹಿಸಿರುವ ಕೆಲವು ನಾಟಕಗಳು.

ಬಹುಮುಖ ಪ್ರತಿಭೆಯ ಮಾಲತಿ ಹಲವು ಮಕ್ಕಳ ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ. ರಂಗ ತರಬೇತಿ ಶಿಬಿರಗಳಲ್ಲಿ ಉಪನ್ಯಾಸಕಿಯಾಗಿ, ನಾಟಕಗಳಿಗೆ ವಸ್ತ್ರವಿನ್ಯಾಸಕಿಯಾಗಿ, ಭಾನುವಾರ ರಂಗಶಾಲೆಯಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಿರುತೆರೆಗಾಗಿ ಹಲವು ಕಾರ್ಯಕ್ರಮಗಳನ್ನು ತಯಾರಿಸಿದ್ದಾರೆ. ಆಕಾಶವಾಣಿಗಾಗಿ ಮಕ್ಕಳ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ಹಲವು ಸಾಕ್ಷ್ಯ ಚಿತ್ರಗಳಿಗೆ, ಜಂಗಲ್ ಬುಕ್, ದ ಲಾಸ್ಟ್ ಡೈನಾಸುರ್, ಪ್ರಾಣಿ ಪ್ರಪಂಚದ ಪಾತ್ರಧಾರಿಗಳಿಗೆ ಧ್ವನಿ ನೀಡಿದ್ದಾರೆ.



**ಮಾಲಾರಾಣಿ**

ಜನನ : 18-5-1965

ವಿಳಾಸ :

ನಂ. 1065, ಎನ್.ಜಿ.ಓ.ಎಸ್. ಕಾಲೋನಿ

ಕಮಲಾನಗರ

ಬೆಂಗಳೂರು - 79

ಕಲಾವಿದೆ ಮಾಲಾರಾಣಿ ಶ್ರೀ ಕಾಶೀಮ್ ಸಾಬ್ ಮತ್ತು ಶ್ರೀಮತಿ ಜಯರಾಬಿಯವರ ಮಗಳು. ಈಗ ಬೆಂಗಳೂರಿನ ನಿವಾಸಿಯಾಗಿದ್ದರೂ ಮೂಲತಃ ಬಾಗಲಕೋಟೆ ಜಿಲ್ಲೆಯ ಕಮತಗಿ ಇವರ ಹುಟ್ಟೂರು. ರಂಗಭೂಮಿಯ ಅನುಭವವೇ ನನ್ನ ವಿದ್ಯಾರ್ಹತೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮಾಲಾರಾಣಿ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ಮಾತಿನಂತೆ ರಂಗದಲ್ಲಿ ದುಡಿದದ್ದನ್ನು ಮತ್ತೆ ರಂಗಭೂಮಿಗೆ ನೀಡಿ ಬದುಕನ್ನು ಸವೆಸುತ್ತಿದ್ದಾರೆ.

ಇವರ ರಂಗಪ್ರವೇಶ ಬಾಲ್ಯದಲ್ಲೇ ನಡೆಯಿತು. 1974ರಲ್ಲಿ ದಿ|| ನ್ಯಾಮತಿ ಶಾಂತಪ್ಪ ಮಾಲೀಕತ್ವದ 'ಶ್ರೀ ಮಹೇಶ್ವರ ನಾಟ್ಯ ಸಂಘ' ಧಾರವಾಡದಲ್ಲಿ ಕ್ಯಾಂಪ್ ಮಾಡಿದ್ದಾಗ, ಶಾಂತಪ್ಪನವರು ನಿರ್ದೇಶಿಸಿದ 'ಟಿಪ್ಪು ಸುಲ್ತಾನ್' ನಾಟಕದಲ್ಲಿ ಟಿಪ್ಪುವಿನ ಮಗನ ಪಾತ್ರದಿಂದ ಬಣ್ಣದ ಬದುಕು ಆರಂಭವಾಯಿತು. ನಂತರ ರಾಜಾ ಸತ್ಯ ಹರಿಶ್ಚಂದ್ರ, ಲಂಕಾದಹನ, ತಾಯಿಕರುಳು, ಶ್ರೀ ರೇಣುಕ ಎಲ್ಲಮ್ಮ ನಾಟಕಗಳಲ್ಲಿ ಬಾಲ ಕಲಾವಿದೆಯಾಗಿ ನಟಿಸಿದರು. ಮುಂದಿನ ದಿನಗಳಲ್ಲಿ ಶ್ರೀಮತಿ ಸುಮಿತ್ರಮ್ಮ ಕುಂದಾಪುರ್, ಗೋಕಾಕ್ ಬಸವಣ್ಣೆಪ್ಪನವರ ಕಂಪೆನಿ, ಹುಬ್ಬಳ್ಳಿಯ ತೆರೇಸಮ್ಮಾ ಕಂಪೆನಿ, ಗುಡಿಗೇರಿಯ ಎನ್. ಬಸವರಾಜ್ ಕಂಪೆನಿ, ಕೆ.ಬಿ.ಆರ್. ಡ್ರಾಮಾ ಕಂಪೆನಿ, ಚಿಂದೋಡಿ ಶ್ರೀಕಂಠೇಶ್ ಕಂಪೆನಿ ಹೀಗೆ ಸುಮಾರು 18 ವರ್ಷಗಳ ಕಾಲ ವೃತ್ತಿರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

ರಂಗಭೂಮಿಯ ಹಲವು ವರ್ಷಗಳ ಅನುಭವದಿಂದ 1982 ರಲ್ಲಿ 'ಶ್ರೀ ಅನ್ನಪೂರ್ಣೇಶ್ವರಿ ನಾಟಕ ಸಂಘ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಕರ್ನಾಟಕದ ಪ್ರಮುಖ ನಗರಗಳಲ್ಲಿ ನಾಟಕ ಪ್ರದರ್ಶನ ನೀಡಿದರು. ಈಗ ಬೆಂಗಳೂರಿನಲ್ಲೇ ನೆಲೆಸಿ ರಂಗಸೇವೆಯನ್ನು ಮುಂದುವರೆಸಿದ್ದಾರೆ.

ಇದುವರೆಗೂ 5,000 ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿರುವ ಮಾಲಾರಾಣಿ. ಹಲವಾರು ದೂರದರ್ಶನ ಧಾರಾವಾಹಿಗಳಲ್ಲಿ, ಧ್ವನಿಸುರುಳಿ ನಾಟಕಗಳಲ್ಲೂ ಪಾಲ್ಗೊಂಡಿದ್ದಾರೆ.



## ಮೀತಾ ಮಿಶ್ರ

ಜನನ : 9-9-1973

ವಿಳಾಸ :
ನಂ.230,1ನೇಅಡ್ಡರಸ್ತೆ, 8ನೇ ಮುಖ್ಯರಸ್ತೆ
ಬಿ.ಡಿ.ಎ. ಲೇ ಔಟ್, ಭೈರಸಂದ್ರ
ಜಯನಗರ 1ನೇ ಬಡಾವಣೆ
ಬೆಂಗಳೂರು-11

ಯುವ ರಂಗಕಲಾವಿದೆ ಮೀತ ಮಿಶ್ರ ಅಂತರ ಕಾಲೇಜು ರಂಗಸ್ಪರ್ಧೆಗಳ ಮೂಲಕ ನಾಟಕರಂಗಕ್ಕೆ ಪರಿಚಿತವಾದ ಪ್ರತಿಭೆ. ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜಿನ ಬಿ.ಎಸ್ಸಿ. ಪದವೀಧರಳಾದ ಮೀತ 1995-98 ರ ಅವಧಿಯಲ್ಲಿ ಕಾಲೇಜು ರಂಗ ತಂಡದ ಸದಸ್ಯೆಯಾಗಿದ್ದು, ನಾಟಕ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡವರು.

ಕಾಲೇಜಿನ ರಂಗಮಂಚದಿಂದ ಪಡೆದ ಅನುಭವ, ಆನಂತರವೂ ಹವ್ಯಾಸವಾಗಿ ಉಳಿದುಕೊಂಡಿತು. ಮುಂದೆ ಬೆಂಗಳೂರಿನ ಹೆಸರಾಂತ ಹವ್ಯಾಸಿ ತಂಡಗಳ ನಾಟಕಗಳಲ್ಲಿ ನಟನೆ, ರಂಗ ನೇಪಥ್ಯದೊಂದಿಗೆ ವಸ್ತ್ರವಿನ್ಯಾಸಕಿಯಾಗಿ ಕೆಲಸ ನಿರ್ವಹಿಸಲು ಕಾರಣವಾಯಿತು. 1996ರಲ್ಲಿ ಸಮುದಾಯ ತಂಡ ಏರ್ಪಡಿಸಿದ್ದ ರಂಗತರಬೇತಿ ಶಿಬಿರದಲ್ಲಿ ಪಾಲ್ಗೊಂಡು ರಂಗಭೂಮಿಯ ನಾನಾ ವಿಭಾಗಗಳ ಅರಿವನ್ನು ಪಡೆದಿದ್ದಾರೆ.

ಸಂಚಯ, ಪರಸ್ಪರ, ಸಂಕೇತ್, ಸಮುದಾಯ, ಕಲಾಸಂಕುಲ, ನಟರಂಗ, ಪ್ರಯೋಗರಂಗ, ಸಂಯುಕ್ತ, ನವೋದಯ ಈ ಎಲ್ಲ ತಂಡಗಳಲ್ಲೂ ವಿಶೇಷವಾಗಿ ವಸ್ತ್ರವಿನ್ಯಾಸಕಿಯಾಗಿ, ನಟನೆಯನ್ನೂ ಮಾಡಿದ್ದಾರೆ. ತಾಳಿಕಟ್ಟೋಕ್ಕೂಲೀನೆ, ಮನೆಯೊಡತಿ, ಮೀಡಿಯ, ಟಿ. ಪ್ರಸನ್ನನ ಗೃಹಸ್ಥಾಶ್ರಮ, ರುಡಾಲಿ, ಸಂಕ್ರಾಂತಿ, ತಸ್ಕರ, ಗುಂಡುತಲೆ ಮತ್ತು ಚೂಪುತಲೆ, ಎ ಮಿಡ್‌ಸಮರ್ ನೈಟ್ಸ್ ಡ್ರೀಮ್ ನಾಟಕಗಳಲ್ಲಿ ನಟಿಯಾಗಿ, ಸೂಳೆ, ಅಂತಿಗೊನೆ, ಅಮ್ಮಾವ್ರ ಗಂಡ, ಗುಮ್ಮ ಬಂತು ಗುಮ್ಮ, ಗಗ್ಗಯ್ಯನ ಫ್ರೆಂಡ್ಸು ಇತ್ಯಾದಿ ನಾಟಕಗಳಿಗೆ ನೇಪಥ್ಯಕರ್ಮಿಯಾಗಿ, ರುಡಾಲಿ, ತಸ್ಕರ, ಅಂಬೇಡ್ಕರ್, ಮಾಧವಿ, ರಾವಿ ನದಿಯ ದಂಡೆಯಲ್ಲಿ, ಚಕ್ರವ್ಯೂಹ, ಸಾಯೋ ಆಟ, ಮಂಟೇಸ್ವಾಮಿ ಕಥಾಪ್ರಸಂಗ, ಕಾಕನಕೋಟೆ, ಏಕಲವ್ಯ, ಅಪವಾದ ಮತ್ತು ನಿಯಮ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ಸೇರಿದಂತೆ ಹಲವಾರು ನಾಟಕಗಳಿಗೆ ವಸ್ತ್ರವಿನ್ಯಾಸಕಿಯಾಗಿ ವಿಶೇಷ ಪರಿಣತಿ ಪಡೆದಿದ್ದಾರೆ. ಅಲ್ಲದೆ ಜ್ಞಾನಭಾರತಿ ಪಾರಿತೋಷಕಕ್ಕಾಗಿ ನಡೆಯುವ ಅಂತರ-ಕಾಲೇಜು ರಂಗ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಸರಿ ಸುಮಾರು ಎಲ್ಲಾ ಕಾಲೇಜು ರಂಗತಂಡಗಳಿಗೆ ವಸ್ತ್ರವಿನ್ಯಾಸಕಿ ಕಾರ್ಯ ನಿರ್ವಹಿಸಿದ್ದಾರೆ. ವಸ್ತ್ರವಿನ್ಯಾಸಕ್ಕಾಗಿಯೇ ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದಾರೆ.

ಸದಾ ಕ್ರಿಯಾಶೀಲರಾಗಿರುವ ಮೀತ ಮಿಶ್ರರ ಈ ಎಲ್ಲ ಚಟುವಟಿಕೆಗಳಿಗೆ ತಾಯಿ ಶಾಂತ ಮಿಶ್ರ,ತಂದೆ ಹರಿಪಾದ ಮಿಶ್ರರ ಪ್ರೋತ್ಸಾಹ ಕಾರಣವಾಗಿದೆ.



ಮುನಿರಾಜು

ಜನನ : 1958

*ವಿಳಾಸ :*

ಮನೆ ನಂ. 20,
ಚನ್ನಸಂದ್ರ ಲೇಔಟ್, ಕೆಂಗೇರಿ
ಉತ್ತರಹಳ್ಳಿ ಮುಖ್ಯರಸ್ತೆ,
ರೋಟರಿ ಮುತ್ತಪ್ಪ ಅತ್ತವೇರ್ ಆಸ್ಪತ್ರೆ ಮುಂಭಾಗ,
ಬೆಂಗಳೂರು - 61

43 ವರ್ಷದ ಮುನಿರಾಜು ಹವ್ಯಾಸಿ ರಂಗ ಕಲಾವಿದರು. 1975 ರಿಂದ ನಾಟಕಗಳಲ್ಲಿ ಅಭಿನಯಿಸುವುದನ್ನು ಒಂದು ಪ್ರವೃತ್ತಿಯಾಗಿ ಬೆಳೆಸಿಕೊಂಡರು.

ಶ್ರೀರಂಗನಾಥ ನಾಟಕ ಸಂಘ, ಶ್ರೀ ಮಹಾರಾಣಿ ಕಲಾವೃಂದ, ಶ್ರೀವಾಣಿ ಕಲಾವೃಂದ, ಅಭಿನಯ ಕಲಾ ಸಂಘ, ಕಾಲ ಭೈರವ ಕಲಾನಿಕೇತನ, ಯುವರಂಗ, ತ್ರಿನೇತ್ರ ಕಲಾವಿದರು, ಪದ್ಮಶ್ರೀ ಕಲಾಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೀಗೆ ಹಲವಾರು ಸಂಘ ಸಂಸ್ಥೆಗಳ ನಾಟಕಗಳಲ್ಲಿ, ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಜನಪ್ರಿಯರಾಗಿದ್ದಾರೆ.

ಪಿ. ವಜ್ರಪ್ಪ, ಎನ್. ನರಸಿಂಹಯ್ಯ, ಕಲ್ಲೂರು ಶ್ರೀನಿವಾಸ್, ಆರ್.ಜಿ.ಸಿಂಗ್, ಶಿವಲಿಂಗಯ್ಯ, ರಾಜೇಂದ್ರ ಕಾರಂತ್, ಆರ್. ಕೃಷ್ಣಮೂರ್ತಿ, ಬಿ.ಆರ್.ಜಿ.ರಾವ್, ಚೆಲುವಯ್ಯ, ವೆಂಕಟೇಶ್, ಹೊನ್ನೂರಪ್ಪ, ನಂಜಪ್ಪ, ಸಿದ್ಧರಾಮು, ಕಾಲಭೈರವ ಗಂಗಾಧರ್ ಮುಂತಾದ ಸಮರ್ಥ ರಂಗನಿರ್ದೇಶಕರ ಅಡಿಯಲ್ಲಿ ಉತ್ತಮ ನಟರಾಗಿ ರೂಪುಕೊಂಡರು.

ಸಂಪೂರ್ಣ ರಾಮಾಯಣ, ದೇವದಾಸಿ, ಬಾಳೇ ಬಂಗಾರ, ಮಮತೆಯ ಮನೆ, ಕಲಿ ಕಂಠೀರವ, ದಾನಶೂರ ಕರ್ಣ, ಸತ್ಯ ಹರಿಶ್ಚಂದ್ರ, ರಾಜಸೂಯ ಯಾಗ, ಕೀಚಕ ವಧೆ, ಭೂಕೈಲಾಸ, ಪ್ರಚಂಡ ರಾವಣ, ಬೆಂದೊಡಲ ದನಿ, ಹೂವು ಮುಳ್ಳು, ತ್ಯಾಗಿ, ಕಂಬನಿ, ಬಂಜೆ ತೊಟ್ಟಿಲು, ಬಸವಣ್ಣ, ನಟ, ಪ್ರಸಂಗ ಹೀಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಯಾವುದೇ ನಾಟಕವಿರಲಿ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸಬಲ್ಲವರು ಮುನಿರಾಜು.

ಕರ್ನಾಟಕದ ಹಲವಾರು ಊರುಗಳಲ್ಲಿ ನಾಟಕ ಪ್ರದರ್ಶನದಲ್ಲಿ ಪಾಲ್ಗೊಂಡ ಇವರಿಗೆ ಹಲವು ರಂಗ ಸ್ಪರ್ಧೆಗಳಲ್ಲಿ ಪ್ರಶಸ್ತಿ ದೊರಕಿದೆ.



## ಎಂ. ಮುರಳೀಧರ

ಜನನ : 22-10-1957

ವಿಳಾಸ :
ನಂ.3, 10ನೇ ಅಡ್ಡರಸ್ತೆ,
ಪೈಪ್‌ಲೈನ್, ವಿಜಯನಗರ
ಬೆಂಗಳೂರು - 23

ನಟನೆ, ನಿರ್ದೇಶನ, ರಂಗ ವಿನ್ಯಾಸ, ಪ್ರಸಾಧನ, ವಸ್ತ್ರವಿನ್ಯಾಸ, ಬೆಳಕು ವಿನ್ಯಾಸ, ಹೀಗೆ ರಂಗಭೂಮಿಯ ಹಲವು ವಿಭಾಗಗಳಲ್ಲಿ ಪರಿಣತಿಯನ್ನು ಸಾಧಿಸಿಕೊಂಡಿದ್ದಾರೆ ಎಂ. ಮುರಳೀಧರ.

ಮುರಳೀಧರ ಕೋಲಾರ ಜಿಲ್ಲೆಯ ವಾಸಿಗಳಾದ ಗೌರಮ್ಮ, ಮುನಿನರಸಪ್ಪನವರ ಮಗ. ಎಸ್.ಎಸ್.ಎಲ್.ಸಿ.ವರೆಗೆ ವಿದ್ಯೆ ಪೂರೈಸಿದ್ದಾರೆ. ರಂಗಭೂಮಿಯಲ್ಲಿ 28 ವರ್ಷಗಳ ಕಾಲ ನಟನಾಗಿ ಯಯಾತಿ, ಅಂಗುಲಿಮಾಲ, ಸೂರ್ಯಶಿಕಾರಿ, ಜೋಕುಮಾರಸ್ವಾಮಿ, ರೊಟ್ಟಿ, ಈಡಿಪಸ್, ಗಾಂಪರ ಗುಂಪು, ಶಾಪಗ್ರಸ್ತರು, ಶತಮೂರ್ಖರು ಮುಂತಾದ 50ಕ್ಕೂ ಹೆಚ್ಚು ನಾಟಕಗಳನ್ನು ಸಹಸ್ರಾರು ಪ್ರದರ್ಶನಗಳಲ್ಲಿ ಅಭಿನಯಿಸಿದ್ದಾರೆ. ಹಲವಾರು ನಾಟಕಗಳ ನಿರ್ದೇಶನವನ್ನೂ ಮಾಡಿದ್ದಾರೆ.

1975ರಲ್ಲಿ 'ಹಂಸಜ್ಯೋತಿ' ರಂಗ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಹಲವಾರು ರಂಗಪ್ರಯೋಗಗಳು, ರಂಗಶಿಬಿರ ಹಾಗೂ ರಂಗ ವಿಚಾರ ಸಂಕಿರಣಗಳನ್ನು ನಡೆಸಿರುವುದಲ್ಲದೇ, ರಂಗಭೂಮಿಗಾಗಿ ದುಡಿದ ಮಹನೀಯರನ್ನು ಗುರುತಿಸಿ, ಹಂಸರತ್ನ, ಹಂಸ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಕಾರ್ಯ ಮಾಡುತ್ತಿದ್ದಾರೆ. ಇತ್ತೀಚೆಗೆ ಈ ಸಂಸ್ಥೆಯ ರಜತ ಮಹೋತ್ಸವವನ್ನು ಆಚರಿಸಿದ್ದಾರೆ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಂಗೀತ ಮತ್ತು ನಾಟಕ ವಿಭಾಗದಲ್ಲಿ 4 ವರ್ಷಗಳಿಗೂ ಹೆಚ್ಚು ಕಾಲ ನಟನಾಗಿ, ಪ್ರಸಾಧನ ಕಲಾವಿದನಾಗಿ ರಾಜ್ಯಾದ್ಯಂತ ನಡೆದ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ದೂರದರ್ಶನದ ನಾಟಕಗಳಲ್ಲೂ ಅಭಿನಯಿಸಿದ್ದಾರೆ.

ಹಲವಾರು ಕಿರುತೆರೆಯ ಧಾರಾವಾಹಿಗಳಲ್ಲಿ ನಟನಾಗಿ, ತಂತ್ರಜ್ಞನಾಗಿ ಪಾಲ್ಗೊಂಡಿದ್ದರೂ, ರಂಗಭೂಮಿಯ ಅಭಿವೃದ್ಧಿಗಾಗಿ ನಿರಂತರ ದುಡಿಯುವ ಸಂಕಲ್ಪ ಕೈಗೊಂಡಿದ್ದಾರೆ.



## ಮೇಲಗಿರಿಗೌಡ ನಿಂಗನಗೌಡ ಪಾಟೀಲ

ಜನನ : 2-3-1916

*ವಿಳಾಸ :*
ಗೋಜನೂರ
ಶಿರಹಟ್ಟಿ ತಾಲ್ಲೂಕು
ಗದಗ ಜಿಲ್ಲೆ

ಮೇಲಗಿರಿಗೌಡ ನಿಂಗನಗೌಡ ಪಾಟೀಲ ಗದಗ ಜಿಲ್ಲೆಯ ಗೋಜನೂರ ಗ್ರಾಮದವರು. 6ನೇ ತರಗತಿಯವರೆಗೆ ಕಲಿತಿದ್ದಾರೆ. ಹವ್ಯಾಸಿ ರಂಗಭೂಮಿ ನಾಟಕ ನಿರ್ದೇಶಕರಾಗಿ ಜೀವನದುದ್ದಕ್ಕೂ ಕಲಾಸೇವೆ ಮಾಡುತ್ತಾ ಬಂದಿದ್ದಾರೆ.

ಹಲವು ಉತ್ತಮ ನಾಟಕಗಳನ್ನು ರಂಗಕ್ಕೆ ಪ್ರಯೋಗಿಸಿ, ಹೊಸ ಹೊಸ ಪ್ರತಿಭೆಗಳನ್ನು ರಂಗಭೂಮಿಗೆ ಸೆಳೆಯುವ ಪ್ರಯತ್ನದಿಂದ ಸ್ಥಳೀಯರಲ್ಲಿ ಜನಪ್ರಿಯರಾಗಿದ್ದಾರೆ. ಕುರುಕ್ಷೇತ್ರ, ಬಡತನ ಭೂತ, ಅಕ್ಷಯಾಂಬರ, ರಕ್ತರಾತ್ರಿ, ನಂದಾದೀಪ, ಮಾತಂಗಕನ್ಯಾ, ಹೇಮರೆಡ್ಡಿ ಮಲ್ಲಮ್ಮ, ನೆಲ್ಲೂರ ನಂಬಕ್ಕ, ತಂಗೀಮನೆ, ರತ್ನಮಾಂಗಲ್ಯ, ಧನಿಕರ ದೌರ್ಜನ್ಯ, ಗಂಡನ ಮಾನ, ಬಡವ ಬದುಕಲೇ ಬೇಕು, ದೇವರ ನಿರ್ಣಯ ಇತ್ಯಾದಿ ಒಳ್ಳೆಯ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ನಿರ್ದೇಶನದೊಂದಿಗೆ ಉತ್ತಮ ಗಾಯಕರೂ ಆಗಿರುವ ನಿಂಗನಗೌಡ ಪಾಟೀಲ ವಚನ ಸಂಗೀತ, ಶರೀಫ ಶಿವಯೋಗಿ, ಪುರಂದರ ದಾಸ, ಕನಕದಾಸ, ಶ್ರೀನಾಗಲಿಂಗ, ಸರ್ಪಭೂಷಣ, ನಿಜಗುಣ ಶಿವಯೋಗಿಗಳ ತತ್ವಪದಗಳನ್ನು ಹಾಡುವುದರಲ್ಲಿ ನಿಸ್ಸೀಮರೆನಿಸಿಕೊಂಡಿದ್ದಾರೆ.



## ರಂಗಧಾಮಯ್ಯ

ಜನನ : 29-12-1955

ವಿಳಾಸ :
ಪಿ.ಇ.ಡಿ.ಕ್ಯೂ.ಎ.
ಎನ್.ಜಿ.ಇ.ಎಫ್.ಲಿ.
ಬೆಂಗಳೂರು - 98

ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ರಂಗಧಾಮಯ್ಯ ಹವ್ಯಾಸಿ ರಂಗನಟರು. ಪ್ರೈಮರಿ ಶಾಲಾ ದಿನಗಳಲ್ಲೇ ಬಯಲಾಟದ ಮೂಲಕ ಬಾಲ ನಟನಾಗಿ ರಂಗಕ್ಕೆ ಪರಿಚಿತರಾದರು. ಈ ಅನುಭವ ಕಲಾಸೇವೆಗೆ ಪ್ರೇರಣೆ ನೀಡಿತು. ಮುಂದಿನ ದಿನಗಳಲ್ಲಿ ಶಾಲಾ ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶಿತವಾದ ಆದರ್ಶ ವಿದ್ಯಾರ್ಥಿ, ರಣದುಂಧುಬಿ, ಮತ್ತು ರಣಪ್ರಚಂಡ ನಾಟಕಗಳಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿ 'ರಣಪ್ರಚಂಡ' ನಾಟಕದ ವೀರ ಬಲ್ಲಾಳನ ಪಾತ್ರಕ್ಕೆ ಉತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡರು.

1979 ರಲ್ಲಿ ಎನ್.ಜಿ.ಇ.ಎಫ್. ನಲ್ಲಿ ಉದ್ಯೋಗಿಯಾಗಿ ಲಲಿತ ಕಲಾ ಸಂಘದ ವತಿಯಿಂದ ಹಲವಾರು ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಕಾಡು, ಸಂದರ್ಭ, ನೀರು, ಮನೆ ನಾಟಕಗಳಲ್ಲಿ ಅಭಿನಯಿಸಿದರು. ಅಲ್ಲದೆ ಕಾರ್ಖಾನೆಯ ಕಲಾ ಸಂಘದ ಸಂಚಾಲಕನಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಪ್ರತಿಷ್ಠಿತ ಸಂಸ್ಥೆಯಾದ ಯುವರಂಗದ ಸದಸ್ಯನಾಗಿ, ಕಲಾ ಕಾರ್ಯದರ್ಶಿಯಾಗಿ ಯಲಹಂಕ ಪ್ರಭು, ಚೋರಪುರಾಣ, ಲಾಯರ್ ಸಂಸಾರ ನಾಟಕಗಳ ಪ್ರಯೋಗಕ್ಕೆ ಕಾರಣರಾಗಿದ್ದಾರೆ. ತಾವೂ ನಟಿಸಿದ್ದಾರೆ. ಪ್ರಸಾಧನ, ರಂಗಭಾರತಿ, ರಂಗಚರಣ ಕಲಾ ತಂಡಗಳಲ್ಲೂ ನಟರಾಗಿ ಸೇವೆ ಸಲ್ಲಿಸಿದ್ದಾರೆ.



ಜಿ. ಎಂ. ರಂಗಯ್ಯ

ಜನನ : 4-12-1953

ಕಲಾವಿದ ಕುಟುಂಬಕ್ಕೆ ಸೇರಿದ ರಂಗಯ್ಯ 'ಕಲೆಯೇ ನನ್ನ ಆರಾಧ್ಯ ಧೈವ' ಎಂಬ ನಂಬಿಕೆಯೊಡನೆ ಕಲಾಸೇವೆ ಮಾಡುತ್ತಾ ಬಂದಿದ್ದಾರೆ.

ಶ್ರೀಮತಿ ಮುನಿಯಮ್ಮ, ಶ್ರೀ ಎನ್. ಗಂಗಪ್ಪ ದಂಪತಿಗಳಿಬ್ಬರು ರಂಗಭೂಮಿ ಕಲಾವಿದರು. ತಂದೆ ತಾಯಿಗಳ ಈ ಕಲೆ ಮಗನಿಗೂ ರಕ್ತಗತವಾಗಿ ಹರಿದು ಬಂದು 1969 ರಲ್ಲಿ ಹಿರಣ್ಣಯ್ಯ ಮಿತ್ರ ಮಂಡಲಿ ಪ್ರಯೋಗಿಸಿದ 'ಪ್ರೇಮಹಸ್ತ' ಎಂಬ ಸಾಮಾಜಿಕ ನಾಟಕದ ಮೂಲಕ ರಂಗಯ್ಯನವರ ರಂಗಪ್ರವೇಶ ಆಯಿತು.

ನಂತರ ಹಲವಾರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಪಾತ್ರವಹಿಸಿ ಜನಮೆಚ್ಚುಗೆ ಗಳಿಸಿದ್ದಾರೆ. ಗಂಡುಗಲಿ ಕುಮಾರರಾಮ, ಮಹಾಮಂತ್ರಿ ಭೈಚಪ್ಪ, ಟಿಪ್ಪು ಸುಲ್ತಾನ್, ದೇವದಾಸಿ, ಮಂಗಳ ನನ್ನ ಅತ್ತಿಗೆ, ಗಂಡನ ಮನೆ ಹೀಗೆ ನಾಟಕಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಕಳೆದ ಇಪ್ಪತ್ತು ವರ್ಷಗಳ ಸುದೀರ್ಘ ರಂಗ ಸೇವೆಗಾಗಿ ಹಲವು ಹತ್ತು ಪ್ರಶಸ್ತಿ, ಪುರಸ್ಕಾರಗಳಿಗೆ ರಂಗಯ್ಯ ಪಾತ್ರರಾಗಿದ್ದಾರೆ.



## ಮೈಸೂರು ರಮಾನಂದ್

ಜನನ : 1957

ವಿಳಾಸ :

'ಗೆಜ್ಜೆ ಹೆಜ್ಜೆ' ರಂಗತಂಡ
ನಂ.843, 6ನೇ ಮುಖ್ಯರಸ್ತೆ,
2ನೇ ಸ್ಟೇಜ್, ಮಹಾಲಕ್ಷ್ಮಿಪುರಂ
ಬೆಂಗಳೂರು - 86

ಕರ್ನಾಟಕ ಸಾಂಸ್ಕೃತಿಕ ರಾಜಧಾನಿಯೆಂದು ಹೆಸರಾದ ಮೈಸೂರು ನಗರದಲ್ಲಿ ಕೆಲವೊಂದು ಉತ್ಸಾಹಿ ರಂಗಾಸಕ್ತ ಹಾಗೂ ರಂಗಕರ್ಮಿಗಳ ಕಾರ್ಯಾಚಟುವಟಿಕೆಗಳ ಪ್ರತೀಕವಾಗಿ ಇಂದು ರಾಜ್ಯಾದ್ಯಂತ ಹೆಸರು ಮಾಡಿ, ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಸಮಸ್ಯೆಗಳತ್ತ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಹಲವಾರು ನಾಟಕ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ 'ಗೆಜ್ಜೆ ಹೆಜ್ಜೆ' ರಂಗ ತಂಡ. ಈ ತಂಡದ ಸ್ಥಾಪಕರೇ ಮೈಸೂರು ರಮಾನಂದ್.

ರಮಾನಂದ್ ಮೊದಲು ಬಣ್ಣ ಹಚ್ಚಿದ್ದು 1977ರಲ್ಲಿ ಸ್ನೇಹಕಲಾ ಮಿತ್ರ ಮಂಡಳಿಯಿಂದ ಪ್ರಯೋಗಗೊಂಡ 'ಮಾಧು ಮದುವೆ' ನಾಟಕದ ಮೂಲಕ. ಆ ನಂತರದ ದಿನಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ಹೆಚ್ಚಾಗಿ ಗಮನ ಸೆಳೆದರು.

ಚಟ, ಮನುಷ್ಯರು ಬರುತ್ತಿದ್ದಾರೆ ಜಾಗ್ರತೆ, ಮಳ್ಳಕಥೆ, ಬಂತೋ ಬಂತೊ ಸ್ವಾತಂತ್ರ್ಯ, ಕತ್ತಲಿಗೊಂದು ರಾತ್ರಿ, ಭಾರತ ಭಾಗ್ಯ ವಿಧಾತ, ಸ್ವರ್ಗಕ್ಕೆ ಮೂರೇ ಬಾಗಿಲು, ತಾಳಿ ಕಟ್ಟೋಕ್ಕೂಲೀನೇ?, ದುರ್ಗಾಸ್ತಮಾನ, ದಾಟು, ಕಳ್ಳಭಟ್ಟಿ, ನಾನಿನ್ನೂ ಸತ್ತಿಲ್ಲ, ಹೀಗೊಂದು ಕಥೆ, ಪತನ ಸೇರಿದಂತೆ 200ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮೈಸೂರು ನಗರದ ಪ್ರಮುಖ ಎಲ್ಲಾ ಹವ್ಯಾಸಿ ತಂಡಗಳಲ್ಲೂ ನಟನಾಗಿ ಪಾಲ್ಗೊಂಡಿದ್ದಾರೆ.

ತಂಡದ ಮುಖೇನ 5000ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ನಾಟಕ ಪ್ರಯೋಗವಷ್ಟೇ ಅಲ್ಲದೆ ಬೀದಿ ನಾಟಕೋತ್ಸವ, ರಂಗ ನಾಟಕೋತ್ಸವ, ವಿಚಾರ ಸಂಕಿರಣ, ರಂಗ ಕಾರ್ಯಾಗಾರ, ಹಾಸ್ಯ ನಾಟಕೋತ್ಸವಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ. ಬೆಳ್ಳಿತೆರೆ, ಕಿರುತೆರೆಯಲ್ಲೂ ಅಭಿನಯಿಸಿದ ಅನುಭವ ಇವರದು. ಇತ್ತೀಚಿನ ದಿನಗಳಲ್ಲಿ ಮಾತಾಡುವ ಗೊಂಬೆಯ ಪ್ರದರ್ಶನವನ್ನು ನೀಡುತ್ತಿದ್ದಾರೆ.



**ಹೆಚ್. ರಸೂಲ್**
ಜನನ : 1-7-1955

ರಸೂಲ್‌ಗೆ ನಾಟಕದ ಗೀಳು ಶಾಲಾದಿನಗಳಲ್ಲೇ ಅಂಟಿಕೊಂಡಿತು. 1970ರಲ್ಲಿ ಮರಿಯಮ್ಮನ ಹಳ್ಳಿ ಹೈಸ್ಕೂಲು ವಿದ್ಯಾರ್ಥಿಗಳಿಗೆ 'ಶಾಮಣ್ಣನ ಸಾಹಸ' ನಾಟಕ ನಿರ್ದೇಶನದ ಜತೆಗೆ ಶಾಮಣ್ಣನ ಪಾತ್ರವಹಿಸಿದರು. ದೇವರೇ ದಿಕ್ಕು, ಮಾಂಗಲ್ಯ ಭಾಗ್ಯ ವಿದ್ಯಾರ್ಥಿ ದೆಸೆಯಲ್ಲಿ ನಟಿಸಿದ ನಾಟಕಗಳು.

ರಸೂಲ್‌ರ ಅಣ್ಣ ಇಸ್ಮಾಯಿಲ್‌ಗೂ ರಂಗದ ಗೀಳು. ಅಣ್ಣನ ಜೊತೆಗೂಡಿ ಪಾತ್ರವಹಿಸುವುದು ಬೆಳೆದು ಬಂತು. 1974ರಲ್ಲಿ ವಿದ್ಯಾರ್ಥಿ ವೃಂದ ಕಟ್ಟಿಕೊಂಡು ತಂತಿ ತಂದ ಅತ್ತಿಗೆ, ಬಸ್ ಹಮಾಲ, ರತ್ನಮಾಂಗಲ್ಯ, ವರನೋಡಿ ಹೆಣ್ಣು ಕೊಡು, ಆದರ್ಶಪ್ರೇಮ, ಸಾಮ್ರಾಟ್ ಅಶೋಕ, ರೊಟ್ಟಿಋಣ, ಗಂಡನ ಆಜ್ಞೆ, ಶೀಲಾವತಿ, ಬೆಳ್ಳಕ್ಕಿ ಹಿಂಡು ಬೆದರ್ಯಾವೋ, ಕತ್ತಲೆ ಕರಗಿತು, ಕಾಡಿದ್ದರೆ ನಾಡು ಇನ್ನೂ ಮುಂತಾದ ನಾಟಕಗಳಲ್ಲಿ ನಟಿಸಿದರು. ತಾಳಿಯಿಲ್ಲದೆ ತಾಯಿಯಾದೆ, ಕರ್ನಾಟಕ ರಮಾರಮಣ, ಅಗ್ನಿಶಿಖೆ, ಬಭ್ರುವಾಹನ ರಸೂಲ್ ನಿರ್ದೇಶಿಸಿದ ನಾಟಕಗಳು.

'ಲಲಿತ ಕಲಾರಂಗ'ದ ಸ್ಥಾಪಕ ಸಹಕಾರ್ಯದರ್ಶಿಯಾಗಿ ಪ್ರತೀ ವರ್ಷ ನಾಟಕೋತ್ಸವ, ನಾಟಕ ಸ್ಪರ್ಧೆ, ಸಂಗೀತ ಸ್ಪರ್ಧೆ, ವಿಚಾರ ಸಂಕಿರಣ, ಜಾನಪದ ಉತ್ಸವ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ.

ಹೊಸಪೇಟೆಯ ಆಕಾಶವಾಣಿಗಾಗಿ ಕತ್ತಲೆ ಕರಗಿತು, ಮಲ್ಲಿ, ರಕ್ತರಾತ್ರಿ ನಾಟಕಗಳನ್ನು ಧ್ವನಿ ಮುದ್ರಿಸಿದ್ದಾರೆ. ಅವ್ವಣ್ಣೆಪ್ಪ, ಊರು ಕೇರಿ, ಶಾಕುಂತಲ ನಾಟಕಗಳಿಗೆ ನೇಪಥ್ಯ ಕರ್ಮಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.



## ಎಂ. ಕೆ. ರಾಘುವೇಂದ್ರ (ರಾಘು)

ಜನನ : 1932

ರಾಘು ಇಂದಿನ ಕಲಾವಿದರಲ್ಲ. ಅಂದಿನ ಕಲಾವಿದರು. ಅಂದರೆ ಅವರು ನಾಟಕಗಳಲ್ಲಿ ಕಳೆದ 40 ವರ್ಷಗಳಿಂದೀಚೆಗೆ ಅಭಿನಯಿಸಿಲ್ಲ. ಅದಕ್ಕೂ ಹಿಂದಿನ ರಂಗಾನುಭವ ಅವರದು.

ರಾಘುವಿಗೆ ಬಾಲ್ಯದಲ್ಲೇ ನಾಟಕದ ಗೀಳು. ಪಾತ್ರ ಮಾಡಬೇಕೆಂಬ ಆಸೆ. 4ನೇ ತರಗತಿಯಲ್ಲಿದ್ದಾಗಲೇ ಒಂದೆರಡು ನಾಟಕಗಳಲ್ಲಿ ಪುಟ್ಟ ಪಾತ್ರ ಮಾಡಿದರು. ಮುಂದಿನ ನಟನಾ ಬದುಕಿಗೆ ಇದು ಅಡಿಪಾಯವಾಯಿತು.

'ಕಲಾಜ್ಯೋತಿ' ಕಲಾವಿದರೊಂದಿಗೆ ಬೆಳೆದ ಗೆಳೆತನ, ಆ ಸಂಸ್ಥೆಯಿಂದ ಪ್ರಯೋಗಿಸುತ್ತಿದ್ದ ಕೈಲಾಸಂರ ನಾಟಕಗಳು ರಂಗದ ಕಡೆ ರಾಘು ಅವರನ್ನು ಮತ್ತಷ್ಟು ಆಕರ್ಷಿಸಿತು. ಅಲ್ಲಿ ಸ್ತ್ರೀಯರ ಪಾತ್ರಗಳನ್ನು ಗಂಡಸರೇ ನಿರ್ವಹಿಸುತ್ತಿದ್ದರು. ಇದೇ ಸಂಸ್ಥೆಯಡಿ ಪ್ರಯೋಗಿಸಿದ 'ಬಹದ್ದೂರ್ ಗಂಡ' ನಾಟಕದ ಮೂಲಕ ಕಲಾಜ್ಯೋತಿಗೆ ಕಲಾವಿದರಾಗಿ ಸೇರ್ಪಡೆ ಹೊಂದಿದರು. ಆನಂತರ ಹುತ್ತದಲ್ಲಿ ಹುತ್ತ, ಹೋಂರೂಲು ನಾಟಕಗಳಲ್ಲಿ ನಾಯಕನ ಪಾತ್ರವನ್ನು ವಹಿಸಿದರು.

ಕಲಾಜ್ಯೋತಿ ಇಬ್ಭಾಗವಾದ ಮೇಲೆ 'ಸಾಧನೆ ಕಲಾವಿದರ' ಗುಂಪಿಗೆ ಸೇರಿದರು. ಅಲ್ಲಿಂದ ಪ್ರಯೋಗಗೊಂಡ 'ಬಿರುಗಾಳಿ' ಇವರಿಗೆ ಖ್ಯಾತಿ ತಂದಿತ್ತಿತು. ನಂತರ ಐ.ಟಿ.ಐ. ಕಲಾವಿದರೊಂದಿಗೆ ವಾರ್ಷಿಕೋತ್ಸವ, ಅನುಕೂಲಕ್ಕೊಬ್ಬಣ್ಣ, ಬಿರುಗಾಳಿ ನಾಟಕಗಳು ಜನರನ್ನು ಆಕರ್ಷಿಸಿತ್ತು.

ರಾಘು ನಾಟಕಗಳ ಸಂಭಾಷಣೆಯನ್ನು ಕಂಠಪಾಠ ಮಾಡುವಾಗ, ರಾತ್ರಿ ಚಿಕ್ಕ ದೀಪದಲ್ಲಿ ಓದುತ್ತಿದ್ದರು. ಗೋಡೆ ಮೇಲೆ ಬೀಳುವ ನೆರಳನ್ನು ಗಮನಿಸಿ ಅದರ ಜೊತೆ ಆಟವಾಡುತ್ತಿದ್ದರು. ಹಾಗೇ ಮುಂದುವರಿದು Shadow Play ಪ್ರಾರಂಭವಾಯಿತು. ಇವರಲ್ಲಿದ್ದ ಪ್ರತಿಭೆಯ ಮತ್ತೊಂದು ಮುಖದ ಪರಿಚಯವಾಯಿತು. ನೆರಳಾಟವಾಡಿಸುವ ಏಕೈಕ ಕಲಾವಿದ ಎಂಬ ಹೆಗ್ಗಳಿಕೆ ಪಡೆದು, ದೇಶ ವಿದೇಶಗಳಲ್ಲಿ ಪ್ರದರ್ಶನ ನೀಡಿದರು.

ಈ ಹಿರಿಯ ಕಲಾಚೇತನಕ್ಕೆ ಸಾಕಷ್ಟು ಪ್ರಶಸ್ತಿ ಪುರಸ್ಕಾರಗಳು, ಬಿರುದುಗಳು ಸಂದಿವೆ. ಈ ಎಲ್ಲಾ ಸಾಧನೆಗೆ, ಕೀರ್ತಿಗೆ ರಂಗಭೂಮಿಯೇ ಕಾರಣ ಎಂದು ಕೃತಜ್ಞತೆಯಿಂದ ನುಡಿಯುತ್ತಾರೆ ರಾಘುವೇಂದ್ರ.



ಡಾ|| ರಾಚಣ್ಣ ಎಮ್. ಅರಬಿ


*ವಿಳಾಸ :*
ಸುರೇಬಾನ
ರಾಮದುರ್ಗ ತಾಲ್ಲೂಕು
ಬೆಳಗಾವಿ ಜಿಲ್ಲೆ

'ವೃತ್ತಿಯಿಂದ ಡಾಕ್ಟರ್ ಪ್ರವೃತ್ತಿಯಿಂದ ಆ್ಯಕ್ಟರ್' ಆಗಿದ್ದಾರೆ ಡಾ|| ರಾಚಣ್ಣನವರು. ವಿದ್ಯಾರ್ಥಿ ದೆಸೆಯಲ್ಲಿಯೇ ಮುಖಕ್ಕೆ ಬಣ್ಣ ಹಚ್ಚಿಕೊಳ್ಳುವ ಮೂಲಕ ನಾಟಕರಂಗಕ್ಕೆ ಕಾಲಿರಿಸಿದರು ರಾಚಣ್ಣ. ಉತ್ತಮ ದೇಹದಾರ್ಢ್ಯತೆ, ಕಂಚಿನ ಕಂಠ, ಗಂಭೀರ ಅಭಿನಯದಿಂದ ಸ್ಟೇಜ್ ಟೈಗರ್ ಎಂಬ ಹೊಗಳಿಕೆಗೆ ಪಾತ್ರರಾದರು.

ಕಳೆದ ಹದಿನೈದು ವರ್ಷಗಳಿಂದ ಹಲವಾರು ವೃತ್ತಿ ಕಂಪೆನಿಗಳ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ. ಗುಳೇದ ಗುಡ್ಡದ 'ಸಿಂದಗಿ ನಾಟ್ಯ ಸಂಘ', 'ಹುಲ್ಲೂರ ನಾಟ್ಯ ಸಂಘ', 'ಸಾಲೂಟಗಿ ಶಿವಲಿಂಗಯ್ಯ ನಾಟ್ಯ ಸಂಘ', 'ಸಂಗಮೇಶ್ವರ ಕೃಪಾ ನಾಟ್ಯ ಸಂಘ' ಮುಂತಾದ ಕಂಪೆನಿಯ ಪ್ರದರ್ಶನಗಳಲ್ಲಿ ದೇಹಕ್ಕೆ ತಕ್ಕಂಥ ಪಾತ್ರಗಳನ್ನು ಗಿಟ್ಟಿಸಿ ಜನಮೆಚ್ಚುಗೆ ಗಳಿಸಿದ್ದಾರೆ, ಈ ಡಾಕ್ಟರ್ ಅಲ್ಲಾ ಆ್ಯಕ್ಟರ್.

ಸಿಂಧೂರ ಲಕ್ಷ್ಮಣ, ಅವರಾದಿ ಫಲಹಾರೇಶ್ವರ ಮಹಾತ್ಮೆ, ಚಿನ್ನದ ಗೊಂಬೆ, 'ನನ್ನವರು ನನ್ನ ಹಡೆದವರು' ರಾಚಣ್ಣನವರಿಗೆ ಖ್ಯಾತಿ ತಂದಿತ್ತ ನಾಟಕಗಳು. ಅದರಲ್ಲೂ ನನ್ನವರು ನನ್ನ ಹಡೆದವರು ನಾಟಕದ ಮಂಗೇಶ ಪಾತ್ರದ ಜನಪ್ರಿಯತೆಯಿಂದಾಗಿ ಮುಂದೆ 'ಮಂಗೇಶ್ ಡಾಕ್ಟರ್' ಎಂತಲೇ ಜನ ಗುರುತಿಸುವಂತಾದವರು. ಕೆಲವು ಹಾಸ್ಯಪಾತ್ರಗಳಲ್ಲೂ ಮಿಂಚಿದ್ದಾರೆ.

ನಾಟಕದ ಗೀಳಿನಿಂದಾಗಿ ಗುಳೇದ ಗುಡ್ಡದಲ್ಲಿ 'ಶ್ರೀ ಶಿವಾನಂದ ನಾಟಕ ಸಂಘ' ಎಂಬ ಹವ್ಯಾಸಿ ತಂಡ ಕಟ್ಟಿ, ಹಲವಾರು ಹೊಸ ನಾಟಕ ಪ್ರಯೋಗವನ್ನು ಮಾಡುತ್ತಾ ಹೊಸ ಕಲಾವಿದರನ್ನು ರಂಗಕ್ಕೆ ಪರಿಚಯಿಸುವ ಕಾಯಕದಲ್ಲಿ ಮಗ್ನರಾಗಿದ್ದಾರೆ ರಾಚಣ್ಣ.



## ರಾಚಯ್ಯಸ್ವಾಮಿ ಹಿರೇಹೆಸರೂರು

ಜನನ : 1934

ವಿಳಾಸ :
ಹಿರೇಹೆಸರೂರು ಪೋಸ್ಟ್
ಲಿಂಗಸಗೂರು ತಾಲೂಕು
ರಾಯಚೂರು ಜಿಲ್ಲೆ

ಲಿಂಗಸಗೂರು ತಾಲೂಕಿನ ಹಿರೇಹೆಸರೂರು ಗ್ರಾಮದಲ್ಲಿ 1934 ರಲ್ಲಿ ಶ್ರೀಮತಿ ಶಂಕ್ರಮ್ಮ ಮತ್ತು ಶ್ರೀ ವಿರೂಪಾಕ್ಷಯ್ಯ ದಂಪತಿಗಳ ಮಗನಾಗಿ ರಾಚಯ್ಯನವರು ಜನಿಸಿದರು.

ಸುಮಾರು 45 ವರ್ಷಗಳ ಪರ್ಯಂತರ ಸತತವಾಗಿ ವೃತ್ತಿ ರಂಗಭೂಮಿಗಾಗಿ ಸೇವೆ ಸಲ್ಲಿಸಿ, ಪ್ರಸಿದ್ಧ ಕಂಪನಿಗಳಲ್ಲಿ ಸ್ತ್ರೀ ಹಾಸ್ಯ ಪಾತ್ರಗಳನ್ನು ಮಾಡಿ ಪ್ರೇಕ್ಷಕರ ಮನ ಮೆಚ್ಚಿಸಿದ ಕಲಾವಿದರಾಗಿದ್ದಾರೆ. ಇವರು ತಮ್ಮ ಹತ್ತನೆಯ ವಯಸ್ಸಿನಲ್ಲಿ ಗುಡುಗುಂಟಿ ಸಂಸ್ಥಾನದ ದೊರೆ ತಿಪ್ಪರಾಜರು ಸ್ಥಾಪಿಸಿದ 'ಅಮರೇಶ್ವರ ನಾಟ್ಯ ಸಂಘ' ಕಂಪನಿಯಲ್ಲಿ ಬಾಲ ಪಾತ್ರಗಳನ್ನು ಮಾಡಿ ಮುಂದೆ 1944 ರಲ್ಲಿ ಶ್ರೀ ಮೃಥದೇವ ಗವಾಯಿ ನಾಟ್ಯ ಸಂಘವನ್ನು ಸೇರಿದರು. ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿ, ಸಿಂಧನೂರಿನ ಮೃಥದೇವ ಗವಾಯಿಗಳ ಅಮರೇಶ್ವರ ನಾಟ್ಯ ಸಂಘ, ಚಿತ್ತರಗಿಯ ಕುಮಾರ ವಿಜಯ ನಾಟ್ಯ ಸಂಘ ಕಂಪನಿಗಳಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದ ಇವರು ಅಂದಿನ ಕಾಲದಲ್ಲಿ ಸ್ತ್ರೀ ಪಾತ್ರಗಳಿಗೆ ಜೀವ ತುಂಬುತ್ತಿದ್ದರು.

ಇವರ ರಂಗಭೂಮಿ ಜೀವನದಲ್ಲಿ 'ಜೀವನಯಾತ್ರೆ'ಯ ಹಾಸ್ಯ ಸ್ತ್ರೀ ಪಾತ್ರ ಜನಮನ ಸೂರೆಗೊಂಡಿದೆ. ಈ ನಾಟಕದ ಅಭಿನಯವನ್ನು ಮೆಚ್ಚಿ ಮೃಥದೇವ ಗವಾಯಿಗಳು 'ನಾಟ್ಯ ಕುಸುಮ' ಎಂಬ ಬಿರುದನ್ನಿತ್ತು ಗೌರವಿಸಿದರು. ಮುಂದೆ ತಮ್ಮ ರಂಗಾನುಭವವನ್ನು ಬಳಸಿಕೊಂಡು 1983ರಲ್ಲಿ ಶ್ರೀ ಸಂಗಮೇಶ್ವರ ನಾಟ್ಯ ಸಂಘವನ್ನು ಕಟ್ಟಿ ನಡೆಸಿದರು. ಹವ್ಯಾಸಿಗರು ಕರೆದಾಗ ಅಲ್ಲಿಯೂ ದುಡಿದರು. ವೃತ್ತಿರಂಗಭೂಮಿಯ ಬೇರಾಗಿ ತಮ್ಮ 69 ರ ಇಳಿ ವಯಸ್ಸಿನಲ್ಲಿಯೂ ರಂಗಸೆಳೆತದಿಂದ ದೂರಾಗಿಲ್ಲ.



## ಆರ್. ಎಸ್. ರಾಜಾರಾಂ

ಜನನ : 10-7-1938

*ವಿಳಾಸ :*
'ಸುಧಾಮ'
ನಂ. 230 (38), ರಫ್ಟ್‌ಪಾರ್ಕ್ ರಸ್ತೆ
17-18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು - 55

ರಾಜಾರಾಂ ಹವ್ಯಾಸಿ ರಂಗ ಕಲಾವಿದರು. ಬೆಳ್ಳಿತೆರೆ, ಕಿರುತೆರೆಯಲ್ಲೂ ಪರಿಚಿತ ಮುಖ ಇವರದು. ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿಗಳಾಗಿ ಸೇವೆಯಲ್ಲಿದ್ದು, ಈಗ ನಿವೃತ್ತಿ ಹೊಂದಿದ್ದಾರೆ.

ರಂಗಭೂಮಿಯ ಹಲವು ಕಲಾವಿದರಂತೆ ರಾಜಾರಾಂರಿಗೂ ರಂಗದ ಸೆಳೆತ ಚಿಕ್ಕಂದಿನಿಂದಲೇ ಇತ್ತು. ನಟನೆಯ ಜೊತೆಗೆ, ಸಂಗೀತದಲ್ಲಿದ್ದ ಆಸಕ್ತಿ ತಮ್ಮ 14ನೇ ವಯಸ್ಸಿಗೆ ರಂಗಪ್ರವೇಶಕ್ಕೆ ಕಾರಣವಾಯಿತು. ಅಲ್ಲಿಂದ ಮುಂದೆ ಬೆಂಗಳೂರಿನ ಪ್ರಸಿದ್ಧ ತಂಡಗಳಾದ ಗೆಳೆಯರ ಬಳಗ, ಸುಪ್ರಭಾತ ಕಲಾವಿದರು, ಕಮಲ ಕಲಾ ಮಂದಿರದ ಮುಖೇನ ಹಲವಾರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಜಾನಪದ ನಾಟಕಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ. ಅಲ್ಲದೆ ಪ್ರಖ್ಯಾತ ಕೀರ್ತನಕಾರರಾದ ದಿವಂಗತ ಗುರುರಾಜುಲು ನಾಯ್ಡು ಅವರು ಸ್ಥಾಪನೆ ಮಾಡಿದ 'ಜಯ ಭಾರತಿ ಕಲಾ ಸಂಘ', 'ಅರುಣ್ ಕುಮಾರ್ ಮಿತ್ರ ಮಂಡಳಿ' ಮತ್ತು 'ಸುಬ್ಬಯ್ಯ ನಾಯ್ಡು ಶಿಷ್ಯ ಮಂಡಳಿ'ಯ ಎಲ್ಲ ನಾಟಕಗಳಲ್ಲಿ ಭಾಗವಹಿಸಿದ್ದಾರೆ.

1964ರಲ್ಲಿ ಸಚಿವಾಲಯದ ಕೆಲವು ಸಹೋದ್ಯೋಗಿಗಳೊಡನೆ 'ಕರ್ನಾಟಕ ಸಚಿವಾಲಯ ಸಾಂಸ್ಕೃತಿಕ ಸಂಘ'ವನ್ನು ಸ್ಥಾಪಿಸಿ, ಸಂಸ್ಥೆಯ ಮುಖಾಂತರ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಉತ್ತಮ ನಾಟಕ ಪ್ರಯೋಗಗಳನ್ನು ಮಾಡಿದ್ದಾರೆ. ಪ್ರಸ್ತುತ ನಗರದ ಖ್ಯಾತ ಹವ್ಯಾಸಿ ತಂಡ 'ನಟರಂಗ' ಮತ್ತು 'ವೇದಿಕೆ'ಯ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ.

ಮಂಡೋದರಿ, ಎಚ್ಚಮನಾಯಕ, ಟಿಪ್ಪುಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ, ರಕ್ತಾಕ್ಷಿ, ಸದಾರಮೆ, ಕಾಕನಕೋಟೆ, ತುಘಲಕ್, ಮೃಚ್ಛಕಟಿಕ, ಭೈರವಿ ಹೀಗೆ ನೂರಾರು ಸಂಖ್ಯೆಯ ನಾಟಕಗಳಲ್ಲಿ ಪಾಲ್ಗೊಂಡು ಕರ್ನಾಟಕದಾದ್ಯಂತ ಮಾತ್ರವಲ್ಲದೆ ದೆಹಲಿ, ಹೈದರಾಬಾದ್, ಕೊಲ್ಕೊತ್ತಾ, ಮದ್ರಾಸ್, ಕಾಶ್ಮೀರ, ಬೊಂಬಾಯಿ ನಗರಗಳಲ್ಲೂ ನಾಟಕ ಪ್ರದರ್ಶನ ನೀಡಿದ್ದಾರೆ ರಾಜಾರಾಂ.



**ಜೆ. ಎಂ. ರಾಜಶೇಖರ**

ಜನನ : 19-3-1965

ವಿಳಾಸ :
ಚೌಡಯ್ಯದಾನಪುರ,
ರಾಣೆಬೆನ್ನೂರು ತಾಲ್ಲೂಕು,
ಹಾವೇರಿ ಜಿಲ್ಲೆ.

ಬಹುಮುಖ ಪ್ರತಿಭೆಯ ಜೆ.ಎಂ. ರಾಜಶೇಖರ ಹವ್ಯಾಸಿ ರಂಗನಟ, ನಿರ್ದೇಶಕ, ನಾಟಕಕಾರರು. ವೃತ್ತಿಯಿಂದ ಹಿರೇಕೆರೂರಿನಲ್ಲಿ ಆರೋಗ್ಯ ಸಹಾಯಕರಾಗಿ ದುಡಿಯುತ್ತಿದ್ದಾರೆ.

ರಾಷ್ಟ್ರೀಯ ನಾಟಕ ಶಾಲೆ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ 1992 ನಡೆದ ನಾಟಕ ಶಿಬಿರದಲ್ಲಿ ಪಾಲ್ಗೊಂಡ ರಾಜಶೇಖರ ಅಲ್ಲಿಂದ ಕಲಿತ ವಿದ್ಯೆಯ ಅನುಭವದಿಂದ ಹುಟ್ಟೂರಿನಲ್ಲಿ ಹಲವು ಬೀದಿ ನಾಟಕಗಳನ್ನು ನಿರ್ದೇಶಿಸಿ ಯಶಸ್ವಿಯಾಗಿ ಪ್ರಯೋಗಿಸುತ್ತಿದ್ದಾರೆ.

ಸಾಕ್ಷರತಾ ಆಂದೋಲನದಲ್ಲಿ ಕಲಾವಿದನಾಗಿ ಜಿಲ್ಲೆಯಾದ್ಯಂತ ಉತ್ತಮ ವಾತಾವರಣ ನಿರ್ಮಿಸುವ ಕಾರ್ಯದಲ್ಲಿ ಇವರ ಪಾತ್ರ ಹಿರಿದು. ಇವರ ನಿರ್ದೇಶನದ 'ಬಾರೋ ತಮ್ಮಾ ಅಕ್ಷರ ಕಲಿಸು ಬಾ', 'ವಿಸರ್ಜನೆ' ಬೀದಿ ನಾಟಕಗಳು ಇದುವರೆಗೂ 100 ಪ್ರದರ್ಶನ ಕಂಡಿದೆ. 'ಸುಮ್ ಸುಮ್ಕೆ ಗುಳಿಗಿ ಯಾಕ್ ನುಂಗ್ತೀರಿ ಹಂಗ', 'ವಿಸರ್ಜನೆ' ರಚಿಸಿ, ನಿರ್ದೇಶಿಸಿದ ಬೀದಿ ನಾಟಕಗಳು. ಜಿಲ್ಲೆಯ ತೋಟಗಾರಿಕೆ ಇಲಾಖೆ ಸಿಬ್ಬಂದಿಗಳಿಗಾಗಿ 'ತಾಳಿಯಿಲ್ಲದೇ ತಾಯಿಯಾದ' ನಾಟಕ ನಿರ್ದೇಶಿಸಿದ್ದಾರೆ. ಅಲ್ಲದೆ ಮಕ್ಕಳಿಗಾಗಿ ಸಂಸರ 'ಬಿರುದಂತೆಂಬರ ಗಂಡ' ನಾಟಕ ನಿರ್ದೇಶಿಸಿದ್ದಾರೆ. 'ಏಯ್ಡ್ಸ್ ಬಂತು ಏಯ್ಡ್ಸ್' ಬೀದಿ ನಾಟಕ ಸೇರಿದಂತೆ ಹಲವು ಸಾಮಾಜಿಕ ಸಮಸ್ಯೆಗಳನ್ನು ಕುರಿತು ಗ್ರಾಮೀಣ ನಾಟಕಗಳಲ್ಲಿ ಅಭಿನಯಿಸಿರುವುದು ಇವರ ಹೆಗ್ಗಳಿಕೆ.



**ಟಿ. ಎಸ್. ರಾಜಶೇಖರ್**

ಜನನ : 1955

*ವಿಳಾಸ :*

ನಂ. ಇ-6, ಪೊಲೀಸ್ ಅಧಿಕಾರಿಗಳ ವಸತಿಗೃಹ
16ನೇ ಕ್ರಾಸ್, ವಸಂತನಗರ
ಬೆಂಗಳೂರು - 52

ತಮ್ಮ 12ನೇ ವಯಸ್ಸಿಗೆ ಮುಖಕ್ಕೆ ಬಣ್ಣ ಹಚ್ಚಿ ಸುಭದ್ರಾ ಕಲ್ಯಾಣ ನಾಟಕದಲ್ಲಿ ಸುಸಂಗತೆ ಹಾಗೂ ಸುಭದ್ರೆಯ ಪಾತ್ರಧಾರಿಯಾಗಿ ರಂಗಮಂಚಕ್ಕೆ ಜಿಗಿದವರು ಟಿ.ಎಸ್. ರಾಜಶೇಖರ್.

ಶಾಲಾ ದಿನಗಳ ಬಣ್ಣದ ಗೀಳು ಕಾಲೇಜು ಜೀವನದಲ್ಲೂ ಮುಂದುವರಿದು ಕಣ್ಣಿಗೆ ಮಣ್ಣು, ತ್ಯಾಗಿ ಮುಂತಾದ ನಾಟಕಗಳಲ್ಲಿ ಅಭಿನಯಿಸಲು ಕಾರಣವಾಯಿತು. ಇದಾದ ನಂತರ ಕುಮಾರ ರಾಮ, ಟಿಪ್ಪು ಸುಲ್ತಾನ್, ರಾಮಾಯಣ, ಕುರುಕ್ಷೇತ್ರ ನಾಟಕಗಳಲ್ಲಿ ರಾಮ, ಭರತ, ಲಕ್ಷ್ಮಣ, ಅರ್ಜುನ, ಕೃಷ್ಣ, ಕರ್ಣ, ವಿದುರರಂಥ ವೈವಿಧ್ಯಮಯ ಪಾತ್ರಗಳಲ್ಲಿ ಇವರು ಅನುಭವ ಗಳಿಸಿಕೊಂಡಿದ್ದಾರೆ.

ಪ್ರಸ್ತುತ ನಗರದ ಪೊಲೀಸ್ ಕಮೀಷನರ್‌ರವರ ಕಛೇರಿಯಲ್ಲಿ ಸೆಂಟ್ರಲ್ ವಿಭಾಗದಲ್ಲಿ ಸೆಕ್ಷನ್ ಸೂಪರಿಂಟೆಂಡೆಂಟ್ ಆಗಿ ಸೇವೆಯಲ್ಲಿರುವ ರಾಜಶೇಖರ್ ತಾವು ಅಭಿನಯಿಸಿದ ಹಲವು ಪಾತ್ರಗಳಿಗೆ ಪ್ರಶಸ್ತಿ, ಪುರಸ್ಕಾರ, ಮಾನ್ಯತೆಯನ್ನು ಪಡೆದಿದ್ದಾರೆ.



ಎ. ಪಿ. ರಾಮಕೃಷ್ಣ

ಜನನ : 1954

ವಿಳಾಸ :
498, 'ನವ್ಯಕಾವ್ಯ'
7ನೇ ಕ್ರಾಸ್, 24ನೇ ಮೈನ್
HSR-I, ಅಗರ
ಬೆಂಗಳೂರು - 34

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಅಧಿಕಾರಿಯಾಗಿರುವ ಎ.ಪಿ. ರಾಮಕೃಷ್ಣ ಇದೀಗ ಕಿರುತೆರೆಯಲ್ಲಿ ಹೆಚ್ಚು ಮಿಂಚುತ್ತಿದ್ದರೂ ಕಲಾಬದುಕಿಗೆ ನಾಂದಿ ಹಾಡಿದ ರಂಗಭೂಮಿಗೆ ಮೊದಲ ಆದ್ಯತೆ ನೀಡುವವರು. ತಮ್ಮ 16ನೇ ವಯಸ್ಸಿನಿಂದಲೇ ನಾಟಕದ ಗೀಳು ಮೈಗೂಡಿಸಿಕೊಂಡು, ಕಾಲೇಜು ದಿನಗಳಲ್ಲೂ ನಾಟಕಗಳಲ್ಲಿ ನಟಿಸುವುದನ್ನು ಮುಂದುವರಿಸಿದರು. ಅಂತರ ಕಾಲೇಜು ನಾಟಕ ಸ್ಪರ್ಧೆಗಳಲ್ಲಿ ಸತತವಾಗಿ ಮೂರು ವರ್ಷ ಪ್ರಶಸ್ತಿ ಗಳಿಸಿದರು.

ಸಚಿವಾಲಯಕ್ಕೆ ಸೇವೆಗೆ ಸೇರಿದ ನಂತರ ತಮ್ಮ ರಂಗ ಚಟುವಟಿಕೆಗಳನ್ನು ಸಚಿವಾಲಯ ಕ್ಲಬ್‌ನಲ್ಲಿ ಮುಂದುವರೆಸಿಕೊಂಡು ಬಂದರು. ಈ ಕ್ಲಬ್‌ನಿಂದ ಪ್ರಯೋಗಿಸಿದ 'ಕೋಮಲ ಗಾಂಧಾರ' ನಾಟಕದ 'ಧೃತರಾಷ್ಟ್ರ'ನ ಪಾತ್ರಕ್ಕೆ ಉಡುಪಿ ರಂಗಭೂಮಿ ನಾಟಕ ಸ್ಪರ್ಧೆಯಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ದೊರೆತಿದೆ. ಸೂರ್ಯ ಶಿಕಾರಿ, ಉದ್ಭವ, ಬೆಕ್ಕು ಬಾಮಿ, ಸಂಕ್ರಾಂತಿ ಇವರಿಗೆ ಖ್ಯಾತಿ ನೀಡಿದ ನಾಟಕಗಳು.

ರಾಜ್ಯ ಸರ್ಕಾರಿ ನೌಕರರಿಗಾಗಿ ಏರ್ಪಡಿಸುವ 'ರಂಗ ಸ್ನೇಹ' ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ಹಾಸ್ಯನಟ ಪಾರಿತೋಷಕದ ಪ್ರಾಯೋಜಕರೂ ಆಗಿರುವ ರಾಮಕೃಷ್ಣ, ನಗರದ 'ಹೊಸಬರು' ರಂಗತಂಡದ ಖಜಾಂಚಿಯಾಗಿ, ಸಚಿವಾಲಯ ಸಾಂಸ್ಕೃತಿಕ ಸಂಘದ ಖಜಾಂಚಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.



## ಎ. ಎಸ್. ರಾಮಕೃಷ್ಣ

ಜನನ : 1931

ವಿಳಾಸ :
ನಂ. 735
8ನೇ ಮುಖ್ಯರಸ್ತೆ
ಬನಶಂಕರಿ 3ನೇ ಘಟ್ಟ, 3ನೇ ಹಂತ
ಭುವನೇಶ್ವರಿ ನಗರ, ಬೆಂಗಳೂರು - 85

'ಬೀದಿ ನಾಟಕಗಳ ರಾಮಕೃಷ್ಣ' ಎಂದೇ ಚಿರಪರಿಚಿತರಾದ ಅಕ್ಕಿಹೆಬ್ಬಾಳು ಸುಬ್ಬರಾವ್ ರಾಮಕೃಷ್ಣರವರು ಕಳೆದ ೫೦ ವರ್ಷಗಳಿಂದಲೂ ರಂಗಭೂಮಿಯ ನಾನಾ ಪ್ರಕಾರಗಳಲ್ಲಿ ದುಡಿಯುತ್ತ ಬಂದಿದ್ದಾರೆ. ಕಲಾ ಮಂದಿರ, ಚಿತ್ರಾ ಕಲಾವಿದರು, ಆರ್ಯ ವಿದ್ಯಾಶಾಲೆ, ರಾಮನಾರಾಯಣ್ ಚೆಲ್ಲಾರಾಂ ಕಾಲೇಜು, ಎಚ್.ಎ.ಎಲ್. ಕಲಾವಿದರು ಸಂಸ್ಥೆಗಳ ನೂರಾರು ಕಲಾವಿದರನ್ನು ಹವ್ಯಾಸಿ ರಂಗಭೂಮಿಗೆ ಪರಿಚಯಿಸಿದ್ದಾರೆ.

'ರಾಗ ಕಲಾವಿದರು' ಸಂಸ್ಥೆಯ ಸ್ಥಾಪಕ ನಿರ್ದೇಶಕರಾದ ರಾಮಕೃಷ್ಣ, ಈ ಸಂಸ್ಥೆಯಿಂದ 6000ಕ್ಕೂ ಹೆಚ್ಚು ಬೀದಿ ನಾಟಕಗಳು ಪ್ರಯೋಗಿಸಿ ವಿಶ್ವದಾಖಲೆ ಸ್ಥಾಪಿಸಿದ್ದಾರೆ. ಬೀದಿ ನಾಟಕಗಳನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಳ್ಳಲು ಮುಖ್ಯ ಕಾರಣ ಇವರ ತಂದೆ ಅ.ನ.ಸುಬ್ಬರಾಯರು. ಹಿತಚಿಂತಕರು, ಸಂಪತ್ತಿನ ಸೋಗು, ಪಬ್ಲಿಷರ್ ಪಂಚಾಕ್ಷರಿ, ಚೇರ್‌ಮನ್ ರಾಮೇಗೌಡ, ಘರ್ಷಣೆ, ಮತಾಂತರ, ಕಳ್ಳಭಟ್ಟಿ ಇಳಿಸುವವರು ಈ ಸಂಸ್ಥೆಯ ಜನಪ್ರಿಯ ಬೀದಿ ನಾಟಕಗಳು. ಅಲ್ಲದೆ 600ಕ್ಕೂ ಹೆಚ್ಚು ರಂಗ ನಾಟಕಗಳು, ಆಕಾಶವಾಣಿ ಪ್ರಾದೇಶಿಕ ಹಾಗೂ ರಾಷ್ಟ್ರೀಯ ನಾಟಕಗಳಲ್ಲೂ ಭಾಗವಹಿಸಿದ್ದಾರೆ.

ಇವರ ಮತ್ತೊಂದು ಸಾಧನೆ ಎಂದರೆ 1989ರಲ್ಲಿ ಮದ್ರಾಸಿನ ಜ್ಞಾನಾನಂದ ಭವನದಲ್ಲಿ ಒಂದು ಗಂಟೆಯ ನಾಟಕ 'ಸಂಪತ್ತಿನ ಸೋಗು' ವಿನ ದೃಶ್ಯವನ್ನು ಕೇವಲ ಮೂರೇ ನಿಮಿಷದಲ್ಲಿ ನಿರ್ದೇಶಿಸಿ, ಅಭಿನಯಿಸಿ, ನಟ ಕಮಲಹಾಸನ್ ಹಾಗೂ ನಿರ್ದೇಶಕ ಕೆ. ಬಾಲಚಂದರ್‌ರವರಿಂದ 'ಅಖಿಲ ಭಾರತ ಪ್ರಶಸ್ತಿ' ಪಡೆದರು. ಈ ದೃಶ್ಯವು ಸಾವಿರಾರು ಪ್ರಯೋಗ ಕಂಡಿದೆ. ಇವರ ಹಾಗೂ ಸಂಸ್ಥೆಯ ಸಾಧನೆಗಳು ದೆಹಲಿಯ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ನಲ್ಲಿ ದಾಖಲಾಗಿದೆ.

ಇಷ್ಟೆಲ್ಲ ಸಾಧನೆಗೈದಿರುವ 70ರ ಪ್ರಾಯದ ರಾಮಕೃಷ್ಣರಿಗೆ ಹಲವಾರು ಪ್ರಶಸ್ತಿಗಳು ಬಂದಿದೆ. 1999ರಲ್ಲಿ ಕೆಂಪೇಗೌಡರ ದಿನಾಚರಣೆಯ ಅಂಗವಾಗಿ 'ಕೆಂಪೇಗೌಡ ಪ್ರಶಸ್ತಿ' ನೀಡಿ ಗೌರವಿಸಿದೆ. 1997-98ರಲ್ಲಿ ಕರ್ನಾಟಕ ಕಲಾ ಸಂಸ್ಕೃತಿ ವೇದಿಕೆಯು 'ಪ್ರತಿಭಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

ಚಲನಚಿತ್ರಗಳಲ್ಲಿಯೂ ಹಾಗೂ ಕಿರುತೆರೆಯಲ್ಲೂ ರಾಮಕೃಷ್ಣ ಅಭಿನಯಿಸಿದ್ದಾರೆ.



## ಅ. ನ. ರಾಮಣ್ಣ

ಜನನ : 2-3-1940

*ವಿಳಾಸ :*
ನಂ.15, 5ನೇ ಮುಖ್ಯರಸ್ತೆ
3ನೇ ಅಡ್ಡರಸ್ತೆ, ಭೈರವೇಶ್ವರ ನಗರ
ನಾಗರಬಾವಿ ರಸ್ತೆ, ವಿಜಯನಗರ
ಬೆಂಗಳೂರು - 72

ಅ. ನ. ರಾಮಣ್ಣನವರು ಮಂಡ್ಯ ಜಿಲ್ಲೆಗೆ ಸೇರಿದ ಹದಮಗೆರೆ ಗ್ರಾಮದ ನರಸಯ್ಯ, ನರಸಮ್ಮನವರ ಮಗನಾಗಿ ಜನಿಸಿದರು. ಎಸ್.ಎಸ್.ಎಲ್.ಸಿ. ವರೆಗೆ ಶಿಕ್ಷಣ ಪೂರೈಸಿದ್ದಾರೆ. ಶಾಲಾದಿನಗಳಿಂದಲೇ ನಾಟಕದ ಬಗ್ಗೆ ಅದಮ್ಯ ಉತ್ಸಾಹ, ತುಡಿತಕ್ಕೆ ಒಳಗಾದರು.

ಮುಂದೆ ಎಚ್.ಎ.ಎಲ್.ನಲ್ಲಿ ಉದ್ಯೋಗಿಯಾಗಿ ಸೇರಿದ ಮೇಲೆ ಕಲಾಸೇವೆ ಮಾಡಬೇಕೆಂಬ ಬಯಕೆ ಬೇರೂರಿತು. ಕೆ.ಆರ್.ನಗರದ ಸಂತೆ ಸರಗೂರು ಅನಂತರಾಯರು ಇವರ ಕಲಾಭಿಲಾಷೆಗೆ 'ರಾಯರ ಸೊಸೆ' ಎಂಬ ಸಾಮಾಜಿಕ ನಾಟಕದಲ್ಲಿ ಪಾತ್ರ ನೀಡುವುದರ ಮೂಲಕ ನಾಂದಿ ಹಾಡಿದರು. ಮುಂದೆ ಹೆಸರಾಂತ ಹರಿಕಥಾ ವಿದ್ವಾನ್ ಶ್ರೀಗುರುರಾಜುಲು ನಾಯ್ಡು, ಗವಾಯಿ ರಂಗಸ್ವಾಮಿ, ದಾಶರಥಿ ದೀಕ್ಷಿತ್, ಎ.ಎಲ್.ಶ್ರೀನಿವಾಸ್‌ಮೂರ್ತಿ ಇವರುಗಳ ಸಂಗಡ ರಂಗಸೇವೆ ಮುಂದುವರೆಸಿದರು. ಹಾರ್ಮೋನಿಯಂ ಕೃಷ್ಣರಾಯರ 'ಕಾಳಿದಾಸ', 'ಸುಭದ್ರಾ ಪರಿಣಯ', 'ಕುರುಕ್ಷೇತ್ರ', 'ಶ್ರೀಕೃಷ್ಣಗಾರುಡಿ', 'ರಾಮಾಂಜನೇಯ ಯುದ್ಧ', 'ದೇವದಾಸಿ', 'ಮಕ್ಮಲ್ ಟೋಪಿ', 'ಸಂಸಾರ ನೌಕೆ', 'ಎಚ್ಚಮನಾಯಕ' ನಾಟಕಗಳಲ್ಲಿ ಅಭಿನಯಿಸಿ ನಟನೆಯಲ್ಲಿ ಪಳಗಿದರು.

ಹಿರಣ್ಣಯ್ಯ ಮಿತ್ರ ಮಂಡಳಿಯ ಭಕ್ತಕಬೀರ ಇವರಿಗೆ ಜನಪ್ರಿಯತೆಯನ್ನು, ಮಾನ್ಯತೆಯನ್ನು ತಂದಿತ್ತಿತು. 'ಸಿಡಿಲಮರಿ', 'ಅಳಿಯ ದೇವರು', 'ಸದಾರಮೆ', 'ದಿವ್ಯದರ್ಶನ', 'ಪಂಚಭೂತ', 'ಮೀನಿನ ಹೆಜ್ಜೆ', ರಾಮಣ್ಣ ಅಭಿನಯದ ಇನ್ನೂ ಕೆಲವು ಮುಖ್ಯ ನಾಟಕಗಳು.

ಕಳೆದ 50 ವರ್ಷಗಳಿಂದ ರಂಗಸೇವೆ ಮಾಡುತ್ತಿರುವ ರಾಮಣ್ಣನವರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ.



## ಟಿ. ಎನ್. ರಾಮಮೂರ್ತಿ

ಜನನ : 6-4-1937

*ವಿಳಾಸ :*
ನಂ. 22/2, ಲಕ್ಷ್ಮೀನಿಲಯ
9ನೇ ಕ್ರಾಸ್, 13ನೇ ಮೈನ್
ಗೋಕುಲ ಬಡಾವಣೆ
ಬೆಂಗಳೂರು - 54

ನಂಜುಂಡಯ್ಯ ಹಾಗೂ ಮೀನಾಕ್ಷಮ್ಮ ದಂಪತಿಗಳ ಮಗನಾಗಿ ಕೋಲಾರ ಜಿಲ್ಲೆಯ ತೊಪ್ಪನ ಹಳ್ಳಿಯಲ್ಲಿ ರಾಮಮೂರ್ತಿ ಜನಿಸಿದರು. ತಮ್ಮ 14ನೇ ವಯಸ್ಸಿಗೆ ರಂಗಪ್ರವೇಶ ಮಾಡಿ ಮುಂದೆ ಹಲವಾರು ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳಲ್ಲಿ ಕೃಷ್ಣ, ರಾಮ, ಹರಿಶ್ಚಂದ್ರ, ನಾರದ, ಸತ್ಯವಂತ ಹೀಗೆ ವೈವಿಧ್ಯಮಯ ಪಾತ್ರಗಳನ್ನು ರಂಗದ ಮೇಲೆ ನಿರ್ವಹಿಸಿ ಜನಪ್ರಿಯರಾಗಿದ್ದಾರೆ. ಶ್ರೀಕೃಷ್ಣ ಶ್ರೀರಾಮನ ಪಾತ್ರದಲ್ಲಿ ಹೆಚ್ಚು ತನ್ಮಯರಾಗಿ ನಟಿಸುವುದು ಇವರ ವಿಶೇಷತೆ.

ನಟನೆಯ ಜೊತೆಜೊತೆಗೆ ನಾಟಕಗಳಿಗೆ ರಾಗ ಸಂಯೋಜನೆ, ಪ್ರಸಾಧನ, ಹಾರ್ಮೋನಿಯಂ ವಾದನ, ಪಿಟೀಲು ವಾದನವನ್ನು ಮಾಡಿದ್ದಾರೆ. 1963 ರಲ್ಲಿ ಸ್ವಗ್ರಾಮದಲ್ಲಿ 'ಶ್ರೀ ಚಂದ್ರ ಮೌಳೇಶ್ವರ ಕಲಾ ಸಂಘ' ಸ್ಥಾಪಿಸಿ, ಸಂಸ್ಥೆಯ ವತಿಯಿಂದ ನಾಟಕ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ.

ರಾಮಮೂರ್ತಿಯವರ ಕಲಾ ಸೇವೆಗೆ 'ಕಲಾಶ್ರೀ', 'ಗಾನಸುಧಾರತ್ನ' ಎಂಬ ಬಿರುದುಗಳು ಸಂದಿವೆ.



## ಎಂ. ರಾಮರೆಡ್ಡಿ

ಜನನ : 1957

*ವಿಳಾಸ :*
ಅಗರ, ಅಗರ ಅಂಚೆ
ಬೆಂಗಳೂರು - 560034

ಕರ್ಣ ಹಾಗೂ ಕೃಷ್ಣನ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸುವ ಎಂ. ರಾಮರೆಡ್ಡಿ ಬಾಲ್ಯದಿಂದಲೆ ರಂಗಭೂಮಿಯ ಗೀಳನ್ನು ಬೆಳೆಸಿಕೊಂಡವರು. ಶಾಲಾದಿನಗಳಲ್ಲಿ 'ಯಕ್ಷಪ್ರಶ್ನೆ' ನಾಟಕದಲ್ಲಿ ಭೀಮನಾಗಿ ರಂಗಪ್ರವೇಶ ಮಾಡಿದ ಇವರು ಇಂದಿಗೂ ರಂಗಭೂಮಿಯಲ್ಲಿ ಸಕ್ರಿಯ ನಟರಾಗಿ, ಸಂಘಟಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ರಂಗಭೂಮಿಯಲ್ಲಿ ವಿಶೇಷ ಆಸಕ್ತಿಯಿಂದ ಕೆಲಸ ಮಾಡುತ್ತಿರುವ ಇವರು ಸಂಘಟಿಸಿದ ನಾಟಕಗಳು ನೂರಾರು. ಯಾವುದೇ ಗ್ರಾಮೀಣ ತಂಡ ನಾಟಕ ಮಾಡಿದರು ಸಹಾಯ ಹಸ್ತ ನೀಡುವುದರ ಜೊತೆಗೆ ನಾಟಕಗಳ ಯಶಸ್ಸಿಗೆ ದುಡಿಯುವ ಪ್ರವೃತ್ತಿ.

ಕುರುಕ್ಷೇತ್ರ, ಕೃಷ್ಣಸಂಧಾನ, ಬಬ್ರುವಾಹನ ಮುಂತಾದ ಪೌರಾಣಿಕ ನಾಟಕಗಳ ಜೊತೆಗೆ ಅನೇಕ ಸಾಮಾಜಿಕ ನಾಟಕಗಳಲ್ಲೂ ಪಾತ್ರವಹಿಸಿದ್ದಾರೆ. ಅಶಕ್ತ ಕಲಾವಿದರ ಸಂಘದ ಪೋಷಕರಾಗಿ ನೂರಾರು ಬಡ ಕಲಾವಿದರಿಗೆ ನೆರವಾಗಿದ್ದಾರೆ. ವಜ್ರಪ್ಪ ಕಲ್ಲೂರ್ ಶ್ರೀನಿವಾಸ್, ನರಸಿಂಹಯ್ಯ ಮುಂತಾದ ಖ್ಯಾತ ರಂಗ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಇವರ ರಂಗಸೇವೆಯನ್ನು ಗಮನಿಸಿ ಇವರನ್ನು ಸನ್ಮಾನಿಸಿದೆ.



## ಅ. ನಾ. ರಾವ್‌ಜಾದವ್

ಜನನ : 1962

*ವಿಳಾಸ :*
ನಂ.7, 1ನೇ ಅಡ್ಡರಸ್ತೆ,
ರಾಜಪ್ಪ ಬ್ಲಾಕ್, ಜೆ.ಸಿ. ನಗರ
ಬೆಂಗಳೂರು - 6

ರಂಗ ಒಡನಾಡಿಗಳಲ್ಲಿ ಅ.ನಾ.ರಾವ್‌ಜಾದವ್ ಎಂದು ಪರಿಚಿತರಾದ ಅಶ್ವತ್ಥನಾರಾಯಣರಾವ್ ಜಾದವ್ ಹವ್ಯಾಸಿ ರಂಗಕರ್ಮಿ. ಶಾಲಾ ಕಾಲೇಜು ದಿನಗಳಲ್ಲೇ ನಾಟಕದಲ್ಲಿ ಆಸಕ್ತಿ ಇದ್ದು, ಸಣ್ಣ ಪುಟ್ಟ ಪಾತ್ರಗಳನ್ನು ನಟಿಸಿದ್ದೂ ಇದೆ.

ಇವರನ್ನು ಬೆಂಗಳೂರಿನ ಹವ್ಯಾಸಿ ರಂಗಕರ್ಮಿಯಾಗಿಸಿದ್ದು 'ಕಿನ್ನರ' ತಂಡ ಆಯೋಜಿಸಿದ್ದ ಮೂಕಾಭಿನಯ ಶಿಬಿರ. ಮುಂದೆ ಅದೇ ತಂಡದ ಹಲವು ನಾಟಕಗಳಲ್ಲಿ ನಟಿಸಿದರು. 'ಬಿಂಬ', 'ಪ್ರಯೋಗರಂಗ' ತಂಡಗಳ ಬೀದಿ ನಾಟಕಗಳಲ್ಲಿ ಪಾಲ್ಗೊಂಡು ಅನುಭವ ಗಳಿಸಿದರು. ಮುಂದೆ 'ರೂಪಾಂತರ' ತಂಡದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ರಂಗ ಪ್ರಯೋಗದ ಎಲ್ಲಾ ವಿಭಾಗಗಳಲ್ಲೂ ಅನುಭವ ಗಳಿಸಿಕೊಂಡಿದ್ದಾರೆ.

ಲಂಕೇಶರ 'ರೊಟ್ಟಿ,' ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು', ಗಿರೀಶ್ ಕಾರ್ನಾಡರ 'ಯಯಾತಿ', ಹೆಚ್. ಎಸ್. ವೆಂಕಟೇಶಮೂರ್ತಿಯವರ 'ಹೆಜ್ಜೆಗಳು', ಚಂದ್ರಕಾಂತ ಕುಸನೂರರ ದಿಂಡಿ, ಕುಂ. ವಿ. ಯವರ 'ಕತ್ತಲನು ತ್ರಿಶೂಲ ಹಿಡಿದ ಕಥೆ', ಕಾಯೋ ಕುರಿಗಳನಾ, ಹಿಂಗೊಂದೂರಾಗೆ, ಅಂತಿಮ ಸಂದೇಶ, ಸಂದರ್ಭ, ಆಸ್ಫೋಟ, ಕುಬಿ ಮತ್ತು ಇಯಾಲ ಇವು ಜಾದವ್ ನಟನಾಗಿ ಪಾಲ್ಗೊಂಡ ಕೆಲವು ಉತ್ತಮ ನಾಟಕಗಳು. ದೆಹಲಿ, ಲಕ್ನೋ, ಮುಂಬೈ, ಸಿಮ್ಲಾಗಳಲ್ಲೂ ಈ ನಾಟಕ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಇವರ ಮಹತ್ವದ ಸಾಧನೆ ಎಂದರೆ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕತೆಯನ್ನು ರಂಗಕ್ಕೆ ರೂಪಾಂತರಿಸಿ, ರಂಗ ಪ್ರಯೋಗದ ನಿರ್ದೇಶಕನಾಗಿ ಯಶಸ್ವಿಯಾಗಿದ್ದಾರೆ. ಸುಮಾರು 12 ವರ್ಷಗಳಿಂದ ಆಕಾಶವಾಣಿ ಕಲಾವಿದನಾಗಿ ಹಲವಾರು ರೇಡಿಯೋ ನಾಟಕಗಳಲ್ಲಿ, ಕೆಲ ದೂರದರ್ಶನ ನಾಟಕಗಳಲ್ಲೂ ಭಾಗವಹಿಸಿದ್ದಾರೆ.

ರಾಜ್ಯ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯೊಂದರ ಉದ್ಯೋಗಿಯಾಗಿರುವ ಜಾದವ್ ಕಾರ್ಖಾನೆಯ ಕಲಾವಿದರಿಗಾಗಿ ಭರತೇಶರ 'ಎಲ್ಲಾರು ಮಾಡುವುದು' ನಾಟಕ ನಿರ್ದೇಶಿಸಿ ರಾಜ್ಯಮಟ್ಟದ ಕೈಗಾರಿಕಾ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ್ದಾರೆ. ಛಾಯಾಗ್ರಹಣ, ಬರವಣಿಗೆಯ ಹವ್ಯಾಸವನ್ನು ಉಳ್ಳವರಾಗಿದ್ದಾರೆ.



## ಜಿ. ಬಿ. ರೇವಣಾರಾಧ್ಯ

ಜನನ : 9-12-1938

*ವಿಳಾಸ :*


3394, ಶಾಂತಿ ನಿಕೇತನ
3ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ
ವಿಜಯನಗರ 2ನೇ ಹಂತ
ಬೆಂಗಳೂರು - 40

ನಾಟಕ ಮತ್ತು ಸಾಹಿತ್ಯ ವಲಯಗಳಲ್ಲಿ ಗುಬ್ಬಿ ರೇವಣಾರಾಧ್ಯ ಎಂದು ಪರಿಚಿತರಾಗಿದ್ದಾರೆ ಜಿ.ಬಿ. ರೇವಣಾರಾಧ್ಯರು. ತಂದೆ ಜಿ. ಎಸ್. ಬಸವಪ್ಪ ದೇವರು ಶಾಲಾ ಉಪಾಧ್ಯಾಯರು. ನಾಟಕ, ಸಂಗೀತ, ಸಾಹಿತ್ಯದ ಅಭಿರುಚಿ ಹೊಂದಿದ್ದರು. ತಂದೆಯ ಗುಣ ಮಗನಲ್ಲೂ ಪ್ರವಹಿಸಿತು.

ರೇವಣಾರಾಧ್ಯ ಶಾಲಾ ದಿನಾಚರಣೆಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಪ್ರದರ್ಶಿಸಲ್ಪಡುತ್ತಿದ್ದ ನಾಟಕಗಳಲ್ಲಿ ಬಾಲ ನಟನಾಗಿ ರಂಗ ಪ್ರವೇಶಿಸಿದರು. ಗುಬ್ಬಿ ಕಂಪನಿ, ಹಿರಣ್ಣಯ್ಯ ಮಿತ್ರಮಂಡಳಿಗಳ ನಾಟಕಗಳನ್ನು ನೋಡಿ ರಂಗದ ಸೆಳೆತ ಮತ್ತೂ ಹೆಚ್ಚಾಯಿತು. ಕಾಲೇಜು ವಿದ್ಯಾರ್ಥಿ ಜೀವನದಲ್ಲೂ ಈ ಹಂಬಲ ಮುಂದುವರೆದು ಧರ್ಮ ರತ್ನಾಕರ, ಆತ್ಮಹತ್ಯೆ, ನಿಶ್ಚಿತಾರ್ಥ, ಉಂಡಾಡಿ ಗುಂಡ, ಬಹದ್ದೂರ್ ಗಂಡ, ಗಂಡು ಗೊಡಲಿ, ಎಚ್ಚಮನಾಯಕ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿದರು.

ಉದ್ಯೋಗಾರ್ಥಿಯಾಗಿ ಬೆಂಗಳೂರಿಗೆ ಬಂದು 1960ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿಮಂಡಳಿ ಸೇರಿದರು. 1972ರಿಂದ ಬೆಂಗಳೂರಿನ ಖ್ಯಾತ ಹವ್ಯಾಸಿ ತಂಡಗಳಾದ ಅಭಿನಯರಂಗ, ರಂಗಸಂಪದ, ಸಮುದಾಯ ತಂಡಗಳ ವಾಸನಾ, ಬಾಕಿ ಇತಿಹಾಸ, ಯಾರಿಗೆ ಮಾಡ್ತೀ ಮ್ಯಾಂ, ಆರು ಪಾತ್ರಗಳು, ಸಂದರ್ಭ, ಕೊಂದು ಕೂಗಿತ್ತು ನೋಡಾ ಇತ್ಯಾದಿ ಪ್ರಯೋಗಾತ್ಮಕ ನಾಟಕಗಳಲ್ಲಿ ನಟಿಸಿದರು.

ವೃತ್ತಿಯಿಂದ ನಿವೃತ್ತಿ ಹೊಂದಿದ್ದರೂ, ಪ್ರವೃತ್ತಿಯಿಂದ ದೂರಾಗಿಲ್ಲ.



## ಕೆ. ಲಕ್ಷ್ಮಣ ಸುವರ್ಣ

ವಿಳಾಸ :
ನಂ.2, ಸುವರ್ಣ ನಿಲಯ
ಎನ್. ಆರ್. ಬಡಾವಣೆ,
ದೂರವಾಣಿ ನಗರ ಅಂಚೆ
ಬೆಂಗಳೂರು - 16

ಲಕ್ಷ್ಮಣ ಸುವರ್ಣ ಖ್ಯಾತ ರಂಗ ಸಂಗೀತ ನಿರ್ದೇಶಕರು. ದಕ್ಷಿಣ ಕನ್ನಡ ಜಿಲ್ಲೆಯ ಕುಂಜಿಬೆಟ್ಟು ಇವರ ಹುಟ್ಟೂರು ಯು. ರಾಮಕೃಷ್ಣ, ಕೆ. ಸೀತಾ ತಂದೆ ತಾಯಿಯರು.

'ಬೆಳೆಯುವ ಪೈರು ಮೊಳಕೆಯಲ್ಲೇ' ಎಂಬಂತೆ ಶಾಲಾ ದಿನಗಳಿಂದಲೇ ಹಾಡುವುದು, ನಾಟಕಗಳಲ್ಲಿ ನಟಿಸುವುದು ಹವ್ಯಾಸವಾಗಿ ಬಂದಿತು. ಅಂದಿನ ದಿನಗಳಲ್ಲೇ ರಂಗಗೀತೆಗಳನ್ನು ಹಾಡಿ ಬಹುಮಾನಗಳನ್ನು ಗಳಿಸಿದರು. ಸಂಗೀತದ ಬಗ್ಗೆ ಅಪಾರ ಆಸಕ್ತಿ ಇದ್ದು ತಮ್ಮ ಸ್ವಂತ ಪರಿಶ್ರಮದಿಂದ ಹಾರ್ಮೋನಿಯಂ, ತಬಲ, ಡೋಲಕ್, ಕಾಂಗೋ, ತುಂಬಾ ಇತರ ವಾದ್ಯಗಳಲ್ಲಿ ಪರಿಣತಿ ಪಡೆದಿರುವುದು ಅವರ ಆಸಕ್ತಿಗೆ ಹಿಡಿದ ಕನ್ನಡಿ.


1978ರಲ್ಲಿ ಭಾರತ ಆಹಾರ ನಿಗಮದ ಶಿವಮೊಗ್ಗ ಶಾಖೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡರೂ, ತಮ್ಮ ಕಲಾರಾಧನೆಯನ್ನು ಮುಂದುವರೆಸಿ, 'ಚೇತನ ಮ್ಯೂಸಿಕಲ್ ಪ್ಲೇಯರ್ಸ್' ತಂಡವನ್ನು ಹುಟ್ಟುಹಾಕಿ ಸಂಗೀತ ಕಾರ್ಯಕ್ರಮಗಳನ್ನು ನೀಡತೊಡಗಿದರು. 1983ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದು ತಮ್ಮ ಆಸಕ್ತಿ ಕ್ಷೇತ್ರವಾದ ಜಾನಪದ ಗೀತೆಗಳು ಮತ್ತು ನಾಟಕಗಳ ಬಗ್ಗೆ ಶ್ರೀ ಶಿವರುದ್ರಯ್ಯನವರಿಂದ ಮಾರ್ಗದರ್ಶನ ಪಡೆದರು.

ಇಲ್ಲಿಂದ ಮುಂದೆ ಇವರ ಚಟುವಟಿಕೆಗಳು ತೀವ್ರವಾಯಿತು. 1984ರಲ್ಲಿ ಹೈದರಾಬಾದಿನಲ್ಲಿ ನಡೆದ ದಕ್ಷಿಣ ವಲಯ ಕಾರ್ಯಕ್ರಮದಲ್ಲಿ ಇಲಾಖೆಯನ್ನು ಪ್ರತಿನಿಧಿಸಿದರು. ತಿರುವನಂತಪುರ, ಕೊಯಂಬತ್ತೂರು, ತಂಜಾವೂರು, ವಿಶಾಖಪಟ್ಟಣ ಮುಂತಾದ ನಗರಗಳಲ್ಲಿ ನಡೆದ ಉತ್ಸವಗಳಲ್ಲಿ ಸಾಕ್ಷಿಗಲ್ಲು, ಜೋಕುಮಾರಸ್ವಾಮಿ ಸಂಗ್ಯಾಬಾಳ್ಯ, ಒಂದು ಹಳ್ಳಿಯ ಕಥೆ, ದೊಡ್ಡಪ್ಪ, ಬೆಳ್ಳಕ್ಕಿ ಹಿಂಡು ಬೆದರ್‍ಯಾವೋ ನಾಟಕಗಳಿಗೆ ಸಂಗೀತ ನೀಡಿ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಂಗೀತ ನಿರ್ದೇಶಕ ಎಂಬ ಖ್ಯಾತಿಗೆ ಒಳಗಾದರು. ಇಲಾಖೆಯ ಹೊರಗೂ ಅಂದರೆ ಕೆಲವು ಹವ್ಯಾಸಿ ತಂಡಗಳಲ್ಲೂ ಲಕ್ಷ್ಮಣ ಸಂಗೀತ ನಿರ್ದೇಶಕರಾಗಿ ಪಾಲುಗೊಂಡಿದ್ದಾರೆ. ದೇವ್ ನಾಗೇಶ್ ನಿರ್ದೇಶನದ 'ನಾಗಮಂಡಲ', ಕೋಟೆ, ಎನ್.ಇ.ಶ್ರೀಕಂಠಯ್ಯ ನಿರ್ದೇಶನದ 'ಅಂಬರಬಾಲೆ', ಸೇರಿದಂತೆ ಜಯತೀರ್ಥ ಜೋಷಿ, ಡಿ.ಟಿ. ಚನ್ನಕೇಶವ ಮೂರ್ತಿ, ಸುರೇಶ್ ಆನಗಳ್ಳಿ, ಕೃಷ್ಣಮೂರ್ತಿ ಕವತ್ತಾರ್, ಅಮರ್ ಮುಂತಾದ ಪ್ರತಿಭಾವಂತ ನಿರ್ದೇಶಕರ ಜೊತೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಸಂಪತ್ತು ಇವರದು.

ಇವರ ದಾಖಲಾರ್ಹ ವಿಷಯಗಳೆಂದರೆ 1995ರಲ್ಲಿ ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ರಾಮಕೃಷ್ಣ ಬಿ.ಜಿ. ಮತ್ತು ಮೈಕೋ ಶಿವಶಂಕರ್ ಅಭಿನಯದ 24ಗಂಟೆಗಳ ತಡೆರಹಿತ ರಾತ್ರಿ ಹಗಲು ನಾಟಕ ಪ್ರದರ್ಶನಕ್ಕೆ ಸಂಗೀತ ನೀಡಿದ್ದಾರೆ. ಇತ್ತೀಚೆಗೆ 'ನಂದನ' ತಂಡದ ದೇವ್ ನಾಗೇಶ್‌ರವರ ಗಿನ್ನಿಸ್ ವಿಶ್ವದಾಖಲೆಗಾಗಿ 100 ಗಂಟೆಗಳ ಕಾಲದ ನಿರಂತರ 40 ನಾಟಕಗಳಿಗೆ ಸಂಗೀತ ಮತ್ತು ಹಿನ್ನೆಲೆ ಗಾಯನ ನೀಡಿದ್ದಾರೆ.

ಬಿ.ಇ.ಎಲ್., ಬಿ.ಎಚ್.ಇ.ಎಲ್, ಐ.ಟಿ.ಸಿ, ಕಾರ್ಖಾನೆಗಳ ಸಂಘ ಸಂಸ್ಥೆಗಳ ಹಾಗೂ ಆಕಾಶವಾಣಿಯ ಹಲವಾರು ನಾಟಗಳಿಗೆ ಸಂಗೀತ ನೀಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಲಕ್ಷ್ಮಣ ಸುವರ್ಣ ಖಾಯಂ ಕಲಾವಿದರಾಗಿರುವುದು ಇವರ ಪ್ರತಿಭೆಗೆ ಸಾಕ್ಷಿ.

ರಂಗ ಸಂಗೀತ ವಿಭಾಗದ ಈ ಎಲ್ಲಾ ಸಾಧನೆಗಾಗಿ ಹಲವಾರು ಪ್ರಶಸ್ತಿ, ಪುರಸ್ಕಾರ ಸನ್ಮಾನಗಳು ಇವರನ್ನು ಅರಸಿ ಬಂದಿವೆ.



**ಲಕ್ಷ್ಮೀಪತಿ .ಜೆ**

ಜನನ : 23-7-1973

ವಿಳಾಸ:
ಹೆಣ್ಣೂರು ಗ್ರಾಮ
ಕಲ್ಯಾಣನಗರ, ಬೆಂಗಳೂರು - 560043

ಬಾಲ್ಯದಿಂದಲೆ ರಂಗಭೂಮಿಯ ಗೀಳು ಅಂಟಿಸಿಕೊಂಡ ಲಕ್ಷ್ಮಿಪತಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆಯನ್ನು ಅಭ್ಯಾಸ ಮಾಡಿದವರು. ಭಾರತ ಯಾತ್ರ ಕೇಂದ್ರದ ಶಂಕರ್‌ನಾಗ್ ರಂಗ ತರಬೇತಿ ಶಿಬಿರದ ಮೂಲಕ ಸಕ್ರಿಯವಾಗಿ ರಂಗಭೂಮಿಗೆ ತೊಡಗಿಸಿಕೊಂಡವರು. ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಯಾಗಿ ಅತ್ಯಂತ ಯಶಸ್ವಿ ನಾಟಕಗಳನ್ನು ನಿರ್ಮಿಸಿ ಹಲವು ಪ್ರಶಸ್ತಿ ತಮ್ಮ ಬಗಲಿಗೆ ಹಾಕಿಕೊಂಡವರು. ಅಂಧಯುಗ, ಮ್ಯಾಕ್‌ಬೆತ್, ಅಗ್ನಿ ಮತ್ತು ಮಳೆ, ಹಲಗಲಿ ಬೇಡರ ದಂಗೆ ಮುಂತಾಧ ನಾಟಕಗಳಿಗೆ ಅತ್ಯುತ್ತಮ ರಂಗ ಪರಿಕರ ನಿರ್ಮಾಣ ಮಾಡುವುದರೊಂದಿಗೆ ರಂಗ ನೇಪಥ್ಯದಲ್ಲಿ ಸೈ ಎನಿಸಿಕೊಂಡವರು. ಪ್ರಯೋಗರಂಗದ ಪ್ರಮುಖ ಕಲಾವಿದರಾಗಿ ಮಂಟೆಸ್ವಾಮಿ ಕಥಾ ಪ್ರಸಂಗ, ರಾಜಬೇಟೆ, ಮಲ್ಲಮ್ಮನ ಮನೆ ಹೋಟ್ಲು ಮುಂತಾದ ನಾಟಕಗಳಲ್ಲಿ ಅಭಿನಯ.

ಭಾರತ ಯಾತ್ರಾ ಕೇಂದ್ರದ ಬೆಂಗಳೂರು ಘಟಕ ಸಂಚಾಲಕರಾಗಿ ಹಲವು ಸಾಂಸ್ಕೃತಿಕ ಶಿಬಿರಗಳನ್ನು ಯಶಸ್ವಿಯಾಗಿ ಸಂಘಟಿಸಿರುವ ಲಕ್ಷ್ಮಿಪತಿ ಯಲಹಂಕ ನಗರಸಭೆಯ ಸದಸ್ಯರಾಗಿ ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ.



## ವಜೀರಾ ಬಾಯಿ ಸೌದತ್ತಿ

ವಿಳಾಸ:
C/o ರಾಜು ಪಾಟೀಲ್
ಕೆ.ಎಸ್.ಆರ್.ಟಿ.ಸಿ.
ಸೌದತ್ತಿ, ಬೆಳಗಾವಿ ಜಿಲ್ಲೆ

ಶಿರಹಟ್ಟಿ ವೆಂಕೋಬಾರಾಯರ ಅಣ್ಣನ ಮಗ ಅಣ್ಣಾರಾವ್ ಅವರು ಆರಂಭಿಸಿದ ನಾಟಕ ಕಂಪನಿಯಲ್ಲಿ ತಮ್ಮ ಬಾಲ್ಯದಲ್ಲಿಯೇ ಸೇರಿದ ವಜೀರ ಬಾಯಿ, 'ಉತ್ತರ ಭೂಪ', 'ಬಡತನ ಭೂತ' ನಾಟಕಗಳ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ತರಬೇತಿ ಹೊಂದಿದರು. ಒಂದು ವರ್ಷದ ನಂತರ ಹಳ್ಳಿಗಾಡಿ ಸದಾಶಿವಪ್ಪನವರ ನಾಟಕ ಕಂಪನಿ ಸೇರಿ, 'ಪಠಾಣಿ ಪಾಶ'ದಲ್ಲಿ ವೃಂದಾ, 'ಪ್ರಪಂಚ ಪರೀಕ್ಷೆ' ನಾಟಕದಲ್ಲಿ ದೇವರಾಣಿ, 'ಬಡತನದ ಭೂತ' ದ ಮಲಿಕಿ, 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಮಹಾದೇವಿ ಮತ್ತು ಚಿತ್ರರಂಜಿನಿ ಪಾತ್ರಗಳಲ್ಲಿ ಹೆಸರುವಾಸಿಯಾದರು. ಮುಂದೆ ಕಲಕೋಟಿ ಚನ್ನಬಸವಯ್ಯನವರ ನಾಟಕ ಕಂಪನಿ ಸೇರಿ ರಂಗ ಗೀತೆಗಳನ್ನು ಶಾಸ್ತ್ರೀಯವಾಗಿ ಕಲಿತು, 'ಕುರುಕ್ಷೇತ್ರ' ನಾಟಕದ ದ್ರೌಪದಿ, 'ಸ್ತ್ರೀ' ನಾಟಕದ ಕಮಲಾ ಪಾತ್ರಗಳನ್ನು ಮತ್ತಷ್ಟು ಕಳೆಗಟ್ಟಿಸಿದರು. ಸಂಗೀತವೇ ನಾಟಕದ ಜೀವಾಳವಾಗಿದ್ದ ಆ ದಿನಗಳು ವಜೀರಬಾಯಿಯಂಥ ಸಂಗೀತ ಪ್ರತಿಭೆಗೆ ಉತ್ತಮ ಅವಕಾಶ ನೀಡಿದವು.

ಮೂರು ವರ್ಷದ ನಂತರ ಕಂಚಿಕೇರಿ ಕೊಟ್ರ ಬಸಪ್ಪನವರ ನಾಟಕ ಕಂಪನಿ ಸೇರಿ 'ಚಿತ್ರಾಂಗದ', 'ಭೌಮಾಸುರ', 'ಮೋಹಿನಿ ಭಸ್ಮಾಸುರ' ನಾಟಕಗಳಲ್ಲಿ ನಾಯಕಿ ಪಾತ್ರ ವಹಿಸಿದರು. ನಂತರ ಜಮಖಿಂಡಿಯ ಗಜಾನನ ನಾಟಕ ಕಂಪನಿ ಕರೆಯ ಮೇರೆಗೆ ಆ ಕಂಪನಿ ಸೇರಿ ಟಿಪ್ಪುಸುಲ್ತಾನ, 'ರಾಮಾಯಣ' ಸೇರಿದಂತೆ ಎಲ್ಲ ಬಗೆಯ ನಾಟಕಗಳಲ್ಲಿ ಪಾತ್ರವಹಿಸಿದರು. ಮುಂದೆ ಮನ್ನೂರು ಬಸವಣ್ಣೆಪ್ಪನವರ ನಾಟಕ ಕಂಪನಿಯ ಪೌರಾಣಿಕ ಪಾತ್ರಗಳಿಂದ ಜನಪ್ರಿಯತೆಯ ತುತ್ತ ತುದಿಗೆ ಏರಿದರು. ಅಪಾರ ಬೇಡಿಕೆಯುಳ್ಳ ನಟಿಯಾಗಿ ಬೆಳೆದರು. ಮುಂದೆ ನ್ಯಾಮತಿ ಶಾಂತಪ್ಪನವರ ಕಂಪನಿಯ ಸೌಭಾಗ್ಯಲಕ್ಷ್ಮಿ, ಸ್ತ್ರೀರತ್ನ ನಾಟಕಗಳಲ್ಲಿ ಕಥಾನಾಯಕಿಯಾಗಿ ಅಭಿನಯಿಸಿದರು. ಗುಳೇದಗುಡ್ಡದ ಯಚ್ಚರಪ್ಪ ಕೋರ್ಪಡೆ, ವಸಂತ ಸಾ ನಾಕೋಡರ ನಾಟಕ ಕಂಪನಿ ಹೀಗೆ ಕರ್ನಾಟಕದ ಹಲವು ಪ್ರಮುಖ ನಾಟಕ ಕಂಪನಿಗಳಲ್ಲಿ ಮೂವತ್ತು ವರ್ಷಕ್ಕೂ ಹೆಚ್ಚು ಕಾಲ ನಟಿಯಾಗಿ ಮೆರೆದ ಅನನ್ಯ ಪ್ರತಿಭೆ, ವಜೀರಾ ಬಾಯಿ.



**ಪಿ. ವಜ್ರಪ್ಪ**

ಜನನ : 1941

ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಹಾಸನ, ಮಂಡ್ಯ ಹಾಗೂ ಬೆಂಗಳೂರು ನಗರಗಳಲ್ಲಿ ಪೌರಾಣಿಕ ನಾಟಕಗಳ ನಿರ್ದೇಶಕರು ಎಂದರೆ ಮೊದಲು ಕೇಳುವ ಹೆಸರು ಪಿ. ವಜ್ರಪ್ಪ. ಸಾವಿರಾರು ಕುರುಕ್ಷೇತ್ರ ನಾಟಕ ನಿರ್ದೇಶಕ ಸರದಾರರಾಗಿರುವ ಪಿ. ವಜ್ರಪ್ಪ ತಯಾರು ಮಾಡಿರುವ ಶಿಷ್ಯರ ಸಂಖ್ಯೆಯು ಸಾವಿರಾರು. ಡಾ|| ರಾಜಕುಮಾರ್, ಮಾಸ್ಟರ್ ಹಿರಣ್ಣಯ್ಯ ಮುಂತಾವರ ಅಭಿನಯಕ್ಕೆ, ಗಾಯನಕ್ಕೆ ಹಾರ್ಮೋನಿಯಂ ನುಡಿಸಿದವರು ಇವರು. ಕೌರವೇಶ್ವರ, ಚಕ್ರವ್ಯೂಹ, ಬಬ್ರುವಾಹನ, ತ್ರಿಪುರ ಸಂಹಾರ, ದುರಂತ ಕರ್ಣ, ಕೃಷ್ಣಸಂಧಾನ ಮುಂತಾದ ನಾಟಕಗಳನ್ನು ನೂರಾರು ತಂಡಗಳಿಗೆ ನಿರ್ದೇಶಿಸಿದ್ದಾರೆ.

ಗ್ರಾಮೀಣ ರಂಗಭೂಮಿಗೆ ತಮ್ಮದೆ ಆದ ಕಾಣಿಕೆ ಇತ್ತಿರುವ ಪಿ. ವಜ್ರಪ್ಪ ೧೯೫೩ ರಲ್ಲಿ ಬಾಲನಟರಾಗಿ ರಂಗಪ್ರವೇಶಿಸಿದರು. ನಂತರ ಕೊಟ್ಟೂರಪ್ಪನವರ ಚಾಮುಂಡೇಶ್ವರಿ ಕಂಪನಿಯಲ್ಲಿ ಹಾರ್ಮೋನಿಯಂ ಕಲಿತು ಮುಂದೆ ಗ್ರಾಮೀಣ ರಂಗಭೂಮಿಗಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಮಹಾನಗರ ಪಾಲಿಕೆಗಳು ಪ್ರಶಸ್ತಿ ನೀಡಿ ವಜ್ರಪ್ಪನವರನ್ನು ಗೌರವಿಸಿದೆ. ಹಾಗೆಯೆ ನೂರಾರು ರಂಗ ತಂಡಗಳ ಸನ್ಮಾನಕ್ಕೆ ಪಾತ್ರರಾಗಿರುವ ಪಿ. ವಜ್ರಪ್ಪ ಸಂಪ್ರದಾಯ, ನಗುತ ಅರಳು ಮಲ್ಲಿಗೆ ಹಾಗೂ ಜಾಗೃತಿ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ.



ವರಲಕ್ಷ್ಮಿ
ಜನನ 14-8-1953

ವರಲಕ್ಷ್ಮಿ ವೃತ್ತಿ ರಂಗಭೂಮಿ ಕಲಾವಿದೆ. ಬಳ್ಳಾರಿ ಹುಟ್ಟೂರು. ತಂದೆ ಪದ್ಮಶಾಲೆ ವೆಂಕಟೇಶುಲು, ತಾಯಿ ಹುಲಿಗಮ್ಮ. ಇವರ ಕಲಾಜೀವನ ಆರಂಭವಾದದ್ದು 8ನೇ ವರ್ಷದಲ್ಲಿ. ರಂಗಭೂಮಿಗೆ ಬರಲು ತಾಯಿಯೇ ಸ್ಫೂರ್ತಿ, ಪ್ರೇರಣೆ ನೀಡಿದರು. ಬಳ್ಳಾರಿಯ ಲಲಿತಮ್ಮನವರ ಕಂಪೆನಿಯಲ್ಲಿ ಬಾಲ ಕಲಾವಿದೆಯಾಗಿ ಮಕ್ಮಲ್ ಟೋಪಿ, ಟಿಪ್ಪುಸುಲ್ತಾನ್, ಬ್ರೋಕರ್ ಭೀಷ್ಮಾಚಾರಿ, ಲವಕುಶ, ಅಣ್ಣತಮ್ಮ, ಶಿದ್ಧಲಿಂಗೇಶ್ವರ ನಾಟಕಗಳಲ್ಲಿ ಪಾತ್ರವಹಿಸಿದರು.

ಮುಂದೆ ಮಾಂಡ್ರೆ ಕವಿಯವರ ಕಂಪನಿಯಲ್ಲಿ ಸ್ವಲ್ಪ ಕಾಲ ಇದ್ದು, ನಂತರ ಶ್ರೀ ಏಣಗಿ ಬಾಳಪ್ಪನವರ ಕಂಪನಿಯಲ್ಲಿ ಮಾವ ಬಂದನಪ್ಪಾ ಮಾವ, ವೀರರಾಣಿ ಕಿತ್ತೂರು ಚೆನ್ನಮ್ಮ ಓಬಳೇಶ್ವರರವರ 'ಓಂಕಾರೇಶ್ವರ ನಾಟಕ ಮಂಡಳಿ'ಯಲ್ಲಿ ಖಾದಿಸೀರೆ, ಶರಣಬಸವೇಶ್ವರ ನಾಟಕಗಳಲ್ಲಿ ನಟಿಸಿದರು.

ನಂತರ ತಮ್ಮ ಸ್ವಗ್ರಾಮಕ್ಕೆ ಮರಳಿ ಅಲ್ಲಿನ ವೃತ್ತಿ, ಹವ್ಯಾಸಿ ತಂಡಗಳೊಂದಿಗೆ ಪಾಲ್ಗೊಳ್ಳತೊಡಗಿದರು. ರಕ್ತರಾತ್ರಿ, ಕುರುಕ್ಷೇತ್ರ, ಭಕ್ತ ಸುಧನ್ವ, ವೀರಾಭಿಮನ್ಯು, ರತ್ನಮಾಂಗಲ್ಯ, ಅಣ್ಣತಂಗಿ, ಬಸ್‌ಕಂಡಕ್ಟರ್, ಆದರ್ಶ ಪ್ರೇಮ, ತಾಳಿಯ ತಕರಾರು, ಹೇಮರೆಡ್ಡಿಮಲ್ಲಮ್ಮ, ಆಶಾಲತಾ, ದಾರಿ ದೀಪ, ಟಿಪ್ಪುಸುಲ್ತಾನ್ ವರಲಕ್ಷ್ಮಿಗೆ ಉತ್ತಮ ಕಲಾವಿದೆ ಎಂಬ ಹೆಗ್ಗಳಿಕೆ ನೀಡಿದ ನಾಟಕಗಳು.

ಈಗಲೂ ಆಂಧ್ರ - ಕರ್ನಾಟಕಗಳಲ್ಲಿ ಹಲವಾರು ಸಂಘಗಳ ನಾಟಕಗಳಲ್ಲಿ ಕಲಾ ಸೇವೆ ಮಾಡುತ್ತಲಿದ್ದಾರೆ. ಈ ಕಲಾವಿದೆಯ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ.



## ವಾಸು ಬೇಗೂರು

ಜನನ : 1-1-1957

ವಿಳಾಸ :
ಬೇಗೂರು
ಬೇಗೂರು ಅಂಚೆ
ಬೆಂಗಳೂರು - 68

ವಾಸು ಬೇಗೂರು ಕನ್ನಡ ರಂಗಭೂಮಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. 1979 ರಲ್ಲಿ 'ತ್ಯಾಗಿ' ನಾಟಕದ ರಾಮು ಪಾತ್ರದ ಮೂಲಕ ರಂಗಭೂಮಿಗೆ ಕಾಲಿರಿಸಿ, ಮುಂದೆ ನಿರಂತರವಾಗಿ ಹಲವಾರು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಹವ್ಯಾಸಿ ನಟನಾಗಿ ಪಾತ್ರ ನಿರ್ವಹಿಸಿದ್ದಾರೆ.

1988 ರಲ್ಲಿ 'ನವಚೇತನ ಕನ್ನಡ ಕಲಾ ಸಂಘ'ದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿ ನಿರಂತರ ಕಲಾ ಸೇವೆಗೈಯುತ್ತಾ ಬಂದಿದ್ದಾರೆ. 1996 ರಿಂದ ಪ್ರತಿ ವರ್ಷ ನಾನಾ ಹಿರಿಯ ಕಲಾವಿದರ ಹೆಸರಿನಲ್ಲಿ ರಾಜ್ಯಮಟ್ಟದ ಪೌರಾಣಿಕ ನಾಟಕ ಸ್ಪರ್ಧೆಗಳನ್ನು ಏರ್ಪಡಿಸುತ್ತಾ ಬಂದಿರುವಲ್ಲದೆ, ಅಶಕ್ತ ಕಲಾವಿದರಿಗೆ ಆರ್ಥಿಕ ನೆರವು ನೀಡಿ, ಹಿರಿಯ ನಟರನ್ನು, ಗಾಯಕರನ್ನು, ಸಾಹಿತಿಗಳನ್ನು, ನೇಪಥ್ಯ ಕರ್ಮಿಗಳನ್ನು ಗುರುತಿಸಿ, ಸನ್ಮಾನಿಸಿ, ಬಡ ಕಲಾವಿದರಿಗೆ ಸಹಾಯ ಮಾಡುತ್ತಾ ಸಾಗಿದ್ದಾರೆ.

ಉತ್ತಮ ಧ್ಯೇಯೋದ್ದೇಶಗಳನ್ನು ಹೊಂದಿರುವ ಅಪರೂಪದ ಸಂಘಟಕ ವಾಸು ಬೇಗೂರು.




## ಚಿಂದೋಡಿ ವಿಜಯಕುಮಾರ್

ಜನನ : 7-10-1970

1979 ರಲ್ಲಿ ಬೆಳ್ಳಿ ಬಂಗಾರ ನಾಟಕದ ಭದ್ರನ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ಬಾಲನಟನಾಗಿ ರಂಗಪ್ರವೇಶ ಪಡೆದವರು. ಚಿಂದೋಡಿ ವಿಜಯಕುಮಾರ್. 'ಭದ್ರನ' ಪಾತ್ರದಲ್ಲಿ ಅಭಿನಯಿಸಿದಾಗ ಚಿತ್ರರಂಗ ಭೀಷ್ಮ ಪುಟ್ಟಣ್ಣ ಕಣಗಾಲ್ ಇವರಿಗೆ 50 ರೂಪಾಯಿ ಬಹುಮಾನ ಕೊಟ್ಟರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ವಿಜಯಕುಮಾರ್. ಆ ಘಟನೆ, ಪ್ರೇರಣೆ ರಂಗಭೂಮಿಯನ್ನು ವೃತ್ತಿಯಾಗಿ ಸ್ವೀಕರಿಸಲು ಕಾರಣವಾಯಿತು.

ಕರ್ನಾಟಕದ ಹೆಸರಾಂತ ವೃತ್ತಿರಂಗ ಕಂಪೆನಿ ಕೆ.ಬಿ.ಆರ್. ಡ್ರಾಮಾ ಕಂಪೆನಿಯ ನಾಟಕಗಳಲ್ಲಿ ಹಾಸ್ಯ ಪಾತ್ರಕ್ಕೆ ಮೀಸಲಾದ ನಟ ಇವರು. ವಿಶ್ವದಾಖಲೆಯನ್ನು ಸ್ಥಾಪಿಸಿರುವ 'ಪೊಲೀಸನ ಮಗಳು' ನಾಟಕದ ಕಾಮಣ್ಣನ ಪಾತ್ರ ಇವರಿಗೆ ಹೆಸರನ್ನು ತಂದಿತ್ತಿತು. ಚಿಂದೋಡಿ ಲೀಲಾರ ನೇತೃತ್ವದಲ್ಲಿ ಕಾಸರಗೋಡಿನಿಂದ ಕಾಶಿಯವರೆಗೂ ರಂಗಯಾತ್ರೆ ಮಾಡಿದ ಹೆಗ್ಗಳಿಕೆ ಇವರದು.

ಶ್ರೀ ಕೃಷ್ಣದೇವರಾಯ, ರೊಚ್ಚಿಗೆದ್ದ ಹೆಂಡತಿ, ಕರಿಬಸವೇಶ್ವರ ಮಹಾತ್ಮೆ, ಗೋವಾದಲ್ಲಿ ಗೌಡ್ರು ಇವರ ಕೆಲವು ಹೆಸರಾಂತ ನಾಟಕಗಳು.



## ವಿಶ್ವನಾಥ್ ಕೆ. ಗಂಗೂರ ಆಚಾರ್

ಜನನ : 21-11-1956

ವಿಳಾಸ:
ನಂ. 22/3, 7ನೇ ಮುಖ್ಯರಸ್ತೆ
4ನೇ ಅಡ್ಡರಸ್ತೆ, ಸಿದ್ಧರಾಮದಿಣ್ಣೆ
ರಾಜಾಜಿನಗರ
ಬೆಂಗಳೂರು - 560 010

ತಮ್ಮ ಬದುಕನ್ನು ಕಲಾಸೇವೆಗಾಗಿಯೇ ಮುಡಿಪಾಗಿಟ್ಟ ವಿಶಿಷ್ಟ ಕಲಾವಿದರಲ್ಲಿ ವಿಶ್ವನಾಥ ಕೆ. ಗಂಗೂರ ಆಚಾರ್ ಒಬ್ಬರು. ಇಪ್ಪತ್ತೇಳು ವರ್ಷಗಳಿಗೂ ಹೆಚ್ಚಿನ ಕಾಲ ವೃತ್ತಿ ರಂಗಭೂಮಿಯಲ್ಲಿ ನಟನಾಗಿ ದುಡಿದ ಅನುಭವ ಇವರದು.

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಇಂಗಳಗೇರಿ ಗ್ರಾಮದ ಶ್ರೀ ಕಾಳಪ್ಪ ಈ. ಗಂಗೂರ ಮತ್ತು ಶ್ರೀಮತಿ ಭೀಮಾಬಾಯಿ ವಿಶ್ವನಾಥರ ತಂದೆ ತಾಯಿಯರು. ಶಾಲೆಗೆ ಹೋಗಿ ಕಲಿತದ್ದು 3ನೇ ತರಗತಿವರೆಗಾದರೂ, ರಂಗಭೂಮಿ ನೀಡಿದ ಶಿಕ್ಷಣ ಬದುಕಿನುದ್ದಕ್ಕೂ ಕ್ರಿಯಾಶೀಲರಾಗಿರುವಂತೆ ಮಾಡಿದೆ.

1973 ರಲ್ಲಿ 'ಕರ್ನಾಟಕ ಷೇಕ್ಸ್‌ಪಿಯರ್' ಎಂದು ಖ್ಯಾತರಾದ ದಿ|| ಕಂದಗಲ್ಲ ಹನುಮಂತರಾಯರ 'ರಕ್ತರಾತ್ರಿ' ನಾಟಕದಲ್ಲಿ ಭೀಮಸೇನನ ಪಾತ್ರದಿಂದ ಬಣ್ಣದ ಬದುಕಿಗೆ ಹೆಜ್ಜೆ ಇಟ್ಟರು. ಅದೇ ನಾಟಕದಲ್ಲಿ ಪ್ರಖ್ಯಾತ ರಂಗಭೂಮಿ ಕಲಾವಿದೆ ಹಾಗೂ ಗಾನಕೋಗಿಲೆ ಎಂದು ಹೆಸರಾದ ಶ್ರೀಮತಿ ಸುಭದ್ರಮ್ಮ ಮನ್ಸೂರ್ ದ್ರೌಪದಿಯ ಪಾತ್ರದಲ್ಲಿ ಕಾಣಿಸಿಕೊಂಡರು.

ಅಲ್ಲಿಂದ ಶ್ರೀ ಅಮರೇಶ್ವರ ನಾಟಕ ಸಂಘ ಪ್ರವೇಶಿಸಿ ಕಂಪನಿಯ ಪ್ರಖ್ಯಾತ ನಾಟಕಗಳಾದ ಕಿತ್ತೂರು ಚೆನ್ನಮ್ಮ, ಸಿಂಧೂರ ಲಕ್ಷ್ಮಣ ಸೇರಿದಂತೆ ಹಲವು ನಾಟಕಗಳಲ್ಲಿ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸಿದರು.

1982 ರಲ್ಲಿ ಶ್ರೀ ಗುರು ಅಖಂಡೇಶ್ವರ ನಾಟಕ ಸಂಘ ಸ್ಥಾಪಿಸಿ, ಕರ್ನಾಟಕದಾದ್ಯಂತ ನಾಟಕ ಪ್ರದರ್ಶನ ನೀಡಿ, ಕೊನೆಗೆ ಬೆಂಗಳೂರಿಗೆ ಬಂದರು. ದುರಾದೃಷ್ಟವೋ ಎಂಬಂತೆ ಇವರ ಸಂಸ್ಥೆ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ತನ್ನೆಲ್ಲಾ ಸಾಮಗ್ರಿಗಳನ್ನೆಲ್ಲಾ ಕಳೆದುಕೊಂಡಿತು. ಆದರೂ ಎದೆಗುಂದದ ವಿಶ್ವನಾಥ್ 'ಮಿನುಗುತಾರೆ' ಮಿತ್ರ ಮಂಡಳಿಯ ಶ್ರೀ ಮುನಿರಂಗಪ್ಪನವರ ಆಸರೆಯಲ್ಲಿ ನಟನಾ ಬದುಕನ್ನು ಮುಂದುವರೆಸಿದರು.

ನಾಟಕದ ನಟನೆಯ ಜತೆ ಜತೆಗೆ ಸಿನಿಮಾ, ದೂರದರ್ಶನ ಧಾರಾವಾಹಿಗಳಲ್ಲೂ ಪಾತ್ರವಹಿಸಿದ್ದಾರೆ.



## ವೀರಯ್ಯ ಪ್ರ. ಮಠಪತಿ

ಜನನ : 1-6-1966

*ವಿಳಾಸ :*
ಅಧ್ಯಕ್ಷರು
ಶ್ರೀ ಶಾರದಾ ಯುವಕ ಮಂಡಳಿ
ಮಾಗಡಿ
ಶಿರಹಟ್ಟಿ ತಾಲ್ಲೂಕು
ಗದಗ ಜಿಲ್ಲೆ

ಬಿ.ಎ., ಬಿ.ಎಡ್. ಪದವೀಧರರಾದ ವೀರಯ್ಯ ಪ್ರ. ಮಠಪತಿ 1987ರಲ್ಲಿ ಗದಗದಲ್ಲಿ 'ಶ್ರೀ ಶಾರದಾ ಯುವಕ ಮಂಡಳಿ' ಯನ್ನು ಸ್ಥಾಪಿಸಿ, ಸಾಮಾಜಿಕ ನಾಟಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಶ್ರೀ ಫಕ್ಕೀರೇಶರ ಬಳ್ಳಿ ಕಲೆಯನ್ನು ಕಲಿತ ವೀರಯ್ಯ, ಹಲವಾರು ಕಲಾಸಕ್ತ ಗೆಳೆಯರನ್ನು ಒಗ್ಗೂಡಿಸಿ, ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ.

ಶ್ರೀ ಶಾರದಾ ಯುವಕ ಮಂಡಳಿಯ ವತಿಯಿಂದ ಗುಣವಂತ ನನ್ನ ಗಂಡ, ಬಾಳು ಬೆಳಗಿದ ಸತಿ, ಶಾಂತಿಗಾಗಿ ಕ್ರಾಂತಿ, ಬಡವ ಬದುಕಲೇ ಬೇಕು, ಮಾಂಗಲ್ಯ ಸಾಕ್ಷಿ, ಮಿತ್ರದ್ರೋಹಿ, ಹುಚ್ಚ ಹಚ್ಚಿದ ಕಿಚ್ಚು, ಸಿಡಿದೆದ್ದ ಶಿವಶಕ್ತಿ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ, ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಪ್ರಸ್ತುತ ಶ್ರೀ ಶಾರದಾ ಯುವಕ ಮಂಡಳಿಯ ಅಧ್ಯಕ್ಷರಾಗಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ ವೀರಯ್ಯನವರು.



## ಬಿ. ಸಿ. ವೆಂಕಟೇಶಮೂರ್ತಿ

ಜನನ : 10-3-1956

*ವಿಳಾಸ :*
ಉಪಾಧ್ಯಕ್ಷರು
ಬೆಮೆಲ್ ಲಲಿತ ಕಲಾ ಸಂಘ
ಬೆಂಗಳೂರು.

'ಬೆಮೆಲ್' ಉದ್ಯೋಗಿ ಬಿ.ಸಿ. ವೆಂಕಟೇಶಮೂರ್ತಿಯವರಿಗೆ ನಾಟಕಗಳಲ್ಲಿ ನಟಿಸುವುದು ಒಂದು ಹವ್ಯಾಸ. ಚಿಕ್ಕಂದಿನಿಂದಲೂ ಕಲಾ ಕ್ಷೇತ್ರದ ಒಡನಾಡಿಯಾಗಿದ್ದರೂ, ರಂಗದ ಮೇಲೆ ಕಾಣಿಸಿಕೊಂಡಿದ್ದು ಕಾರ್ಖಾನೆಗೆ ಸೇರಿದ ನಂತರವೆ. 1982 ರಲ್ಲಿ ಪ್ರಯೋಗಗೊಂಡ 'ಕರ್ನಾಟಕ ರಮಾರಮಣ' ನಾಟಕದಿಂದ ಔಪಚಾರಿಕವಾಗಿ ರಂಗಪ್ರವೇಶ ಮಾಡಿದರು. ನಂತರ ಸತತವಾಗಿ ನಾಟಕಗಳಲ್ಲಿ ಅಭಿನಯಿಸುವುದು ಮುಂದುವರೆಯಿತು.

'ಕುರುಕ್ಷೇತ್ರ' 'ಶ್ರೀ ಕೃಷ್ಣ ಸಂಧಾನ', 'ವೀರಾಭಿಮನ್ಯು', 'ಭಾರತಸಂಗ್ರಾಮ', 'ಚಕ್ರವ್ಯೂಹ', 'ಅಮೋಘವರ್ಷ' 'ನೃಪತುಂಗ', 'ವಿಜಯನಗರ', 'ರತ್ನಸಿಂಹಾಸನ', 'ಕಡುಗಲಿ ಕುಮಾರರಾಮ', 'ಸಂಗೊಳಿ ರಾಯಣ್ಣ', 'ಕಲಿಕಂಠೀರವ', 'ಕುರಿದೊಡ್ಡಿ ಕುರುಕ್ಷೇತ್ರ', 'ಮಾಚ'. ಈ ಎಲ್ಲಾ ನಾಟಕಗಳ ಪಾತ್ರಾಭಿನಯಕ್ಕೆ ಪ್ರಶಂಸೆ, ಪ್ರಶಸ್ತಿಗಳು ದೊರೆತಿವೆ.

ಕಿರುತೆರೆಯ ಧಾರಾವಾಹಿಗಳಲ್ಲಿ, ಕೆಲವು ಚಲನಚಿತ್ರಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ. ವೆಂಕಟೇಶಮೂರ್ತಿ, ಪ್ರಸ್ತುತ ಕಾರ್ಖಾನೆಯ 'ಲಲಿತ ಕಲಾ ಸಂಘ'ದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ವೆಂಕಟೇಶಯ್ಯ

ಜನನ : 1957

ವಿಳಾಸ :
ನಂ.1100, 26ನೇ ಮುಖ್ಯರಸ್ತೆ,
35ನೇ 'ಡಿ', ಅಡ್ಡರಸ್ತೆ, 4ನೇ 'ಟಿ' ಬ್ಲಾಕ್
ಜಯನಗರ, ಬೆಂಗಳೂರು - 41

ತುಮಕೂರು ಜಿಲ್ಲೆಗೆ ಸೇರಿದ ಚಿಂದಯ್ಯನಪಾಳ್ಯ ಎಂಬ ಪುಟ್ಟ ಗ್ರಾಮದಲ್ಲಿ, ನರಸಿಂಹೇಗೌಡ ಹಾಗೂ ವೆಂಕಟಮ್ಮನವರ ಮಗನಾಗಿ 1957ರಲ್ಲಿ ವೆಂಕಟೇಶಯ್ಯ ಜನಿಸಿದರು. ಹುಟ್ಟೂರಿನಲ್ಲೇ ಶಾಲಾ ವಿದ್ಯಾಭ್ಯಾಸವನ್ನು ಪೂರೈಸಿ, ಗುಬ್ಬಿ ಟೌನ್‌ನಲ್ಲಿ ಪದವಿ ಪೂರ್ವ ವಿದ್ಯಾಭ್ಯಾಸ ಪಡೆಯುವಾಗ ರಂಗಭೂಮಿಯ ಸೆಳೆತಕ್ಕೆ ಒಳಗಾದರು. ಆ ದಿನಗಳಲ್ಲೆ ಸಣ್ಣಪುಟ್ಟ ಪಾತ್ರಗಳನ್ನು ಮಾಡಿಕೊಂಡು ಅನಂತರ ಬೆಂಗಳೂರಿಗೆ ಬಂದು ಸ್ನಾತಕೋತ್ತರ ಪದವಿಯನ್ನು ಪಡೆದರು.

ರಂಗಭೂಮಿ ಚಟುವಟಿಕೆಗಳ ಕೇಂದ್ರ ಸ್ಥಾನವಾದ ಬೆಂಗಳೂರು ನೂರಾರು ಹವ್ಯಾಸಿ ಕಲಾವಿದರನ್ನು ಹುಟ್ಟು ಹಾಕಿದೆ. ವೆಂಕಟೇಶಯ್ಯನವರನ್ನೂ ಕನ್ನಡ ಹವ್ಯಾಸಿ ರಂಗಭೂಮಿ ತನ್ನ ತೆಕ್ಕೆಗೆ ಎಳೆದುಕೊಂಡಿತು. ಸದಾಕಾಲ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡು 'ಶ್ರೀ ಹರಿಹರ ಸುತಾ ಕಲಾ ಮಂಡಲಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ರಂಗಭೂಮಿಯ ಸೇವೆ ಮಾಡುತ್ತಾ ಬಂದಿದ್ದಾರೆ ವೆಂಕಟೇಶಯ್ಯ.

ಪೌರಾಣಿಕ ನಾಟಕಗಳಲ್ಲೇ ಹೆಚ್ಚು ಒಲವುಳ್ಳ ಇವರು ಶ್ರೀಕೃಷ್ಣ, ದುರ್ಯೋಧನ, ಅರ್ಜುನ, ಬಬ್ರುವಾಹನ, ಭರತ, ರಾವಣ, ಕರ್ಣ ಮುಂತಾದ ಪಾತ್ರಗಳಲ್ಲಿ ಉತ್ತಮ ನಟನೆ ನೀಡಿದ್ದಾರೆ.



**ವೇಣುಗೋಪಾಲ್**


ವಿಳಾಸ :
ನಂ. 112, ಹೆಣ್ಣೂರು ಗ್ರಾಮ,
ಕಲ್ಯಾಣನಗರ ಅಂಚೆ,
ಬೆಂಗಳೂರು - 560043


ಹೈಸ್ಕೂಲಿನ ದಿನಗಳಲ್ಲಿ ರಂಗಭೂಮಿಯ ಗೀಳು ಹತ್ತಿಸಿಕೊಂಡ ವೇಣುಗೋಪಾಲ್ ಸಕ್ರಿಯವಾಗಿ ಪಾದಾರ್ಪಣ ಮಾಡಿದ್ದು ಕಾಲೇಜು ರಂಗತರಬೇತಿ ಶಿಬಿರದ ಮೂಲಕ. ಬೆಂಗಳೂರಿನ ಹೊರವಲಯ ಹೆಣ್ಣೂರು ಗ್ರಾಮದಲ್ಲಿ ಇವರು ಇಂದು ಕಾಲೇಜು ರಂಗಭೂಮಿಯ ಸಂಘಟಕರಲ್ಲಿ ಅತ್ಯಂತ ಪ್ರಮುಖರು. ಜ್ಞಾನ ಭಾರತಿ ಅಂತರ ಕಾಲೇಜು ರಂಗ ಸ್ಪರ್ಧೆಗಳನ್ನು ೮ ವರ್ಷಗಳಿಂದ ಸಕ್ರಿಯವಾಗಿ ಸಂಘಟಿಸುತ್ತಾ ಬರುತ್ತಿದ್ದಾರೆ. ಹತ್ತು ಹಲವು ವಿದ್ಯಾರ್ಥಿಗಳಿಗೆ ರಂಗಭೂಮಿಯ ಮಾರ್ಗದರ್ಶನ ಜೊತೆಗೆ ನಟರಾಗಿ ಗಮನ ಸೆಳೆದಿದ್ದಾರೆ. ಇವರು ಅಭಿನಯಿಸಿದ ಮಂಟೆಸ್ವಾಮಿ ಕಥಾ ಪ್ರಸಂಗದ ರಾಚಪ್ಪ, ಸಿದ್ಧರಾಮ ನಾಟಕ ಸಿದ್ಧರಾಮ, ಸಂತೆಯಲ್ಲಿ ನಿಂತ ಕಬೀರ ನಾಟಕಗಳಲ್ಲಿ ಪ್ರಮುಖ ನಟರಾಗಿ ಜನಮೆಚ್ಚುಗೆ ಗಳಿಸಿದ್ದಾರೆ.

ಸುರೇಶ್ ಆನಗಳ್ಳಿ, ವಾಲ್ಟರ್ ಡಿ ಸೋಜಾ, ನಾಗರಾಜಮೂರ್ತಿ, ಬಿ. ಸುರೇಶ್, ಸಿ.ಜಿ.ಕೆ. ಮುಂತಾದವರ ನಿರ್ದೇಶನದಲ್ಲಿ ನಟರಾಗಿ ಸಹ ನಿರ್ದೇಶಕರಾಗಿ ಅಭಿನಯಿಸಿದ್ದಾರೆ. ಕಳ್ಳ ಬುಂಡೆ ನಮ್ಮವ್ವ ಬೀದಿನಾಟಕದ ಪ್ರಮುಖ ಪಾತ್ರಧಾರಿಯಾಗಿ ನಾಲ್ಕು ನೂರಕ್ಕೂ ಹೆಚ್ಚು ಬೀದಿನಾಟಕ ಪ್ರದರ್ಶನಗಳನ್ನು ನೀಡಿದ್ದಾರೆ. ಗಾದೆ ಗುರಕ್ಕನ ಗರ್ವ ಭಂಗ, ಕಳ್ಳು ಬುಂಡೆ ನಮ್ಮವ್ವ, ವಿದ್ಯುತ್ ಚೋರ, ಕ್ಯಾನ್ಸರ್ ಮುಂತಾದ ಬೀದಿನಾಟಕಗಳಲ್ಲಿ ಗಮನಸೆಳೆಯುವ ಅಭಿನಯ ನೀಡಿದ್ದಾರೆ.

ಕಾಲೇಜು ವಿದ್ಯಾರ್ಥಿ ಕಾರ್ಯಾಗಾರಗಳನ್ನು ಯಶಸ್ವಿಯಾಗಿ ಸಂಘಟಿಸಿರುವ ಇವರು ರಾಜ್ಯಾದ್ಯಂತ ನಾಟಕ ಜಾಥಗಳಲ್ಲಿ ಭಾಗವಹಿಸಿದ್ದಾರೆ.




**ವೇಣುಗೋಪಾಲ್ .ವೈ .ಎನ್.**

ಜನನ : 6-8-1971

*ವಿಳಾಸ :*
ನಂ.9, ಶ್ರೀಗಂಧದ ಕಾವಲು
ದೊಡ್ಡಆಲದಮರ, ಹೆಗ್ಗನಹಳ್ಳಿ ಕ್ರಾಸ್,
ಪೀಣ್ಯ ಎರಡನೆ ಹಂತ, ಸುಂಕದಕಟ್ಟೆ
ಬೆಂಗಳೂರು - 560091

ರಂಗ ನೇಪಥ್ಯದಲ್ಲಿ ಪ್ರಯೋಗರಂಗದ ಕಲಾವಿದರಾಗಿ ಸುಮಾರು ಹತ್ತು ವರ್ಷಕ್ಕು ಹೆಚ್ಚು ಕೆಲಸ ಮಾಡಿರುವ ವೇಣುಗೋಪಾಲ್ ನಟರಾಗಿಯು ಹೆಸರು ಗಳಿಸಿರುವರು. ಕಾಲೇಜು ದಿನಗಳಲ್ಲಿ ನಾಟಕದ ಆಸಕ್ತಿಯನ್ನು ಬೆಳೆಸಿಕೊಂಡ ಇವರು ಸರ್ಕಾರಿ ವಿಜ್ಞಾನ ಕಾಲೇಜಿನ ರಂಗಚಟುವಟಿಕೆಗಳಿಗೆ ಕಾರಣರಾದವರು. ವೃತ್ತಿಯಿಂದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೂ ಅವರು ಒಲವು ರಂಗಭೂಮಿಯತ್ತಲೆ. ಈಗಾಗಲೇ 30ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುವ ಇವರು ನೂರಾರು ನಾಟಕ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಇವರು ಅಭಿನಯಿಸಿದ ನಾಟಕಗಳು ಮೌನಿ, ಮಂಟೆಸ್ವಾಮಿ ಕಥಾ ಪ್ರಸಂಗ, ರಾಜಬೇಟೆ, ಬ್ರಹ್ಮಚಾರಿ ಶರಣಾದ, ಮಲ್ಲಮ್ಮನ ಮನೆ ಹೋಟ್ಲು, ಮಕರಚಂದ್ರ, ಹುಚ್ಚಮುನ್ಸಿಫ ಹೀಗೆ ಸಿ.ಜಿ.ಕೆ. ಸುರೇಶ್ ಅನಗಳ್ಳಿ, ವಾಲ್ಟರ್ ಡಿಸೋಜ, ಗೋಪಾಲಕೃಷ್ಣ ನಾಯರಿ, ಶ್ರೀನಿವಾಸ ಪ್ರಭು, ನಾಗರಾಜಮೂರ್ತಿ ಮುಂತಾದ ನಿರ್ದೇಶನದಲ್ಲಿ ಅಭಿನಯಿಸಿದ್ದಾರೆ. ಬೀದಿನಾಟಕಗಳಲ್ಲೂ ಕಲಾವಿದರಾಗಿ ಜನಮನ್ನಣೆ ಪಡೆದಿದ್ದಾರೆ. ಕಾಲೇಜು ರಂಗಭೂಮಿ ಹಲವು ರಂಗಶಿಬಿರಗಳಲ್ಲಿ ನೇಪಥ್ಯಗಾರರಾಗಿ ಕಾರ್ಯನಿರ್ವಹಿಸಿದ್ದಾರೆ.



**ಶಂಕರ್ .ಎಸ್. ತುಮ್ಮಣ್ಣ**

ಜನನ : 20-5-1967

*ವಿಳಾಸ :*
ಬಸ್ತಿ ಓಣಿ,
ಹಾವೇರಿ - 581110

ಶಂಕರ ತುಮಣ್ಣನವರು ಕಳೆದ 18 ವರ್ಷಗಳಿಂದ ನಿರಂತರವಾಗಿ ಸಾಹಿತ್ಯ ಮಂಟಪ, ಸ್ನೇಹ ಕಲಾವೃಂದ, ರಂಗ ತರಂಗ, ವೇದಿಕೆ ತಂಡಗಳ ನಾಟಕಗಳಲ್ಲಿ ಅಭಿನಯಿಸುತ್ತಾ ಬಂದಿದ್ದಾರೆ. ಹಲವಾರು ರಾಜ್ಯಮಟ್ಟದ ಏಕಪಾತ್ರಾಭಿನಯ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಗಿಟ್ಟಿಸಿಕೊಂಡಿದ್ದಾರೆ.

ರಾಜ್ಯಮಟ್ಟದ ಪುಟ್ಟಣ ಕಣಗಾಲ್ ಪಾರಿತೋಷಕ ಪಡೆದ ಧರ್ಮ ಯುದ್ಧ, ಹುಲುಸು, ಕುಂಟಾ ಕುಂಟಾ ಕುರುವತ್ತಿ, ಟಿಂಗರ ಬುಡ್ಡಣ್ಣ, ಹೆಣದ ಬಟ್ಟೆ, ಬೋರವೆಲ್, ದೇವರ ಹೆಣ, ಭ್ರಷ್ಟಾಚಾರ, ಕುರಿ ತೋಳಗಳ ನಡುವೆ, ಪಗಡೆಯಾಟ, ಸರಹದ್ದು, ಜೀತ, ಹೃದಯ ದೇಗುಲ, ಗುಂಡನ ಮದುವೆ, ಕೋತಿ ಕಥೆ, ಕಪ್ಪು ಕನ್ನಡಿಯ ಹಿಂದೆ, ಆಯ, ಸಂಗ್ಯಾಬಾಳ್ಯ ಇವರ ಅಭಿನಯದ ಪ್ರಮುಖ ನಾಟಕಗಳು. ಹಲವಾರು ದೊಡ್ಡಾಟಗಳಲ್ಲೂ ಪಾಲ್ಗೊಂಡಿದ್ದಾರೆ.

ಭೂಕಂಪ, ಆತ್ಮಹತ್ಯೆ, ಕೋರ್ಟ್ ಆರ್ಡರ್, ಕತ್ತಲೂರಿನ ಬೆತ್ತಲ ಕಥೆ ತುಮ್ಮಣ್ಣನವರು ರಚಿಸಿರುವ ನಾಟಕಗಳು. ಬೇಸ್ತು ಬಿದ್ದವರು, ಮುಖವಾಡಗಳು ಅಭಿನಯಿಸಿದ ರೇಡಿಯೋ ನಾಟಕಗಳು.

ಬಹುಮುಖ ಪ್ರತಿಭೆಯ ತುಮ್ಮಣ್ಣನವರಿಗೆ ಬೆಂಗಳೂರಿನ ಕಲಾ ನವರಂಗ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಕಲಾರಂಗದ ಎಲ್ಲ ಮಾಧ್ಯಮಗಳಲ್ಲೂ ಕೆಲಸ ಮಾಡಿರುವ ಇವರಿಗೆ ಬೀದಿ ನಾಟಕಗಳಲ್ಲೂ ಆಸಕ್ತಿ ಇದೆ. ಜ್ಞಾನ ವಿಜ್ಞಾನ ಜಾಥಾಗಳಲ್ಲಿ ಪಾಲ್ಗೊಳ್ಳುವಿಕೆ, ಸಾಕ್ಷರತಾ ಆಂದೋಲನದಲ್ಲಿ ಭಾಗವಹಿಸುವಿಕೆ ಹಾಗೂ ಇನ್ನಿತರ ಚಟುವಟಿಕೆಗಳಲ್ಲೂ ತುಮ್ಮಣ್ಣ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ.



## ಶಂಕರಪ್ಪ ಬಸಪ್ಪ ಬ್ಯಾಳಿ

ಜನನ : 1944


ವಿಳಾಸ :
ರೈಲ್ವೆ ಪೋಲೀಸ್ ಚಾಳ್‌ಹತ್ತಿರ
ಗದಗ - 582101

'ಬಿ. ಶಿವಶಂಕರ' ಕಾವ್ಯ ನಾಮದ ಶಂಕರಪ್ಪ ಬಸಪ್ಪ ಬ್ಯಾಳಿ ಹುಟ್ಟಿದ್ದು ರೋಣ ತಾಲ್ಲೂಕಿನ ಹುಲ್ಲೂರ ಗ್ರಾಮದಲ್ಲಿ. ವೃತ್ತಿಯಿಂದ ಗದಗದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕವನ ರಚನೆ, ನಾಟಕ ರಚನೆ ಇವರ ಹವ್ಯಾಸಗಳಲ್ಲಿ ಒಂದು. ಹಲವಾರು ಕವನ ಸಂಕಲನಗಳನ್ನು ಮುಖ್ಯವಾಗಿ ವೃತ್ತಿರಂಗಭೂಮಿಯಲ್ಲಿಯೇ ಹೊಸತನಕ್ಕೆ ಕಾರಣೀಭೂತವಾದ ಕೃತಿ ರಚನೆಯೊಂದಿಗೆ, ಐತಿಹಾಸಿಕ, ಪೌರಾಣಿಕ, ಆಧ್ಯಾತ್ಮಿಕ, ಸಾಮಾಜಿಕ, ವಿಡಂಬನಾತ್ಮಕ ನಾಟಕಗಳ ರಚನೆಯಿಂದ ಗಮನ ಸೆಳೆದಿದ್ದಾರೆ.

ನಾಗಲಿಂಗಲೀಲೆ, ಸಿದ್ಧಾರೂಢ ಮಹಾತ್ಮೆ, ಅಮರೇಶ್ವರ ಲಿಂಗ ಲೀಲೆ, ಉಕ್ಕಡಗಾತ್ರಿ ಕರಿಬಸವೇಶ್ವರ ಮಹಾತ್ಮೆ, ಮಲೆ ಮಾದೇಶ್ವರ ಮಹಾತ್ಮೆ, ನರಗುಂದ ಚನ್ನಬಸವ ಶಿವಯೋಗಿ, ಇಟಗಿ ಭೀಮಾಂಬಿಕಾ ಮಹಿಮೆ ಇವರು ರಚಿಸಿದ ಆಧ್ಯಾತ್ಮಿಕ ನಾಟಕಗಳು. ಅಲ್ಲದೆ ಲಂಚಯ್ಯನ ಮಗ ಕೆಂಚಯ್ಯ, ನಾ ನಿನ್ನ ಗಂಡನಲ್ಲ, ಎಲ್ಲಿದೆ ಹೃದಯ?, ತಾಳಿ ಯಾರು ಕಟ್ಟಬೇಕು, ಕಲ್ಲೆದೆ ಕರಗಿತು, ಅನುರಾಗ ಅರಳಿತು, ಸುಖ ಕಾಣದ ಸತಿ, ಗಂಡುಗಲಿ ಕುಮಾರರಾಮ, ಪೇದೆ ಪೆದ್ದಣ್ಣ ಇತ್ಯಾದಿ ನಾಟಕಗಳನ್ನು ರಚಿಸಿದ್ದಾರೆ. ನಟನೆಯಲ್ಲೂ ಹವ್ಯಾಸಿ ಅನುಭವವಿದೆ. ಹಲವಾರು ಧ್ವನಿಸುರಳಿಗಳಿಗೆ, ಚಲನಚಿತ್ರಕ್ಕೂ ಸಾಹಿತಿಯಾಗಿ, ನಾಟಕಕಾರರಾಗಿ ಕೆಲಸ ಮಾಡಿದ್ದಾರೆ.

ಈ ಪ್ರತಿಭಾವಂತ ಕವಿ, ನಾಟಕಕಾರರಿಗೆ ಹಲವಾರು ಸಂಘ, ಸಂಸ್ಥೆಗಳ ಗೌರವ, ಸನ್ಮಾನ ಪ್ರಾಪ್ತವಾಗಿದೆ. 'ಶರಣ ಸಾಹಿತ್ಯ ಭಂಡಾರ' ಎಂಬ ಬಿರುದಿಗೂ ಪಾತ್ರರಾಗಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯು ನಾಟಕಕಾರ ಶಂಕರಪ್ಪನವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.



**ಶಶಿಕುಮಾರ್ ಪಿಳ್ಳೈ**

ಜನನ : 12-4-1959

*ವಿಳಾಸ :*

ನಂ.L-138, 5ನೇ ಕ್ರಾಸ್

ಕೆ. ಮುನಿಸ್ವಾಮಪ್ಪ ರಸ್ತೆ

R. S. ಪಾಳ್ಯ

ಬೆಂಗಳೂರು - 33

ಶಶಿಕುಮಾರ ಪಿಳ್ಳೆಯವರನ್ನು ರಂಗಭೂಮಿಗೆ ಪರಿಚಯಿಸಿದ್ದ ಬೆಮೆಲ್ ಕಾರ್ಖಾನೆಯ 'ವಿಪ್ಲವ' ಕಲಾತಂಡ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿ ಗೋಪಾಲಕೃಷ್ಣ ಪಿಳ್ಳೆ ಹಾಗೂ ಭಾರ್ಗವಿ ದಂಪತಿಗಳಿಗೆ ಮಗನಾಗಿ ಶಶಿಕುಮಾರ್ ಪಿಳ್ಳೆ ಜನಿಸಿದರು. 1983ರಲ್ಲಿ ಬೆಮೆಲ್ ಕಾರ್ಖಾನೆಯ ಉದ್ಯೋಗಿಯಾದ ಮೇಲೆ, ಕಾರ್ಮಿಕರೇ ಹುಟ್ಟು ಹಾಕಿದ ಹವ್ಯಾಸಿ ಕಲಾತಂಡ 'ವಿಪ್ಲವ' ದ ಮೂಲಕ ರಂಗಕ್ಕೆ ಪಾದಾರ್ಪಣೆ ಮಾಡಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದರು. ಮುಖ್ಯವಾಗಿ ವಾಲ್ಟರ್ ಡಿ ಸೋಜ ನಿರ್ದೇಶಿಸಿದ 'ಕ್ಯಾನ್ಸರ್' ಬೀದಿ ನಾಟಕ, ಡಾ|| ತಿಪ್ಪೇಶಿ, ಹುತ್ತವ ಬಡಿದರೆ, ದಂಗೆಯ ಮುಂಚಿನ ದಿನಗಳು, ತಾಯಿ, ಕುರಿ, ಕತ್ತಲೆ ದಾರಿ ದೂರ, ತುಘಲಕ್, ರಾವಿನದಿಯ ದಂಡೆಯಲ್ಲಿ, ಸಾಹೇಬರು ಬರುತ್ತಾರೆ ನಾಟಕಗಳಲ್ಲಿ ನಟರಾಗಿ ರಂಗಪ್ರಿಯರ ಗಮನ ಸೆಳೆದಿದ್ದಾರೆ.

ನಗರದ ಹಲವಾರು ಹವ್ಯಾಸಿ ತಂಡಗಳ ನಾಟಕಗಳಲ್ಲೂ ನಟನಾಗಿ ಪಾಲ್ಗೊಂಡಿದ್ದಾರೆ. ಸಂತೆಯಲ್ಲಿ ನಿಂತ ಕಬೀರ, ಬಸ್ ಕಂಡಕ್ಟರ್, ಜ್ವಾಲೆ, ಕುರಿದೊಡ್ಡಿ ಕುರುಕ್ಷೇತ್ರ, ಪ್ರಚಂಡ ರಾವಣ, ಚೆನ್ನಿದೊಡ್ಡಿ ಚರಿತ್ರೆ ಅವುಗಳಲ್ಲಿ ಕೆಲವು.

ಬಿ.ಇ.ಎಂ.ಎಲ್. ಲಲಿತ ಕಲಾ ಸಂಘದಲ್ಲಿ ಪದಾಧಿಕಾರಿಯಾಗಿ ಹಲವು ನಾಟಕಗಳು ಪ್ರಯೋಗಗೊಳ್ಳಲು ಕಾರಣರಾಗಿರುವ ಶಶಿಕುಮಾರ್ ಇತ್ತೀಚೆಗೆ ಕಿರುತೆರೆಗೂ ಪರಿಚಿತರಾಗಿದ್ದಾರೆ.



ಶಾಂತಾ

ವಿಳಾಸ:
ಸಿ-15, ಆರ್.ಟಿ.ಪಿ.ಎಸ್. ಕಾಲೋನಿ
ಶಕ್ತಿನಗರ, ರಾಯಚೂರು.

ಶಾಂತ ಕುಲಕರ್ಣಿ ರಾಯಚೂರು ಜಿಲ್ಲೆಯ ಪ್ರತಿಭಾವಂತ ಜಾನಪದ ಗಾಯಕಿ ಹಾಗೂ ಉತ್ತಮ ರಂಗನಟಿ. 1984ರಲ್ಲಿ ಬಸವಲಿಂಗಯ್ಯನವರ 'ಅಲ್ಲಾಮನ ಅದ್ಭುತ ನ್ಯಾಯ' ನಾಟಕದ ಮೂಲಕ ರಂಗಪ್ರವೇಶ ಆಯಿತು. ನಂತರದ ದಿನಗಳಲ್ಲಿ ಕನ್ನಡ ಹವ್ಯಾಸಿ ರಂಗಭೂಮಿಯ ಪ್ರಯೋಗಾತ್ಮಕ ನಾಟಕಗಳಾದ ಕೆರೆಗೆ ಹಾರ, ಚಾರ್ವಾಕ, ಜೋಗತಿ, ಅಂಧೇರಿ ನಗರಿ ಚೌಪಟ್‌ರಾಜ, ಮಹಿಮಾಪುರ, ದೊಡ್ಡಪ್ಪ, ಸೋಲರಿಯದ ಶೂರರು, ನಾನೊಂದು ತಪ್ಪು ಮಾಡಿದೆ, ಜೋಗತಿ ಕಲ್ಲು ಮುಂತಾದ ನಾಟಕಗಳಲ್ಲಿ ನಟಿಸಿ ಪಳಗಿದ ನಟಿಯಾಗಿ ರೂಪುಗೊಂಡರು.

ಸಮುದಾಯ ಸಾಂಸ್ಕೃತಿಕ ಸಂಘಟನೆಯಲ್ಲಿ ಕಾರ್ಯಕರ್ತರಾಗಿ ಹಲವಾರು ಸಾಮಾಜಿಕ ಎಚ್ಚರ ನೀಡುವ ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಬರದ ಬಯಲಾಟ, ಸಾಕ್ಷರತೆ, ಕುಡಿತದಿಂದ ಸರ್ವನಾಶ ಬೀದಿನಾಟಕಗಳ ಜೊತೆಗೆ ಹಲವಾರು ಕಲಾ ಜಾಥಾಗಳಲ್ಲೂ ಭಾಗವಹಿಸಿದ್ದಾರೆ.

ಮಕ್ಕಳ ನಾಟಕ ನಿರ್ದೇಶನದಲ್ಲಿ ವಿಶೇಷ ಕಾಳಜಿಯುಳ್ಳ ಶಾಂತಾ ಅಲಿಬಾಬಾ 40 ಕಳ್ಳರು, ಹಕ್ಕಿ ಹಾಡು, ಊರು ಕೇರಿ, ಕತ್ತೆ ಮತ್ತು ಧರ್ಮ, ಕೊರವಂಜಿ, ಜಾತ್ರೆ, ನೆಲ ಮುಟ್ಟಿದ ಹೊಟ್ಟೆಪ್ಪ, ನೀಲಿ ಕುದುರೆ ಸೇರಿದಂತೆ ಇನ್ನೂ ಅನೇಕ ನಾಟಕಗಳ ನಿರ್ದೇಶನ ಮಾಡಿದ್ದಾರೆ.

ಉತ್ತಮ ಗಾಯಕಿಯಾದ ಶಾಂತ ತಾಲ್ಲೂಕು, ಜಿಲ್ಲಾಮಟ್ಟದ ಯುವ ಮಂಡಳಿ ಸ್ಪರ್ಧೆಯಲ್ಲಿ ಭಾಗವಹಿಸಿ ಭಾವಗೀತೆ ಮತ್ತು ಜಾನಪದ ಹಾಡುಗಳನ್ನು ಉತ್ತಮವಾಗಿ ಹಾಡಿ ಹಲವು ಬಹುಮಾನಗಳನ್ನು ಗಿಟ್ಟಿಸಿದ್ದುಂಟು.

ಸಮುದಾಯ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾ ಘಟಕದಲ್ಲಿ 10 ವರ್ಷದಿಂದ ಕಾರ್ಯಕರ್ತಳಾಗಿ, ರಾಜ್ಯಕೇಂದ್ರ ಘಟಕದ ಕೇಂದ್ರ ಸಮಿತಿಯ ಸದಸ್ಯಳಾಗಿ 8 ವರ್ಷಗಳ ಸೇವೆಯೊಂದಿಗೆ, ಪ್ರತಿ ವರ್ಷ ಮಕ್ಕಳ ನಾಟಕೋತ್ಸವ, ಮಕ್ಕಳ ರಂಗ ಶಿಬಿರಗಳನ್ನು ಆಯೋಜಿಸಿದ್ದಾರೆ.



## ಎಸ್ಕಾರ್ಟ್ಸ್ ಶಾಂತಕುಮಾರ್

ಜನನ : 12-03-1957

ಎಚ್. ಹನುಮಯ್ಯ ಹಾಗೂ ತಿಮ್ಮಕ್ಕನವರ ಮಗ ಶಾಂತಕುಮಾರ್ ಯಲಹಂಕದ ಎಸ್ಕಾರ್ಟ್ಸ್ ಕಂಪನಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಾ ಎಸ್ಕಾರ್ಟ್ಸ್ ಶಾಂತಕುಮಾರ್ ಎಂದೇ ಹವ್ಯಾಸಿ ರಂಗಭೂಮಿಯಲ್ಲಿ ಪರಿಚಿತರಾಗಿದ್ದಾರೆ.

1968 ರಲ್ಲಿ ಬೆಂಗಳೂರಿನ ಹೆಸರಾಂತ ಹವ್ಯಾಸಿ ನಾಟಕ ತಂಡವಾದ ವಿಜಯಕಲಾ ನಾಟಕ ಮಂಡಲಿಯ 'ಸತ್ಯ ಹರಿಶ್ಚಂದ್ರ' ನಾಟಕದ ಲೋಹಿತಾಶ್ವನ ಪಾತ್ರದಿಂದ ಬಾಲ ನಟನಾಗಿ ರಂಗಭೂಮಿ ಪ್ರವೇಶಿಸಿದರು. ಬಾಲ್ಯದಿಂದಲೂ ಸಂಗೀತ ಮತ್ತು ನಾಟಕದಲ್ಲಿ ಅಭಿರುಚಿ ಹೊಂದಿದ್ದ ಇವರು ಸುಮಾರು 3 ದಶಕಗಳಿಂದಲೂ ಹೆಸರಾಂತ ಪೌರಾಣಿಕ ನಾಟಕ ನಿರ್ದೇಶಕರುಗಳಾದ ದಿ|| ಹೊನ್ನೂರಪ್ಪ, ವಿಶ್ವನಾಥಾಚಾರ್, ಶೇಷಗಿರಿ, ವಜ್ರಪ್ಪ, ಹನುಮಂತರಾವ್, ಬೈಯಂಡಹಳ್ಳಿ ಶಿವಣ್ಣ ಮುಂತಾದವರ ನಿರ್ದೇಶನದಲ್ಲಿ ಪ್ರಖ್ಯಾತ ಪೌರಾಣಿಕ ನಾಟಕಗಳಾದ ಕುರುಕ್ಷೇತ್ರ, ದಾನಶೂರ ಕರ್ಣ, ಸುಭದ್ರಾ ಕಲ್ಯಾಣ, ಸುಂದರಕಾಂಡ ರಾಮಾಯಣ, ಕವಿರತ್ನ ಕಾಳಿದಾಸ, ನಲ್ಲತಂಗ, ಸಂಪೂರ್ಣ ರಾಮಾಯಣ ನಾಟಕಗಳಲ್ಲಿ ನಾರದ, ಅರ್ಜುನ, ಕೃಷ್ಣ, ಕರ್ಣ, ಅಭಿಮನ್ಯು, ವಿಧುರ, ರಾಮ, ಲಕ್ಷ್ಮಣ, ಆಂಜನೇಯ, ಪುರಂದರದಾಸ ಇತ್ಯಾದಿ ಪಾತ್ರಗಳನ್ನು ವಹಿಸಿ ಹವ್ಯಾಸಿ ನಾಟಕ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದಾರೆ.

ಸುಮಾರು ಹತ್ತು ವರ್ಷಗಳಿಂದಲೂ ಕಾರ್ಖಾನೆಯ ಲಲಿತ ಕಲಾ ಸಂಘದ ಕಾರ್ಯದರ್ಶಿಯಾಗಿ ಹಲವಾರು ಕೈಗಾರಿಕಾ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ, ಪ್ರಶಸ್ತಿಗಳನ್ನು ಪಡಿದಿದ್ದಾರೆ.

ಶೃತಿ ಮ್ಯೂಸಿಕ್ ಕಂಪೆನಿಯವರು ಹೊರತಂದಿರುವ ಹೆಸರಾಂತ ನಾಟಕಗಳ ರಂಗಗೀತೆಗಳ ಧ್ವನಿ ಮುದ್ರಿಕೆಯಲ್ಲಿ ರಂಗಗೀತೆಗಳನ್ನು ಹಾಡಿ ಶೋತೃಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ.



## ಸಿ. ಶಿವಕುಮಾರಾರಾಧ್ಯ

ಜನನ : 13-06-1960

ವಿಳಾಸ :
ನಂ.1602, 8ನೇ ಅಡ್ಡರಸ್ತೆ
ಗೋವಿಂದರಾಜನಗರ
ಕಾರ್ಪೋರೇಷನ್ ಕಾಲೋನಿ
ಬೆಂಗಳೂರು - 79

ಶ್ರೀಮತಿ ಶಿವಮ್ಮ ಮತ್ತು ಶ್ರೀ ಚಂದ್ರಶೇಖರಾರಾಧ್ಯನವರ ಪುತ್ರರಾದ ಶಿವಕುಮಾರಾರಾಧ್ಯ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನವರು.

ಶಾಲಾ ದಿನಗಳಿಂದಲೂ ರಂಗಭೂಮಿಯ ನಂಟು ಬೆಂಬಿಡದೆ ಬಂದಿತು. ಬೆಂಗಳೂರಿನ ಯಲಹಂಕದ ಎಸ್ಕಾರ್ಟ್ಸ್ ಕಾರ್ಖಾನೆಯಲ್ಲಿ ಉದ್ಯೋಗಿಯಾಗಿರುವ ಇವರು 'ಮಂಥನ', 'ಗೆಜ್ಜೆಹೆಜ್ಜೆ', 'ಹಂಸಜ್ಯೋತಿ', 'ಹೊಸಬರು', 'ನವ ಕಲಾನಿಕೇತನ' ಮುಂತಾದ ನಗರದ ಅನೇಕ ಪ್ರಮುಖ ಹವ್ಯಾಸಿ ತಂಡಗಳೊಂದಿಗೆ ಮಾತ್ರವಲ್ಲದೆ, ತಮ್ಮದೇ ಆದ 'ಸೌಜನ್ಯ ಕಲಾವೃಂದ' ದ ನೂರಾರು ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಖ್ಯಾತ ನಿರ್ದೇಶಕ ಟಿ. ಎನ್. ನರಸಿಂಹನ್ ಕನ್ನಡಕ್ಕೆ ರೂಪಾಂತರಿಸಿದ 'ವಾರ್ಡ್ ನಂ.6' ಹಾಗೂ ಸೂತ್ರಧಾರ ರಾಮಯ್ಯನವರ ನಿರ್ದೇಶನದ 'ಘಟನೆಗಳು ನಮ್ಮವಲ್ಲ' ನಾಟಕಗಳು ಇವರಿಗೆ ಖ್ಯಾತಿ ತಂದಿತ್ತವು. 'ಗೆಜ್ಜೆ ಹೆಜ್ಜೆ' ತಂಡದ ಮೂಲಕ ಸಾಕ್ಷರತೆ, ಕೋಮು ಸೌಹಾರ್ದತೆ, ಕುಡಿತದಿಂದಾಗುವ ಪರಿಣಾಮಗಳು, ಪರಿಸರ ರಕ್ಷಣೆ ಮುಂತಾದ ಸಾಮಾಜಿಕ ಕಳಕಳಿಯ ಸಶಕ್ತ ಬೀದಿ ನಾಟಕಗಳನ್ನು ರಾಜ್ಯಾದ್ಯಂತ ಪ್ರದರ್ಶಿಸಿದ್ದಾರೆ. ಇಬ್ಬರೆ ನಟರಿಂದ ನಾಡಿನ ಬಹು ಭಾಗಗಳಲ್ಲಿ ರಂಗ ನಿರ್ಮಿಸಿ ಸುಮಾರು 2 ತಾಸುಗಳ ಕಾಲ ಅಭಿನಯಿಸಿರುವುದು ವಿಶೇಷವಾಗಿದೆ.

ಬೆಂಗಳೂರಿನ ಆಕಾಶವಾಣಿಯಲ್ಲಿ 'ಬಿ' ಗ್ರೇಡ್ ಕಲಾವಿದರಾಗಿ ಹಲವಾರು ರೇಡಿಯೋ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಿ.ವಿ.ಶಿವಶಂಕರ್ ನಿರ್ದೇಶನದ ರಂಗಭೂಮಿಯ ಒಳಹೊರಗುಗಳನ್ನು ಪ್ರತಿಬಿಂಬಿಸುವ 'ಕಂಪನಿಯ ಪೆಂಪು ಇಂಪು' ನಾಟಕ ಕೇಳುಗರ ಮನೆ ಮಾತಾಗಿದೆ. ಇದಲ್ಲದೆ ಕೆಲವು ಧ್ವನಿಸುರಳಿಗಳಿಗೂ ತಮ್ಮ ಧ್ವನಿ ನೀಡಿದ್ದಾರೆ.

ಅಭಿನಯಕ್ಕಷ್ಟೇ ಮಿಸಲಾಗಿರದೇ ಹಲವು ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಂಶ ಪಾರಂಪರ್ಯವಾಗಿ ಬಂದಿರುವ ಪುರೋಹಿತ ವೃತ್ತಿಯನ್ನೂ ಮುಂದುವರೆಸಿಕೊಂಡು ಬಂದಿದ್ದಾರೆ.

ಕಿರುತೆರೆಯ ಹಲವಾರು ಧಾರಾವಾಹಿಗಳಲ್ಲಿ, ಬೆಳ್ಳಿತೆರೆಯ ಕೆಲವು ಚಿತ್ರಗಳಲ್ಲಿ ನಟಿಸಿದ್ದಾರೆ. ●



## ಸಿ. ಶಿವಾನಂದಯ್ಯ

ಜನನ : 5-4-1958

ವಿಳಾಸ :
ಬೆಮೆಲ್ ಕಾರ್ಖಾನೆ
ಬೆಂಗಳೂರು

ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಒಳಪಡುವ ಬ್ಯಾಡರಹಳ್ಳಿಯ ಚಿಕ್ಕಮ್ಮ, ಚಿತ್ತಯ್ಯನವರ ಮಗನಾಗಿ ಶಿವಾನಂದಯ್ಯ ಜನಿಸಿದರು. ಶಾಲಾ ದಿನಗಳಿಂದಲೇ ನಾಟಕದ ನಂಟು ಹತ್ತಿತು.

ಮುಂದೆ ಬಿ.ಇ.ಎಂ.ಎಲ್.ಗೆ ಕಾರ್ಮಿಕನಾಗಿ ಸೇರಿದರು. ಅವರಲ್ಲಿದ್ದ ನಾಟಕದ ಅಭಿಲಾಷೆಗೆ ಕಾರ್ಖಾನೆಯ ರಂಗಮಂಚ ಅವಕಾಶ ನೀಡಿತು. ಲಲಿತ ಕಲಾ ಸಂಘದಲ್ಲಿ 5 ವರ್ಷಗಳ ಕಾಲ ಖಜಾಂಚಿಯಾಗಿ ಹಲವು ನಾಟಕಗಳು ರಂಗದ ಮೇಲೆ ತರಲು ಕಾರಣರಾದರು.

ನಟನೆಯೊಂದಿಗೆ ನಿರ್ದೇಶನದ ಕಡೆಗೆ ಇವರ ಕಣ್ಣು ಹೊರಳಿ, 'ಮಾಚಿ', 'ತ್ಯಾಗಿ', 'ಭಾರತ ಸಂಗ್ರಾಮ', 'ಸಾಹೇಬರು ಬರುತ್ತಾರೆ', ನಾಟಕಗಳನ್ನು ನಿರ್ದೇಶಿಸಿದರು. ರಂಗದ ಹಿಂದೆ ಬೆಳಕು ವಿನ್ಯಾಸಕಾರನಾಗಿ 'ದಂಗೆಯ ಮುಂಚಿನ ದಿನಗಳು', 'ಕುರಿ', 'ಕತ್ತಲೆ ದಾರಿ ದೂರ', 'ಹುತ್ತವ ಬಡಿದರೆ', 'ಡಾ|| ತಿಪ್ಪೇಶಿ' ಹಾಗೂ 'ರಾವಿನದಿಯ ದಂಡೆಯಲ್ಲಿ' ನಾಟಕಗಳಿಗೆ ಬೆಳಕು ನೀಡಿದರು. 1987ರಲ್ಲಿ 'ಬೆನಕ' ಹವ್ಯಾಸಿ ತಂಡ ಏರ್ಪಡಿಸಿದ್ದ ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ರಂಗಭೂಮಿಗೆ ಸಂಬಂಧಿಸಿದಂತೆ ಪಡೆದ ಶಿಕ್ಷಣಾ ಈ ಎಲ್ಲ ಸಾಧನೆಗೆ ಕಾರಣವಾಯಿತು.

ಇಂದಿಗೂ ಕಾರ್ಖಾನೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಶಿವಾನಂದಯ್ಯ. ಕೆಲವು ದೂರದರ್ಶನ ಧಾರಾವಾಹಿಗಳನ್ನು ನಿರ್ದೇಶಿಸಿ, ನಟನೆಯನ್ನೂ ಮಾಡಿದ್ದಾರೆ.



## ಕಾ.ನಾ. ಶ್ರೀನಿವಾಸ್ (ಕಾನಾಶ್ರೀ)

ವಿಳಾಸ:
ನಂ. 77/A, ಮೌಂಟನ್ ಸ್ಟ್ರೀಟ್
1ನೇ ಬ್ಲಾಕ್, ಜಯನಗರ, ಬೆಂಗಳೂರು-11

ಈಗ ಬೆಂಗಳೂರಿನಲ್ಲಿ ನೆಲೆಸಿರುವ ಕಾ.ನಾ. ಶ್ರೀನಿವಾಸ್ ಮೂಲತಃ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಕಾದಲೇಣಿ ಗ್ರಾಮಕ್ಕೆ ಸೇರಿದವರು. ಶಾಲಾ ಕಾಲೇಜು ದಿನಗಳಿಂದಲೇ ಸಾಹಿತ್ಯ, ನಾಟಕ, ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಉಳ್ಳವರು.

1972 ರಲ್ಲಿ ಬಿ.ವಿ. ಕಾರಂತರ ನಾಟಕಗಳ ಪ್ರದರ್ಶನ ಏರ್ಪಡಿಸುವ ಮೂಲಕ ದಾವಣಗೆರೆ, ಗೌರಿಬಿದನೂರಿನಲ್ಲಿ ಹವ್ಯಾಸಿ ನಾಟಕಗಳ ಚಳವಳಿಯ ಅಲೆಯನ್ನು ತಂದರು. 1974ರಲ್ಲಿ ಗೌರಿಬಿದನೂರಿನಲ್ಲಿ ಕ್ರಿಯಾಶೀಲ ಗೆಳೆಯರೊಡಗೂಡಿ 'ಕನ್ನಡ ಯುವಕ ಸಂಘ' ಸ್ಥಾಪಿಸಿ 'ಗಿರಿಜಾ ಕಲ್ಯಾಣ' ಎಂಬ ಯಕ್ಷಗಾನ ಪ್ರದರ್ಶಿಸಿದರು. ಸಂಘದ ವತಿಯಿಂದ ಕವಿಗೋಷ್ಠಿಗಳನ್ನು, ಡಾ|| ಗುಬ್ಬಿ ವೀರಣ್ಣ ಅವರ ಜನ್ಮಶತಾಬ್ದಿ ಅಂಗವಾಗಿ ನಾಟಕೋತ್ಸವವನ್ನು ಏರ್ಪಡಿಸಿದ್ದಾರೆ.

1977ರ ಈಚೆಗೆ ಸಂಘ ನಾಟಕಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿತು. ಪ್ರಾರಂಭದಲ್ಲಿ ಸ್ಥಳೀಯ ರಂಗಕಲಾವಿದರಾದ ಟಿ.ಎನ್. ಸೀತಾರಾಂ, ಕೆ.ಎಸ್. ರಾಮಸ್ವಾಮಿ, ಜಿ.ಕೆ. ರಂಗನಾಥ್, ಹ.ವೆಂ. ವೇಣುಗೋಪಾಲ್, ಕಾನಾಶ್ರೀ ನಾಟಕಗಳನ್ನು ನಿರ್ದೇಶಿಸಿದರು. ಸ್ಥಳೀಯ ರಂಗಾಸಕ್ತರಿಗೆ ರಂಗಭೂಮಿಯ ಬಗೆಗೆ ತಿಳುವಳಿಕೆ ನೀಡಲು ಎನ್.ಎಸ್.ಡಿ. ಪದವೀಧರರಾದ ಶ್ರೀನಿವಾಸಪ್ರಭು, ಜಯತೀರ್ಥ ಜೋಶಿ, ಸುರೇಶ್ ಆನಗಳ್ಳಿ ಅವರಿಂದ ರಂಗತರಬೇತಿ ಶಿಬಿರಗಳನ್ನು ಏರ್ಪಡಿಸಿದ್ದಾರೆ. ಅಲ್ಲದೆ ಬಿ. ಸುರೇಶ, ಬಿ.ವಿ. ರಾಜಾರಾಂ, ರಾಮಕೃಷ್ಣ, ರಿಚರ್ಡ್ ಲೂಯಿಸ್‌ರಂಥ ರಂಗಕರ್ಮಿಗಳಿಂದ ನಾಟಕ ನಿರ್ದೇಶನ ಮಾಡಿಸಿದ್ದಾರೆ.

ನಾಟಕೋತ್ಸವಗಳನ್ನು ಏರ್ಪಡಿಸಿ ಬೇರೆ ಬೇರೆ ಊರುಗಳಿಂದ ಅನೇಕ ತಂಡಗಳ ನಾಟಕಗಳು ಪ್ರದರ್ಶನಗೊಳ್ಳಲು ಸಂಘ ಶ್ರಮಿಸಿದೆ. ತೆರೆಗಳು, ಕೊಡೆಗಳು, ಗುರ್ತಿನವರು, ಯಮಳ ಪ್ರಶ್ನೆ, ಬಂಡ್ವಾಳಿಲ್ಲದ ಬಡಾಯಿ, ಉದ್ವಸ್ತ ಧರ್ಮಶಾಲೆ, ಹೀಗೂ ಒಬ್ಬರಾಜ, ಪೋಲೀಸರಿದ್ದಾರೆ ಎಚ್ಚರಿಕೆ, ಬದುಕ ಮನ್ನಿಸೋ ಪ್ರಭುವೇ, ನಮ್ಮೊಳಗೊಬ್ಬ ನಾಜೂಕಯ್ಯ, ಹಳಿಯ ಮೇಲಿನ ಸದ್ದು, ಸಾಹೇಬರು ಬರುತ್ತಾರೆ, ಕತ್ತಲೆ ಬೆಳಕು ನಾಟಕಗಳು ಇವರ ಸಂಘದಿಂದ ಪ್ರಯೋಗಗೊಂಡಿದ್ದು, ಹೆಚ್ಚಾಗಿ ಸ್ಥಳೀಯ ಕಲಾವಿದರನ್ನು ಬಳಸಿಕೊಂಡಿದ್ದಾರೆ. ರಾಜ್ಯದ ಮುಖ್ಯ ಸ್ಥಳಗಳಲ್ಲಿ ನಾಟಕ ಪ್ರದರ್ಶನ ನೀಡಿದ್ದಾರೆ.

ರಂಗಭೂಮಿಗೆ ಸಂಬಂಧಿಸಿದ ವಿಚಾರ ಸಂಕಿರಣಗಳನ್ನು ಬಿ. ಚಂದ್ರಶೇಖರ್, ಪರ್ವತವಾಣಿ, ಲಂಕೇಶ್, ಚಂಪಾ, ಕೆ.ವಿ. ನಾರಾಯಣ, ಎಲ್. ಕೃಷ್ಣಪ್ಪ, ಜೆ. ಲೋಕೇಶ್, ಟಿ.ಎನ್. ಸೀತಾರಾಂ ನಡೆಸಿಕೊಟ್ಟಿದ್ದಾರೆ.

ಹೀಗೆ ಅನೇಕ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾದ ಈ ಸಂಸ್ಥೆಯ ನಿರಂತರ ಕಾರ್ಯವೈಖರಿ ಮತ್ತು ಅದರ ವ್ಯಾಪ್ತಿಯನ್ನು ಗುರುತಿಸಿ ಸಂಘದ ಸ್ಥಾಪಕರಲ್ಲಿ ಒಬ್ಬರೂ ಹಾಗು ಅಧ್ಯಕ್ಷರೂ ಆದ ಕಾನಾಶ್ರೀ ಅವರನ್ನು ಕರ್ನಾಟಕ ನಾಟಕ ಅಕಾಡೆಮಿ 1993ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.



## ಸಿ. ವಿ. ಶ್ರೀನಿವಾಸ್

ಜನನ : 8-9-1956

*ವಿಳಾಸ :*
ನಂ.ಎ-1, ಪೊಲೀಸ್ ವೈರ್‌ಲೆಸ್ ಕ್ವಾರ್ಟರ್ಸ್
'ಭುವನಗಿರಿ', ಬಾಣಸವಾಡಿ
ಬೆಂಗಳೂರು - 43

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಜೋಡಿ ಚಿಕ್ಕನಹಳ್ಳಿಯ ಹಾರ್ಮೋನಿಯಂ ಮಾಸ್ತರ್ ಸಿ. ವೆಂಕಟಪ್ಪ ಹಾಗೂ ನಂಜಮ್ಮನವರ ಪುತ್ರರಾಗಿ ಶ್ರೀನಿವಾಸ್ ಜನಿಸಿದರು. ಬಾಲ್ಯದಿಂದಲೇ ರಂಗದತ್ತ ಒಲವು ತೋರಿ 7ನೇ ತರಗತಿಯಲ್ಲಿ ರಂಗಭೂಮಿಗೆ ಕಾಲಿಟ್ಟರು. ವಿದ್ಯಾರ್ಥಿ ಜೀವನದಲ್ಲೇ ಅನೇಕ ಸಾಮಾಜಿಕ ನಾಟಕಗಳಲ್ಲಿ ಹಾಸ್ಯ ಪಾತ್ರವಹಿಸಿ, ನಿರ್ದೇಶನದ ಹೊಣೆಯನ್ನು ಹೊತ್ತು ಕಾಲೇಜು ವಿದ್ಯಾರ್ಥಿ ಜೀವನಕ್ಕೂ ಮುಂದುವರೆಸಿದರು. ಕಲಿತದ್ದು ಪಿ.ಯು.ಸಿ. ವರೆಗೆ ಮಾತ್ರ.

1983 ರಲ್ಲಿ ಬೇಲೂರು ಕೃಷ್ಣಮೂರ್ತಿರವರ ಆಹುತಿ ನಾಟಕವನ್ನು ನಿರ್ದೇಶಿಸುವುದರ ಮೂಲಕ ಹವ್ಯಾಸಿ ರಂಗಭೂಮಿ ಪ್ರವೇಶಿಸಿದರು. ಆನಂತರ ಬೆಂಗಳೂರಿನ ಶಿಲ್ಪಕಲಾನಿಕೇತನ, ಕಲಾ ನವರಂಗ, ಶ್ರೀವಾಣಿ ಕಲಾವೃಂದ, ಪದ್ಮಶ್ರೀ ಕಲಾಸಂಘ, ರಂಗಸೌರಭ, ಶಾಂತಿ ಕಲಾನಿಕೇತನ ಹಾಗೂ ಕಂಠೀರವ ಕಲಾವೃಂದ ಸಂಸ್ಥೆಗಳಲ್ಲಿ ನಾನಾ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಕುರುಕ್ಷೇತ್ರ, ದೇವದಾಸಿ, ಹೆಣ್ಣಿಗೊಂದ್ಗಂಡು, ಶ್ರೀನಿವಾಸ್‌ಗೆ ಜನಪ್ರಿಯತೆ ನೀಡಿದ ನಾಟಕಗಳು.

ಕೇಂದ್ರ ಸರ್ಕಾರದ ಒಳಾಡಳಿತ ಇಲಾಖೆಯ ಪೊಲೀಸ್ ವೈರ್‌ಲೆಸ್ ಇಲಾಖೆಯಲ್ಲಿ ಉದ್ಯೋಗಿಯಾಗಿರುವುದರ ಜೊತೆಗೆ 'ಪದ್ಮಶ್ರೀ ಕಲಾಸಂಘ (ರಿ)'ಕ್ಕೆ ಅಧ್ಯಕ್ಷರಾಗಿ ಹಾಗೂ ತಮ್ಮದೇ ಮಾಲೀಕತ್ವದ 'ಕೀರ್ತಿ ಕಲಾಸಂಘ'ದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಅನೇಕ ಹೊಸ ನಟರನ್ನು ಕಲಾರಂಗಕ್ಕೆ ಪರಿಚಯಿಸುತ್ತಿದ್ದಾರೆ. ಪ್ರತಿ ವರ್ಷ ಬೆಂಗಳೂರು ಹಾಗೂ ಕರ್ನಾಟಕದ ನಾನಾ ಕಡೆಯಲ್ಲಿ ನಾಟಕಗಳನ್ನಾಡಿಸುವ ಹಂಬಲ ಹೊತ್ತಿದ್ದಾರೆ ಶ್ರೀನಿವಾಸ್.



## ಕೆ. ಎನ್. ಶ್ರೀಹರಿ

ಜನನ : 20-7-1929

ಶ್ಯಾನುಭೋಗ ಮನೆತನದಲ್ಲಿ ಜನಿಸಿದ ಶ್ರೀಹರಿಯವರು ಪ್ರಾಥಮಿಕ ಶಿಕ್ಷಣದ ಅವಧಿಯಲ್ಲೇ 'ಧ್ರುವ' ಪಾತ್ರಧಾರಿಯಾಗಿ ರಂಗಭೂಮಿಯನ್ನು ಸ್ಪರ್ಶಿಸಿದರು. ತಂದೆ ಕೆ. ನರಹರಯ್ಯ ಹಾಗೂ ತಾಯಿ ಲಲಿತಮ್ಮ ತಮ್ಮ ಪುಟ್ಟ ಕಂದನಲ್ಲಿಯ ಪ್ರತಿಭೆಯನ್ನು ಗುರುತಿಸಿ ನೀಡಿದ ಪ್ರೋತ್ಸಾಹ ಮುಂದಿನ ದಿನಗಳಲ್ಲಿ ಶಾಲಾ ಕಾಲೇಜುಗಳ ರಂಗ ಮಂಚದಿಂದ ಪಾತ್ರವಹಿಸಲು ಕಾರಣವಾಯಿತು.

1945 ರಲ್ಲಿ ಪಿ.ಎ. ವೇಣುಗೋಪಾಲ ರೆಡ್ಡಿಯವರ ಒಡೆತನದಲ್ಲಿ ಆರಂಭವಾದ 'ಕಲಾಜ್ಯೋತಿ' ಹವ್ಯಾಸಿ ಸಂಸ್ಥೆ ಸೇರಿ ಕೈಲಾಸಂರ ಹೋಂರೂಲು ನಾಟಕದ 'ವಿತಂತು' ಪಾತ್ರದಲ್ಲಿ ಚೊಕ್ಕವಾಗಿ ಅಭಿನಯಿಸಿ ಜನಪ್ರಿಯತೆಯನ್ನು ಪಡೆದರು. 1959 ರಲ್ಲಿ ದೆಹಲಿಯಲ್ಲಿ ನಡೆದ ಬೇಸಗೆಯ ನಾಟಕೋತ್ಸವದಲ್ಲಿ ಕೈಲಾಸಂರ 'ಹುತ್ತದಲ್ಲಿ ಹುತ್ತ', ಅಮ್ಮಾವ್ರ ಗಂಡ, ಮತ್ತು ಹಿಂದಿ ನಾಟಕ 'ನಾರಿಯಲ್ ಮೇ ಸಾಗರ್' ನಾಟಕಗಳನ್ನು ಪ್ರದರ್ಶಿಸಿ ಆಗಿನ ಪ್ರಧಾನಿ ದಿll ನೆಹರೂ ಅವರ ಪ್ರಶಂಸೆಗೆ ಪಾತ್ರರಾದರು.

ನಾಟಕ ರಂಗದ ಜೊತೆಯಲ್ಲಿಯೇ ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲೂ ಆಸಕ್ತಿ ಹೊಂದಿದ್ದು ರಾಜಾಜಿನಗರದ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿಗಳಾಗಿ 40 ವರ್ಷಗಳಿಗೂ ಮೇಲ್ಪಟ್ಟು ಸುದೀರ್ಘ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಉತ್ತಮ ನಟ, ವಾಗ್ಮಿ, ಪ್ರವಚನಕಾರ, ಲೇಖಕ, ಶಿಕ್ಷಣತಜ್ಞ, ಸಮಾಜ ಸೇವಾಕರ್ತ ಹೀಗೆ ಬಹುಮುಖ ಪ್ರತಿಭೆಯ ಶ್ರೀಹರಿ ತಮ್ಮ ಪರಿಪೂರ್ಣ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಪ್ರಭಾವ ಬೀರಿದ ವಿಸೀ, ಬೇಂದ್ರೆ, ಪುತಿನ, ಶ್ರೀರಂಗ, ಮಾಸ್ತಿ, ರಾಜರತ್ನಂ, ಪರ್ವತವಾಣಿ, ರಾಶಿಯಂಥ ಧುರೀಣರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಹಲವಾರು ರೇಡಿಯೋ ನಾಟಕಗಳಲ್ಲಿ, ರೂಪಕಗಳಲ್ಲಿ, ಶಬ್ದಚಿತ್ರಗಳಲ್ಲಿ ಭಾಗ ವಹಿಸಿರುವರಲ್ಲದೆ, ನಿರ್ದೇಶನವನ್ನು ಮಾಡಿದ್ದಾರೆ. ಈ ಎಪ್ಪತ್ತೆರಡನೆಯ ಇಳಿ ವಯಸ್ಸಿನಲ್ಲೂ ಯುವ ಮನಸ್ಥಿತಿಯಿಂದ ರಂಗದ ಮೇಲೆ ಪಾತ್ರವಹಿಸಲು ಸಿದ್ಧವಾಗಿದ್ದಾರೆ ಶ್ರೀಹರಿ.



## ಕೆ. ಪಿ. ಶೇಖನಗೌಡ

ಜನನ : 21-5-1963

*ವಿಳಾಸ :*
ನಂ.96A/85, MES ಕಾಲೋನಿ
ಕೋನೇನ ಅಗ್ರಹಾರ
ವಿಮಾನಪುರ ಅಂಚೆ
ಬೆಂಗಳೂರು - 17

ಕೆ.ಪಿ. ಶೇಖನಗೌಡ ಹುಟ್ಟಿದ್ದು ಹಾವೇರಿ ಜಿಲ್ಲೆಗೆ ಸೇರಿದ ಕೊರಡೂರು ಎಂಬ ಗ್ರಾಮದಲ್ಲಿ ತಂದೆ ಪ್ರಭುಗೌಡ. ವಿದ್ಯಾಭ್ಯಾಸ ಪೂರೈಸಿದ ಮೇಲೆ ಉದ್ಯೋಗಾರ್ಥಿಯಾಗಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾದ ಬೆಂಗಳೂರಿಗೆ ಬಂದರು. 1985ರಲ್ಲಿ 'ಬೆಮೆಲ್' ಕಾರ್ಖಾನೆಯ ನೌಕರರಾದರು.

ಮುಂದೆ ಕಾರ್ಖಾನೆಯಲ್ಲಿ 'ಆಶಾಕಿರಣ' ಎಂಬ ಕಲಾ ಸಂಘಕ್ಕೆ ಸದಸ್ಯನಾಗಿ ಸೇರ್ಪಡೆ ಹೊಂದಿದರು. ಕಲಾಸಂಘದ ವಾರ್ಷಿಕೋತ್ಸವದಲ್ಲಿ ಪ್ರಯೋಗಗೊಂಡ 'ಪ್ರಚಂಡ ರಾವಣ' ನಾಟಕಕ್ಕೆ ರಂಗಸಜ್ಜಿಕೆ ಮಾಡಲು ಅವಕಾಶ ದೊರೆಯಿತು. ನಂತರ ಕುರಿದೊಡ್ಡಿ ಕುರುಕ್ಷೇತ್ರ ನಾಟಕದಲ್ಲಿ ಜುಂಜನ ಪಾತ್ರದ ಮುಖೇನ ಕಲಾರಂಗಕ್ಕೆ ಪಾದಾರ್ಪಣೆ ಮಾಡಿದರು. ವಿಜಯನಗರ ರತ್ನ ಸಿಂಹಾಸನ, ರಾಜ ಕೆಂಪೇಗೌಡ, ಕಲಿ ಕಂಠೀರವ, ಬಿಚ್ಚುಗತ್ತಿ, ಚಕ್ರವ್ಯೂಹ, ಬಸ್ ಕಂಡಕ್ಟರ್, ತಾಯಿ, ಡಾ|| ತಿಪ್ಪೇಶಿ ಹೀಗೆ ಕಲಾಸಂಘದ ಎಲ್ಲ ನಾಟಕಗಳಲ್ಲಿ ನಟಿಸಿ, ಅಭಿನಯ ಪಾಠ ಕಲಿತರು. ಅಲ್ಲದೆ ಸಂಘ ಹೊರಗೂ ನಟಿಸಲು ಅವಕಾಶ ಇವರಿಗೆ ದೊರೆಯಿತು 'ಸಮುದಾಯ' ತಂಡದ ಮಾದಾರಿ ಮಾದಯ್ಯ ನಾಟಕದ ಪುಟ್ಟ ಪಾತ್ರದಲ್ಲಿ ಜನಮನ ರಂಜಿಸಿದರು.

ಶೇಖನಗೌಡ ಮೂಲತಃ ಒಳ್ಳೆಯ ಗಾಯಕರು. ಭಾವಗೀತೆ, ಜಾನಪದಗೀತೆ ಹಾಡುವುದಕ್ಕಾಗಿ ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ. ಅದರಲ್ಲೂ ಉತ್ತರ ಕನ್ನಡದ ಗಂಡು ಭಾಷೆಯ ಧಾಟಿಯಲ್ಲಿ ಹಾಡುವ ಹಾಡುಗಳಿಂದ ಉತ್ತರ ಕರ್ನಾಟಕದ ಹಾಡುಗಾರನೆಂದೇ ಪ್ರೇಕ್ಷಕರಿಗೆ ಪರಿಚಿತರಾಗಿದ್ದಾರೆ.

ಪ್ರಸ್ತುತ ಲಲಿತ ಕಲಾ ಸಂಘಕ್ಕೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿ, ಹೊಸ ಹೊಸ ಕಲಾವಿದರನ್ನು ರಂಗಕ್ಕೆ ಪರಿಚಯಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.



## ಕೆ. ಎನ್. ಶೇಷಾದ್ರಿ


ಜನನ : 1934

ಕೆ. ಎನ್. ಶೇಷಾದ್ರಿ, ಸರ್ಕಾರಿ ನೌಕರರಾಗಿದ್ದು, ಈಗ ನಿವೃತ್ತಿ ಹೊಂದಿದ್ದಾರೆ. ತಮ್ಮ ೩೭ ವರ್ಷಗಳ ಸರ್ಕಾರಿ ಸೇವೆಯಲ್ಲಿ ಹಲವಾರು ನಾಟಕಗಳನ್ನು ನಿರ್ದೇಶಿಸಿ, ನಟಿಸಿ ಅಪರೂಪದ 'ಸರ್ಕಾರಿ ನೌಕರ' ಎಂಬ ಮೆಚ್ಚುಗೆಗೆ ಪಾತ್ರರಾದವರು.

ಸರ್ಕಾರಿ ಸೇವೆ ಎಂದ ಮೇಲೆ ವರ್ಗಾವಣೆ ಅನಿವಾರ್ಯ. ಈ ವರ್ಗಾವಣೆಯನ್ನು ವರವೆಂದು ಭಾವಿಸಿ ತಾವು ಹೋದೆಡೆಯಲ್ಲೆಲ್ಲಾ ಯುವಕರನ್ನು ಕಲೆ ಹಾಕಿ ರಂಗ ತಂಡ ಕಟ್ಟಿ ನಾಟಕ ಪ್ರದರ್ಶಿಸಿದ್ದಾರೆ. ಭದ್ರಾವತಿ, ದಾವಣಗೆರೆ, ಶಿವಮೊಗ್ಗ, ಬೆಂಗಳೂರು ಹೀಗೆ ವಿವಿಧ ಸ್ಥಳಗಳಲ್ಲಿ ಇವರು ಬೆಳೆಸಿ ಪ್ರೋತ್ಸಾಹಿಸಿದ ಕಲಾವಿದರು ಅನೇಕಾನೇಕ.

ಐತಿಹಾಸಿಕ ನಾಟಕಗಳ ಬಗ್ಗೆ ವಿಶೇಷ ಒಲವುಳ್ಳ ಶೇಷಾದ್ರಿಯವರು ತ.ರಾ.ಸು ಅವರ 'ದುರ್ಗದ ದುರಂತ' ವನ್ನು ರಂಗಕ್ಕೆ ರೂಪಾಂತರಿಸಿದ್ದಾರೆ. ಈ ನಾಟಕ ಹಲವು ಪ್ರಯೋಗಗಳನ್ನು ಕಂಡಿವೆ. ಅಖಿಲ ಭಾರತ ಸಿವಿಲ್ ಸರ್ವೀಸಸ್ ನಾಟಕ ಸ್ಪರ್ಧೆಯಲ್ಲಿ (1984ರಲ್ಲಿ ಜಯಪುರ) ಇವರ 'ರಂಗೀದೊಡ್ಡಿ ರಾಮಾಣ್ಣ' ಹಾಗೂ ನಾಗಪುರದಲ್ಲಿ ೧೯೮೯ರಲ್ಲಿ ನಡೆದ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ ಪಾಲ್ಗೊಂಡ 'ಉದ್ಭವ' ನಾಟಕಗಳ ಪಾತ್ರಗಳು ಇವರಿಗೆ ಜನಮನ್ನಣೆಯನ್ನು ನೀಡಿವೆ. ಉತ್ತಮ ಪೋಷಕ ನಟ ಪ್ರಶಸ್ತಿಗೂ ಪಾತ್ರರಾಗಿದ್ದಾರೆ.

'ಸಂಕ್ರಾಂತಿ' ನಾಟಕದ ಉಜ್ಜ, 'ಬಸವೇಶ್ವರ' ನಾಟಕದಲ್ಲಿ ಮಂಚಣ್ಣ, 'ಟಿಪ್ಪು ಸುಲ್ತಾನ್', ಎಚ್ಚಮ ನಾಯಕ, ನಾಗರಿಕ, ಎಲ್ಲಾರು ಮಾಡುವುದು ಹೀಗೆ ವೈವಿಧ್ಯಮಯ ನಾಟಕಗಳಲ್ಲಿ ಗಮನಾರ್ಹ ಪಾತ್ರಗಳನ್ನು ನಿರ್ವಹಿಸಿ ಜನಮನ ಗೆದ್ದಿದ್ದಾರೆ. ರಂಗಪ್ರಿಯರಿಂದ 'ಕಲಾ ಭೂಷಣ' ಬಿರುದಿಗೂ ಪಾತ್ರರಾಗಿದ್ದಾರೆ.



## ಎನ್. ಸದಾನಂದ

ಜನನ : 1932

ವಿಳಾಸ :
ನಂ. 70, ಶ್ರೀ ಶಾರದಾ
ಎಂ.ಇ.ಐ. ಕಾಲೋನಿ, ಪೀಣ್ಯ 3ನೇ ಹಂತ
ಲಗ್ಗೆರೆ, ಬೆಂಗಳೂರು - 58

69ರ ಪ್ರಾಯದ ಎನ್. ಸದಾನಂದ ತಮ್ಮ 9ನೇ ವಯಸ್ಸಿನಲ್ಲೇ ನಾಟಕ ಶಿರೋಮಣಿ ವರದಾಚಾರ್ಯರ ಕಲಾ ಸಂಘದ 'ಪ್ರಹ್ಲಾದ ಚರಿತ್ರೆ' ನಾಟಕದಲ್ಲಿ ಪ್ರಹ್ಲಾದನ ಪಾತ್ರವಹಿಸಿ ನಾಟಕ ರಂಗಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ನಚಿಕೇತ, ಭಕ್ತ ಮಾರ್ಕಂಡೇಯ, ಶಾಕುಂತಲ ನಿರುಪಮ, ವಿರಾಟಪರ್ವ, ಗಿರಿಜಾ ಕಲ್ಯಾಣ, ಪ್ರೇಮ ಲೀಲಾ ನಾಟಕಗಳಲ್ಲಿ ಪಾತ್ರವಹಿಸಿದರು.

1963 ರಲ್ಲಿ ಎಂ.ಇ.ಪಿ. ಕಾರ್ಖಾನೆಯಲ್ಲಿ ಉದ್ಯೋಗಿಯಾದ ಮೇಲೆ ಕಾರ್ಮಿಕ ನಾಟಕ ರಂಗದಲ್ಲಿ ಪ್ರಮುಖ ಪಾತ್ರ ವಹಿಸಿದರು. 'ಕದಡಿದ ನೀರು' ನಾಟಕದಲ್ಲಿ ಗಂಭೀರ ಪಾತ್ರವಾದ ಶಿವಪ್ಪನ ಪಾತ್ರವಹಿಸಿದ ಸದಾನಂದ ಅದೇ ನಾಟಕದ ಬಂಗಾರ ಶೆಟ್ಟಿ ಹಾಸ್ಯ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ ಪ್ರತಿಭಾನ್ವಿತರು. ಇದುವರೆಗೂ ಸಮಾರು 250ಕ್ಕೂ ಹೆಚ್ಚು ವೃತ್ತಿಪರ ನಾಟಕಗಳಲ್ಲಿಯೂ, 400ಕ್ಕೂ ಹೆಚ್ಚು ಹವ್ಯಾಸಿ ನಾಟಕಗಳಲ್ಲಿಯೂ ಪಾತ್ರವಹಿಸಿದ್ದಾರೆ.

'ಪ್ರಸಾಧನ' ಕಲೆಯಲ್ಲೂ ಪರಿಣತಿ ಹೊಂದಿರುವ ಸದಾನಂದ ಆಕಾಶವಾಣಿಯಲ್ಲಿ 'ಬಿ' ದರ್ಜೆ ಕಲಾವಿದರೂ ಆಗಿದ್ದಾರೆ. ಅಲ್ಲದೆ ಉತ್ತಮ ಅಭಿರುಚಿಯುಳ್ಳ ಹಾಸ್ಯ ಕಾರ್ಯಕ್ರಮಗಳನ್ನು ಪ್ರಯೋಗಿಸುವ ಕರ್ನಾಟಕದ ಹೆಸರಾಂತ 'ಗಾನ ವಿನೋದಿನಿ' ತಂಡದಲ್ಲಿ ಹಿರಿಯ ಕಲಾವಿದರಾಗಿ ಕರ್ನಾಟಕದಾದ್ಯಂತವಲ್ಲದೆ, ಕೇರಳ, ತಮಿಳುನಾಡಿನಲ್ಲೂ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.



**ಸತ್ಯನಾರಾಯಣ ಎಂ. ಕೆ.**

ಜನನ : 19-3-1937

ವಿಳಾಸ :
C/o. ಮಂಜುನಾಥ
ಝಟ್‌ಪಟ್‌ನಗರ, ಸೂಳೆಬೈಲ್
ಶಿವಮೊಗ್ಗ

ಸುಮಾರು ನಾಲ್ಕು ದಶಕಗಳಿಗೂ ಮೀರಿ ವೃತ್ತಿ ರಂಗಭೂಮಿಯಲ್ಲಿ ದುಡಿಯುತ್ತಾ ಕಲಾ ಸೇವೆಗಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದಾರೆ ಸತ್ಯನಾರಾಯಣ.

ವಿದ್ಯಾರ್ಥಿ ಜೀವನದಲ್ಲಿಯೇ ಕಲೆಯ ಬಗ್ಗೆ ಅಪಾರ ಆಸಕ್ತಿ ಇದ್ದು, ಹಲವು ಏಕಾಂಕ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ ಕಾರಣ, ಕಲೆಯಲ್ಲಿಯೇ ಮುಂದುವರೆಯಬೇಕೆಂಬ ಅಭಿಲಾಷೆಯಿಂದ 1957ರಲ್ಲಿ ಬಳ್ಳಾರಿಯ ಶ್ರೀ ಲಲಿತ ಕಲಾ ಮಿತ್ರ ಮಂಡಳಿಯಲ್ಲಿ ಗ್ರೀನ್ ರೂಂ ಕೆಲಸಗಾರನಾಗಿ ಸೇರ್ಪಡೆ ಹೊಂದಿದರು. ಕಂಪನಿಯಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಾ ನಡು ನಡುವೆ ಪಾತ್ರವನ್ನೂ ಗಿಟ್ಟಿಸುತ್ತಾ, ಪೋಷಕ ಪಾತ್ರವಾಗಲಿ, ಖಳನಾಯಕನ ಪಾತ್ರವಾಗಲಿ, ಹಾಸ್ಯಪಾತ್ರವಾಗಲಿ ಲೀಲಾಜಾಲವಾಗಿ ಪಾತ್ರ ನಿರ್ವಹಿಸುವುದನ್ನು ಕಲಿತುಕೊಂಡರು.

ಶ್ರೀ ಶಾಂತಕುಮಾರ್‌ರಾಯರು, ಶ್ರೀ ಅಪ್ಪೂರಾಜ್, ಶ್ರೀ ಬಿ. ಓಬಳೇಶ್ವರ ಇವರುಗಳಿಂದ ಅಭಿನಯ ಪಾಠವನ್ನು ಕಲಿತು ಮುದೆ ರಾಜ್ಯದಾದ್ಯಂತ ಹಲವಾರು ವೃತ್ತಿ ಕಂಪೆನಿಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಲಲಿತ ಕಲಾ ಮಿತ್ರ ಮಂಡಳಿ, ವಿಜಯ ಕಲಾ ನಾಟ್ಯ ಸಂಘ, ಶಕ್ತಿ ನಾಟ್ಯ ಸಂಘ, ವಿಜಯಕುಮಾರ ನಾಟ್ಯ ಸಂಘ, ವೀರೇಶ್ವರ ನಾಟ್ಯ ಸಂಘ, ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಸಂಗಮೇಶ್ವರ ನಾಟ್ಯ ಸಂಘ ಸತ್ಯನಾರಾಯಣರವರು ಸೇವೆ ಸಲ್ಲಿಸಿರುವ ಕೆಲವು ನಾಟಕ ಕಂಪೆನಿಗಳು. ಈ ನಡುವೆ 1968 ರಲ್ಲಿ ಸೊಂಡೇಕೆರೆ ಮಂಜುನಾಥ್ ಅವರ ಸಹಯೋಗದಲ್ಲಿ 'ಶ್ರೀ ಮಂಜುನಾಥ ನಾಟ್ಯ ಕಲಾ ಸಂಘ' (ವಿಶಾಲ ಮೈಸೂರು) ಎಂಬ ಹೆಸರಿನೊಡನೆ ಸ್ವಂತ ಕಂಪೆನಿಯನ್ನು ಪ್ರಾರಂಭಿಸಿ 1972 ರವರೆಗೆ ನಡೆಸಿದರು.

ಪುತ್ಥಳಿ, ತಾಯಿ ಕರುಳು, ಗಂಡನ ಮನೆ, ಮಲಮಗಳು, ಕಿತ್ತೂರು ಚೆನ್ನಮ್ಮ, ಮದುವೆಯಾಗದ ವಿಧವೆ, ಹಣ ಬೇಕು ಹಣ ಇವು ಸತ್ಯನಾರಾಯಣರಿಗೆ ಖ್ಯಾತಿ ತಂದಿತ್ತ ಕೆಲವು ನಾಟಕಗಳು.

ತಮ್ಮ ಜೀವನದ ಮುಸ್ಸಂಜೆಯಲ್ಲೂ ಕಲಾಸೇವೆ ಮಾಡಬೇಕೆಂಬ ತುಡಿತದಿಂದ ಕೆ.ಬಿ.ಆರ್. ಡ್ರಾಮಾ ಕಂಪೆನಿಯಲ್ಲಿ ದುಡಿಯುತ್ತಿದ್ದಾರೆ ಅಪರೂಪದ ಕಲಾವಿದ ಸತ್ಯನಾರಾಯಣ.



## ಸಾರಂಗಯ್ಯ ಸಂಗಯ್ಯ ಸಾರಂಗಮಠ

ಜನನ : 9-11-1936

ವಿಳಾಸ :
ಐಹೊಳ್ಳಿ,
ಗಂಗಾಪುರ ಪೇಟೆ
ಗದಗ

ಗದಗ ನಿವಾಸಿ ಸಂಗಯ್ಯ ಸಾರಂಗಮಠರ ಮಗ ಸಾರಂಗಯ್ಯ ಸಂಗಯ್ಯ ಸಾರಂಗಮಠ ರಂಗಭೂಮಿ ನಟ, ನಾಟಕಕಾರ, ಸಾಹಿತಿಯೂ ಆಗಿದ್ದಾರೆ. ತಮ್ಮ 18ನೆಯ ವಯಸ್ಸಿಗೆ ಸಾಹಿತ್ಯ ಸೇವೆಯೊಂದಿಗೆ, ರಂಗಸೇವೆಯನ್ನೂ ಆರಂಭಿಸಿದರು. ಇದುವರೆಗೂ ಕರ್ನಾಟಕದ ಹೆಸರಾಂತ ನಾಟಕ ಕಂಪನಿಗಳಲ್ಲಿ ನಟನಾಗಿ, ನಾಟಕಕಾರರಾಗಿ ದುಡಿಯುತ್ತಾ 65 ವಸಂತಗಳನ್ನು ಕಂಡಿದ್ದಾರೆ.

ಕಮತಗಿಯ ಹುಚ್ಚೇಶ್ವರ ನಾಟ್ಯ ಸಂಘ, ಗೋಕಾಕದ ಶಾರದಾ ಸಂಗೀತ ಮಂಡಳಿ, ಗುಡಗೇರಿಯ ಸಂಗಮೇಶ್ವರ ನಾಟ್ಯ ಸಂಘ, ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪನಿ, ಗುಬ್ಬಿಯ ಚೆನ್ನಬಸವೇಶ್ವರ ನಾಟ್ಯ ಸಂಘ, ಸೂಡಿಯ ಭಾರತಿ ನಾಟ್ಯ ಸಂಘ ಸೇರಿದಂತೆ ಹಲವಾರು ಕಂಪನಿಗಳಲ್ಲಿ ಇವರು ಸೇವೆ ಸಲ್ಲಿಸಿದ್ದಾರೆ. ಕೆ.ಬಿ.ಆರ್. ಡ್ರಾಮಾ ಕಂಪನಿಯ ವತಿಯಿಂದ ರಾಷ್ಟ್ರಮಟ್ಟದ ನಾಟಕೋತ್ಸವಗಳಲ್ಲಿ ನಟನಾಗಿ ಪಾಲ್ಗೊಂಡಿದ್ದಾರೆ.

ನಟಭಯಂಕರ, ನಟಶ್ರೇಷ್ಠ, ಅಭಿನಯ ಚತುರ, ನಟರತ್ನ ಎಂಬೆಲ್ಲಾ ಬಿರುದುಗಳಿಗೆ ಪಾತ್ರರಾಗಿರುವ ಸಾರಂಗಯ್ಯ, ಹಲವಾರು ಸಂಘ, ಸಂಸ್ಥೆಗಳ ಸನ್ಮಾನಕ್ಕೂ ಪಾತ್ರರಾಗಿದ್ದಾರೆ. ಅಲ್ಲದೆ 1993ರ ಸಾಲಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಗೂ ಪಾತ್ರರಾಗಿದ್ದಾರೆ.



## ಎಲ್. ಸಿದ್ಧರಾಮು

ಜನನ : 1950

*ವಿಳಾಸ :*
ನಂ. 60, ಗುಡ್ಡದಹಳ್ಳಿ, ಮುಖ್ಯರಸ್ತೆ
ಆರ್.ಟಿ. ನಗರ ಅಂಚೆ, ಹೆಬ್ಬಾಳ
ಬೆಂಗಳೂರು - 32

ಲಿಂಗರಸಪ್ಪ, ಚಿಕ್ಕಮ್ಮನವರ ಮಗನಾದ ಎಲ್. ಸಿದ್ಧರಾಮು ಬಾಲ್ಯದಿಂದಲೇ ಹಾಡು, ನಾಟಕಗಳತ್ತ ಆಸಕ್ತಿ ಹೊಂದಿ ನಾಟಕ ಕ್ಷೇತ್ರಕ್ಕೆ ನಟರಾಗಿ ಪರಿಚಿತವಾದವರು. ಇವರ ಮೊದಲ ನಾಟಕ 'ದಾನಶೂರ ಕರ್ಣ' ನಾಟಕದಲ್ಲಿ ಹೃಷಿಕೇತು ಪಾತ್ರದಲ್ಲಿ ಅಭಿನಯಿಸಿದರು.

1970ರಲ್ಲಿ ಮಿತ್ರರೊಡಗೂಡಿ 'ಭಾನು ಕಲಾವಿದರು' ನಾಟಕ ಸಂಸ್ಥೆಯನ್ನು ಆರಂಭಿಸಿ ತ್ಯಾಗಿ, ಕಂಬನಿ, ಕೊಲೆಗಾರ, ದೇವದಾಸಿ ಮುಂತಾದ ನಾಟಕಗಳನ್ನು ನಿರ್ದೇಶಿಸಿ, ನಟನೆಯನ್ನೂ ಮಾಡಿದರು. ನಾಟಕದ ಹುಚ್ಚು ಹೆಚ್ಚಾಗಿ ಮನೆ ಬಿಟ್ಟು ಎಚ್.ಕೆ. ಯೋಗಾನರಸಿಂಹರ 'ಸರ್ವೋದಯ' ನಾಟಕ ಮಂಡಳಿಯಲ್ಲಿ ನಟನಾಗಿ ಜೀವನ ಆರಂಭಿಸಿದರು. ನಂತರ ಶ್ರೀ ಓಬಳೇಶ್ವರ ಕಂಪನಿ,ಶ್ರೀ ಮುನಿರಂಗಪ್ಪನವರ ಕಂಪನಿ, ಶ್ರೀ ಶಿವಕುಮಾರ ನಾಟ್ಯ ಸಂಘ, ನಾಗಪ್ಪನವರ ಕಂಪೆನಿ ಹಾಗೂ ವೆಂಕಟಪ್ಪನವರ ಕಂಪನಿಗಳಲ್ಲಿ ನಟನಾಗಿ ಸೇವೆ ಸಲ್ಲಿಸಿದರು.

1983ರಲ್ಲಿ ಭಾನು ಕಲಾವಿದರು ಸಂಸ್ಥೆಗೆ ರಂಗಸೌರಭ ಎಂದು ಮರುನಾಮಕರಣ ಮಾಡಿ ಅಂದಿನಿಂದ ಇಂದಿನವರೆಗೂ ನಾಟಕಗಳನ್ನು ಪ್ರದರ್ಶಿಸುತ್ತಾ ಜನಮನ್ನಣೆ ಪಡೆದಿದ್ದಾರೆ.

ದೇವದಾಸಿ, ರತ್ನಮಾಂಗಲ್ಯ, ಮಾಪುರ ತಾಯಿ ಮಕ್ಕಳು, ತಾಯಿಕರುಳು, ಗೌಡ್ರ ಗದ್ಲ, ಸದಾರಮೆ, ಕೊರವಂಜಿ, ಖಾದಿಸೀರೆ, ಹಸಿರು ಬಳೆ, ಸುಖ ನಿವಾಸ, ಗಂಡನ ಮನೆ, ಮಾನವತಿ, ಮಕ್ಮಲ್ ಟೋಪಿ ಮುಂತಾದ ನಾಟಕಗಳಲ್ಲಿ ನಟನಾಗಿ, ಕೊಲೆಗಾರ, ಗಂಡನ ಮನೆ, ಗಂಡುಗಲಿ ಕುಮಾರ ರಾಮ, ರಾಧೇಯ, ಜೋಗುತಿ, ಸ್ನೇಹಬಂಧನ, ಹೊಸ ಬಾಳಿಗೆ ನೀ ಜೊತೆಯಾದೆ, ಆಷಾಢದಲ್ಲಿ ಅಳಿಯ ಇತ್ಯಾದಿ ನಾಟಕಗಳ ನಿರ್ದೇಶಕನಾಗಿ ಯಶಸ್ವಿ ರಂಗಕರ್ಮಿ ಎನಿಸಿಕೊಂಡಿದ್ದಾರೆ. ಕಿರುತೆರೆ, ಬೆಳ್ಳಿತೆರೆಯಲ್ಲೂ ನಿರ್ದೇಶಕರಾಗಿ, ಸಹ ನಿರ್ದೇಶಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಾಟಕಕಾರರೂ ಆಗಿರುವ ಸಿದ್ಧರಾಮು ಸ್ವಂತ ಕೃತಿಗಳಾದ ಕೊಲೆಗಾರ, ಗತಿ ರಕ್ತ ಸಂಬಂಧ, ಬೆಂದೊಡಲ ದನಿ, ಚದುರಂಗದಾಟ ನಾಟಕಗಳನ್ನು ರಂಗಕ್ಕೆ ಅಳವಡಿಸಿದ್ದಾರೆ.

ಬಹುಮುಖ ಪ್ರತಿಭೆಯ ಸಿದ್ಧರಾಮು ರಂಗಸೌರಭ ತಂಡವನ್ನು ಮುನ್ನಡಿಸಿಕೊಂಡು, ಕರ್ನಾಟಕದಾದ್ಯಂತ ನಾಟಕ ಪ್ರದರ್ಶನ ನೀಡುತ್ತಾ ಕಲಾಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.



## ಆರ್. ಸುದರ್ಶನ್

ಜನನ : 10-8-1958

*ವಿಳಾಸ :*
ರೈಲ್ವೆ ಗೊಲ್ಲಹಳ್ಳಿ ಪೋಸ್ಟ್
ನೆಲಮಂಗಲ ತಾಲ್ಲೂಕು
ಬೆಂಗಳೂರು ಗ್ರಾಮಾಂತರ

ಆರ್. ಸುದರ್ಶನ್ ಪೊಲೀಸ್ ಇಲಾಖೆಯ ನೌಕರರು. ನಾಟಕಗಳಲ್ಲಿ ಅಭಿನಯಿಸುವುದು ಇವರ ಪ್ರವೃತ್ತಿ. ನೆಲಮಂಗಲ ತಾಲ್ಲೂಕಿನ ಗೊಲ್ಲಹಳ್ಳಿಯ ರಾಮಣ್ಣ ಹಾಗೂ ಲಕ್ಷ್ಮಮ್ಮ ಇವರ ತಂದೆ ತಾಯಿಗಳು.

ಶಾಲಾ ಕಾಲೇಜು ದಿನಗಳಲ್ಲಿ ಅಭಿನಯದ ಅಭಿರುಚಿಯನ್ನು ಹೊಂದಿ ಕುರುಕ್ಷೇತ್ರದ ಭೀಮನ ಪಾತ್ರದಲ್ಲಿ 1978ರಲ್ಲಿ ಮೊದಲ ಬಾರಿಗೆ ನಟನಾಗಿ ಕಾಣಿಸಿಕೊಂಡರು. ಈ ಪಾತ್ರದಿಂದ ಸಿಕ್ಕ ಜನಮನ್ನಣೆ, ಪ್ರೋತ್ಸಾಹ ರಂಗಭೂಮಿಯಲ್ಲಿ ನಟನಾಗಿ ಮುಂದುವರೆಯಲು ಕಾರಣವಾಯಿತು.

ಆನಂತರದ ದಿನಗಳಲ್ಲಿ ಹಲವಾರು ಪೌರಾಣಿಕ ಐತಿಹಾಸಿಕ, ಸಾಮಾಜಿಕ ನಾಟಗಳಲ್ಲಿ ವಿಭಿನ್ನ ಪಾತ್ರಗಳನ್ನು ಅಭಿನಯಿಸಿ ರಂಗಕ್ಕೆ ಹತ್ತಿರವಾದರು. ಗಂಡುಗಲಿ ಕುಮಾರರಾಮ, ಟಿಪ್ಪುಸುಲ್ತಾನ್, ಎಚ್ಚಮ ನಾಯಕ, ದಳವಾಯಿ ಮುದ್ದಣ್ಣ, ರತ್ನಮಾಂಗಲ್ಯ, ತ್ಯಾಗಿ, ಕಂಬನಿ, ಮಂಗಳ ನನ್ನ ಅತ್ತಿಗೆ ಇವು ಸುದರ್ಶನ್‌ರಿಗೆ ಜನಪ್ರಿಯತೆ ನೀಡಿದ ನಾಟಕಗಳು.

ರಂಗಭೂಮಿಯಲ್ಲಿ ನಿರಂತರವಾಗಿ ತೊಡಗಿಕೊಳ್ಳಲು 'ವಿನಾಯಕ ಕಲಾ ಸಂಘ' ವನ್ನು ಸ್ಥಾಪಿಸಿ, ಉತ್ತಮ ನಾಟಕಗಳನ್ನು ಪ್ರಯೋಗಿಸುತ್ತಿದ್ದಾರೆ.



## ಸೋಮಶೇಖರ ಗೌಡ


ಜನನ : 16-08-1940

ವಿಳಾಸ :
ಕುನ್ನಟಗಿ ಗ್ರಾಮ
ಸಿಂಧನೂರ್ ತಾಲ್ಲೂಕ್
ರಾಯಚೂರು ಜಿಲ್ಲೆ

ಸೋಮಶೇಖರ್ ಗೌಡ ಅವರದು ರಂಗಭೂಮಿಗೆ ಸಂಬಂಧಿಸಿದಂತೆ ನಾಟಕಗಳಿಗೆ ಜೀವ ತುಂಬುವ ಸಂಗೀತಗಾರನ ವೃತ್ತಿ. ಸಂಗೀತ ಇವರಿಗೆ ವಂಶವಾಹಿನಿಯಾಗಿ ಬಂದದ್ದು. ಇವರ ತಂದೆ, ತಾತಾ ಎಲ್ಲರೂ ಸಂಗೀತಗಾರರೇ. ಬಡತನ ಬೇಗೆ ಸೋಮಶೇಖರ್ ಅವರಿಗೆ ಶಾಲೆಯನ್ನು ಬಿಟ್ಟು ಹೊಟ್ಟೆಪಾಡಿಗಾಗಿ ಸಂಗೀತ ಕಲಿಯುವುದು ಅನಿವಾರ್ಯವಾಗಿಸಿತು.

ತಂದೆಯವರ ಪ್ರೇರಣೆಯಿಂದಾಗಿ 1960 ರಲ್ಲಿ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಗಾನಯೋಗಿ ಪಂಚಾಕ್ಷರ ಗವಾಯಿಗಳ ಸಾರಥ್ಯದಲ್ಲಿ ನಡೆಯುತ್ತಿದ್ದ ಸಂಗೀತ ಶಾಲೆಗೆ ಸೇರ್ಪಡೆಯಾಗಿ, ಪುಟ್ಟರಾಜ ಗವಾಯಿಗಳ ಶಿಷ್ಯತ್ವ ವಹಿಸಿ ಸತತ 5 ವರ್ಷಗಳ ಕಾಲ ಸಂಗೀತಾಭ್ಯಾಸ ಮಾಡಿದರು. ತಬಲಾ, ಹಾರ್ಮೋನಿಯಂ ನುಡಿಸುವುದನ್ನು ಕಲಿತು 1966 ರಲ್ಲಿ ಗಾನಯೋಗಿ ಪಂಚಾಕ್ಷರ ನಾಟ್ಯ ಸಂಘದಿಂದ ಸಂಗೀತಗಾರನ ವೃತ್ತಿ ಜೀವನಕ್ಕೆ ಕಾಲಿಟ್ಟರು.

ಮುಂದೆ ರಾಜ್ಯದ ಹೆಸರಾಂತ ವೃತ್ತಿ ಕಂಪೆನಿಗಳಾದ ಗೋಕಾಕದ ಸಂಗೀತ ಶಾರದಾ ನಾಟಕ ಮಂಡಳಿ, ಪಟ್ಟದ ಕಲ್‌ನ ಬಸವೇಶ್ವರ ನಾಟ್ಯ ಸಂಘ, ಕಡಪಟ್ಟಿಯ ಗುರುಪ್ರಸಾದ ನಾಟ್ಯ ಸಂಘ, ಗದಗಿನ ವೀರೇಶ್ವರ ನಾಟ್ಯ ಸಂಘ, ಸುಳ್ಯದ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪೆನಿ ಮುಂತಾದ ಕಂಪೆನಿಯ ನಾಟಕಗಳಲ್ಲಿ ಸಂಗೀತಗಾರರಾಗಿ ಸೇವೆ ಸಲ್ಲಿಸಿದ್ದಾರೆ, ಈಗಲೂ ಸಲ್ಲಿಸುತ್ತಿದ್ದಾರೆ.



## ದೊ.ತಿ. ಹನುಮಯ್ಯ

ಜನನ : 5-4-1940

*ವಿಳಾಸ :*
ನಂ.25, 'ಅಂಜನಾದ್ರಿ'
2ನೇ ಅಡ್ಡರಸ್ತೆ, ನ್ಯೂ ಬ್ಯಾಂಕ್ ಕಾಲೋನಿ
ಕೋಣನಕುಂಟೆ, ಬೆಂಗಳೂರು - 62

ಸರಳ ವ್ಯಕ್ತಿತ್ವದ ದೊ.ತಿ. ಹನುಮಯ್ಯ ಪ್ರತಿಭಾವಂತ ಕಲಾವಿದರು. ಹೆಚ್.ಎ.ಎಲ್.ನ ಇಂಜಿನ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ದೊ.ತಿ.ಯವರ ಮೊದಲ ಆಕರ್ಷಣೆ ನಾಟಕ ರಂಗ. ಶಾಲಾ ದಿನಗಳಿಂದಲೂ ನಾಟಕಗಳಲ್ಲಿ ಪಾತ್ರವಹಿಸುವ ಗೀಳು. ತಂದೆ ತಿಮ್ಮೇಗೌಡರು ರಂಗಭೂಮಿ ಕಲಾವಿದರೆ. ಅವರ ಅಭಿನಯದ ಸಂಪೂರ್ಣ ರಾಮಾಯಣ ನಾಟಕದ ಮೂಲಕ ದೊ.ತಿ.ಯವರ ಬಣ್ಣದ ಬದುಕು ಆರಂಭ. ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿಯಲ್ಲಿ ಓದುತ್ತಿದ್ದಾಗ ರಾಜರತ್ನ, ಆರ್. ನಾಗೇಶ್ ಅವರ ಪ್ರಭಾವದಿಂದ ಗಂಡುಗಲಿ, ವೀರಯೋಧ, ರಕ್ತಾಕ್ಷಿ ನಾಟಕಗಳಲ್ಲಿ ಅಭಿನಯಿಸಿದರು.

ವಿಮಾನ ಕಾರ್ಖಾನೆಯ ಉದ್ಯೋಗಿಯಾದ ನಂತರ ಕರ್ನಾಟಕ ಕಲಾ ಸಂಘ, ಲಲಿತ ಕಲಾ ಸಂಘಗಳ ನಾಟಕಗಳಲ್ಲಿ ಅಭಿನಯಿಸಿ ಮನ್ನಣೆಗಳಿಸಿದ್ದಾರೆ. ಕನ್ನಡ ಸಾಹಿತ್ಯ ಕಲಾ ಸಂಘ, ರಂಗಸಂಪದ, ಕಲಾ ಕೇಂದ್ರಗಳ ಮುಖಾಂತರವೂ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಸಂಗ್ಯಾಬಾಳ್ಯ, ಜೋಕುಮಾರಸ್ವಾಮಿ, ತ್ರಿಶಂಕು, ಜೈಸಿದ ನಾಯ್ಕ, ಶ್ರೀ ಕೃಷ್ಣದೇವರಾಯ, ಭಾವಿ ಕಳೆದಿದೆ, ಕುರಿದೊಡ್ಡಿ ಕುರುಕ್ಷೇತ್ರ, ನಾನು-ನೀನೆ, ...ದೋತಿ ಅಭಿನಯದ ಕೆಲವು ನಾಟಕಗಳು. ತಮಗೆ ಅಭಿನಯ ಕಲಿಸಿದ ಆರ್. ನಾಗೇಶ್, ಕಳ್ಳ ರಾಮಚಂದ್ರ, ಬಿ. ಚಂದ್ರಶೇಖರ್, ಪುಷ್ಪರಾಜ್, ಹಂಸಲೇಖ, ರಮೇಶ್‌ಚಂದ್ರರಂಥ ರಂಗ ದಿಗ್ಗಜರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ ದೋತಿ.

ನಟನೆ ಮಾತ್ರವಲ್ಲದೆ ನಾಟಕ ನಿರ್ದೇಶನದ ಹೊಣೆಯನ್ನು ಹೊತ್ತು ಯಶಸ್ವಿಯಾಗಿದ್ದಾರೆ ದೋತಿ. ಕುರಿದೊಡ್ಡಿ ಕುರುಕ್ಷೇತ್ರ, ವಿಷಜ್ವಾಲೆ, ದಾರಿ ಯಾವುದಯ್ಯಾ ಮುಂದೆ, ಕುಂಟಾ ಕುಂಟಾ ಕುರುವತ್ತಿ, ಭಾವಿ ಕಳೆದಿದೆ ಕಲಾಕೇಂದ್ರದ ಮೂಲಕ ನಿರ್ದೇಶಿಸಿದ ನಾಟಕಗಳು. ನಾಟಕಕಾರರೂ ಆಗಿ ಮತ್ತೊಂದು ಹೆಜ್ಜೆ ಮುಂದೆ ಇಟ್ಟಿದ್ದಾರೆ.

ಶ್ರಮದಲ್ಲಿ ನಂಬಿಕೆಯಿರುವ ದೋತಿ ಸಾಹಿತ್ಯ, ಕಲೆ, ಕನ್ನಡ ಚಳವಳಿ ಹೀಗೆ ನಾನಾ ಸಾಂಸ್ಕೃತಿಕ ವಲಯಗಳಲ್ಲಿ ನಿರಂತರವಾಗಿ ದುಡಿಯುತ್ತಿದ್ದಾರೆ.

ರಂಗಭೂಮಿಯಲ್ಲಿ 'ದೋತಿ' ಎಂದು, ಚಿತ್ರರಂಗದಲ್ಲಿ 'ಅನಂತ್‌ಕುಮಾರ್' ಎಂಬ ಹೆಸರುಗಳಿಂದ ಪರಿಚಿತರಾಗಿದ್ದಾರೆ. ಕಿರುತೆರೆಯಲ್ಲೂ ನಟಿಸಿದ ಅನುಭವ ಹೊಂದಿದ್ದಾರೆ.



## ಎನ್. ಎಚ್. ಹುರುಳಿಹಾಳ್

ವಿಳಾಸ :
ಎಮ್.ಎಸ್.ಪಿ.ಎಲ್. ಲಿಮಿಟೆಡ್
ಎಸ್.ಸಿ. ಕಾಲೋನಿ
ಹೊಸಪೇಟೆ - 583203

ಎನ್. ಎಚ್. ಹುರುಳಿಯಾಳ್ ಹವ್ಯಾಸಿ ರಂಗ ಕಲಾವಿದರು. ಹೊಸಪೇಟೆಯ ಬಲ್ಡೋಟ ಕಬ್ಬಿಣ ಅದಿರು ಗಣಿಯಲ್ಲಿ ವೃತ್ತಿ ತರಬೇತಿ ಕೇಂದ್ರದ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಾಲ್ಯದಿಂದಲೂ ರಂಗಭೂಮಿ ಕಡೆಗೆ ಅಪಾರ ಆಸಕ್ತಿ, ಅಭಿಮಾನವಿದ್ದು, ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದರು. ನಟನೆಯ ಜೊತೆಗೆ ನಾಟಕ ರಚನೆ, ನಿರ್ದೇಶನದಲ್ಲೂ ಇವರ ಆಸಕ್ತಿ ಅಡಗಿದೆ.

1978ರಲ್ಲಿ ಹೊಸಪೇಟೆಯಲ್ಲಿ 'ಶ್ರೀ ದೇಶಿ ನಾಟಕ ಕಲಾ ಸಂಘ' ತಮ್ಮದೇ ಮಾಲೀಕತ್ವದಲ್ಲಿ, ಸ್ಥಾಪಿಸಿ ಮೊದಲ ಪ್ರಯತ್ನವಾಗಿ 'ಸ್ತ್ರೀರತ್ನ' ಎಂಬ ನಾಟಕವನ್ನು ಪ್ರಯೋಗಿಸಿದರು. ನಂತರ ಕೊಂಡನಾಯಕನಹಳ್ಳಿಯಲ್ಲಿ 'ಶ್ರೀ ವಿಶ್ವನಾಥ ನಾಟಕ ಕಲಾ ಸಂಘ' ವನ್ನು ಸ್ಥಾಪಿಸಿ, ತಮ್ಮದೇ ರಚನೆಯ 'ಛೇರ್ಮನ್ ಚನ್ನಯ್ಯ' ನಾಟಕ ಪ್ರಯೋಗಿಸಿದರು. ಬಳ್ಳಾರಿ ಜಿಲ್ಲೆಯಾದ್ಯಂತ ಸಾಂಸ್ಕೃತಿಕ ವಾತಾವರಣ ಮೂಡಿಸುವಲ್ಲಿ ಇವರ ಪ್ರಯತ್ನ ಹಿರಿದು.

ಕೊನೆ ಉಸಿರಿರುವವರೆಗೂ ಕಲಾಸೇವೆ ಮಾಡಬೇಕೆಂಬುದು ಇವರ ಅಭಿಲಾಷೆ.

ಪುಟಸೂಚಿ


| | | | |
|---|---|---|---|
| ಅಂಕಯ್ಯ. ಎಚ್.ಎಂ. | 1 | ದೇವೇಂದ್ರರೆಡ್ಡಿ | 32 |
| ಅನಂತರಾಜು ಗೊರೂರು | 2 | ನಂಜುಂಡಸ್ವಾಮಿ .ಡಿ.ಎಲ್ | 33 |
| ಅಮರನಾಥ್ .ಬಿ.ಎನ್ | 3 | ನರಸಿಂಹಮೂರ್ತಿ .ಜೆ | 34 |
| ಅಶ್ವತ್ಥನಾರಾಯಣರಾವ್ .ಕೆ.ಎನ್ | 4 | ನರೇಂದ್ರಬಾಬು .ಆರ್ | 35 |
| ಆನಂದ್ .ಎಂ .ಸಿ | 5 | ನಾಗರಾಜ್ .ಜಿ | 36 |
| ಈಶ್ವರಪ್ಪ .ಆರ್ .ಎನ್ | 6 | ನಾಗರಾಜ್ .ಎಂ | 37 |
| ಉಮಾಪತಿ .ಕೆ .ಎಸ್ .ಎಂ | 7 | ನಾಗೇಶ್ .ವಿ | 38 |
| ಉಮೇಶ್ .ಎಚ್ .ಎಸ್ | 8 | ಪದ್ಮನಾಭಯ್ಯ | 39 |
| ಋತ್ವಿಕ್ ಸಿಂಹ | 9 | ಪದ್ಮರಾಜು | 40 |
| ಕಮಲಶ್ರೀ | 10 | ಡಾ|| ಪರೇಶ್‌ಕುಮಾರ್ | 41 |
| ಕಾಶಿ .ಎಂ | 11 | ಪಾಪಯ್ಯರೆಡ್ಡಿ | 42 |
| ಕುಲಕರ್ಣಿ .ಆರ್ .ಎಸ್ | 12 | ಪಿಂಜಾರ ಅಬ್ದುಲ್ ಸಾಬ್ | 43 |
| ಕೃಷ್ಣಮೂರ್ತಿ .ಹೆಚ್ .ಎಸ್ | 13 | ಪುಟ್ಟಬಸವಯ್ಯ .ಎಂ .ಎಸ್ | 44 |
| ಕೃಷ್ಣಮೂರ್ತಿ .ಟಿ | 14 | ಬದರಿ ನಾರಾಯಣ .ಆರ್ | 45 |
| ಕೃಷ್ಣಮೂರ್ತಿ .ಎನ್ | 15 | ಬಲರಾಮೇಗೌಡ .ಕೆ .ಪಿ | 46 |
| ಕೃಷ್ಣಮೂರ್ತಿ ಬನವಾಸಿ | 16 | ಬಷೀರ್ | 47 |
| ಕೃಷ್ಣಮೂರ್ತಿ .ಎಂ | 17 | ಬಸವರಾಜು .ಎಸ್ | 48 |
| ಕೃಷ್ಣಮೂರ್ತಿ ಸೀತಕಲ್ಲು | 18 | ಭಗವಂತಪ್ಪ ಹೂಗಾರ | 49 |
| ಕೃಷ್ಣಪ್ಪ .ಎಲ್ | 19 | ಭಗವಂತರಾವ್ ಕಾಳಪ್ಪ ವಿಶ್ವಕರ್ಮ | 50 |
| ಕೃಷ್ಣೇಗೌಡ .ಬಿ .ಎಂ | 20 | ಭೈರಪ್ಪ .ಜಿ | 51 |
| ಕೇಶವ (ಕೇಶವುಲು) | 21 | ಮಂಜುನಾಥ್ .ಕೆ .ಎಸ್ | 52 |
| ಕೋಮಲಮ್ಮ | 22 | ಮಂಜುನಾಥ್ ಬಿ. ಟಿ. | 53 |
| ಗಂಗಾಧರ್ ಮೈಷುಗರ್ | 23 | ಮಂಜುನಾಥ್ ಗೌಡ್ರು .ಎನ್ | 54 |
| ಚೇತನ ಪ್ರಸಾದ್ .ಪಿ | 24 | ಮಯ ಬ್ರಹ್ಮಚಾರ್ | 55 |
| ಜಯಣ್ಣ | 25 | ಮಲ್ಲಿಕಾರ್ಜುನ .ಬಿ | 56 |
| ಜೀರ್ರ ಎರ್ರಪ್ಪ | 26 | ಮಹದೇವಪ್ಪ .ಎಂ .ಸಿ | 57 |
| ಜಗದೀಶ್ | 27 | ಮಹಾಲಿಂಗು | 58 |
| ತಿಪ್ಪೇರುದ್ರಪ್ಪ (ಚಿಂತಕಾಯಲ) | 28 | ಮಾಲತಿ ಮೇಲ್ಮನೆ | 59 |
| ತಿಮ್ಮಯ್ಯ .ಜಿ | 29 | ಮಾಲಾರಾಣಿ | 60 |
| ದತ್ತಾತ್ರೇಯ ಅರಳೀಕಟ್ಟೆ | 30 | ಮೀತಾಮಿಶ್ರ | 61 |
| ದಾಸಪ್ಪ | 31 | ಮುನಿರಾಜು | 62 |

ಮುರಳೀಧರ .ಎಂ 63
ಮೇಲಗಿರಿಗೌಡ ನಿಂಗನಗೌಡ ಪಾಟೀಲ 64
ರಂಗಧಾಮಯ್ಯ 65
ರಂಗಯ್ಯ .ಜಿ .ಎಂ 66
ರಮಾನಂದ ಮೈಸೂರು 67
ರಸೂಲ್ .ಹೆಚ್ 68
ರಾಘವೇಂದ್ರ .ಎಂ .ಕೆ 69
ಡಾ|| ರಾಚಣ್ಣ .ಎಂ. ಅರಬಿ 70
ರಾಚಯ್ಯ ಸ್ವಾಮಿ 71
ರಾಜಾರಾಂ .ಆರ್ .ಎಸ್ 72
ರಾಜಶೇಖರ .ಜೆ .ಎಂ 73
ರಾಜಶೇಖರ್ .ಟಿ .ಎಸ್ 74
ರಾಮಕೃಷ್ಣ .ಎ .ಪಿ 75
ರಾಮಕೃಷ್ಣ .ಎ .ಎಸ್ 76
ರಾಮಣ್ಣ 77
ರಾಮಮೂರ್ತಿ .ಟಿ .ಎನ್ 78
ರಾಮರೆಡ್ಡಿ 79
ರಾವ್ ಜಾದವ್ .ಅ .ನ 80
ರೇವಣಾರಾಧ್ಯ .ಜಿ .ವಿ 81
ಲಕ್ಷ್ಮಣ ಸುವರ್ಣ .ಕೆ 82
ಲಕ್ಷ್ಮೀಪತಿ 83
ವಜೀರಾಬಾಯಿ ಸೌದತ್ತಿ 84
ವಜ್ರಪ್ಪ .ಪಿ 85
ವರಲಕ್ಷ್ಮಿ 86
ವಾಸು ಬೇಗೂರು 87
ವಿಜಯಕುಮಾರ್ ಚಿಂದೋಡಿ 88
ವಿಶ್ವನಾಥ .ಕೆ. ಗಂಗೂರ ಆಚಾರ್ 89
ವೀರಯ್ಯ .ಪ್ರ. ಮಠಪತಿ 90
ವೆಂಕಟೇಶಮೂರ್ತಿ .ಬಿ .ಸಿ 91
ವೆಂಕಟೇಶಯ್ಯ 92
ವೇಣುಗೋಪಾಲ್ 93
ವೇಣುಗೋಪಾಲ್ ವೈ. ಎನ್. 94
ಶಂಕರ್ .ಎಸ್. ತುಮ್ಮಣ್ಣ 95
ಶಂಕರಪ್ಪ ಬಸಪ್ಪ ಬ್ಯಾಳಿ 96
ಶಶಿಕುಮಾರ ಪಿಳ್ಳೆ 97
ಶಾಂತಾ 98
ಶಾಂತಕುಮಾರ್ ಎಸ್ಕಾರ್ಟ್ಸ್ 99
ಶಿವಕುಮಾರಾರಾಧ್ಯ .ಸಿ 100
ಶಿವಾನಂದಯ್ಯ 101
ಶ್ರೀನಿವಾಸ್ .ಕಾ .ನಾ 102
ಶ್ರೀನಿವಾಸ್ .ಸಿ .ವಿ 103
ಶ್ರೀಹರಿ .ಕೆ .ಎನ್ 104
ಶೇಖನಗೌಡ 105
ಶೇಷಾದ್ರಿ 106
ಸದಾನಂದ .ಎನ್ 107
ಸತ್ಯನಾರಾಯಣ .ಎಂ .ಕೆ 108
ಸಾರಂಗಯ್ಯ ಸಂಗಯ್ಯ ಸಾರಂಗಮಠ 109
ಸಿದ್ಧರಾಮ .ಎಲ್ 110
ಸುದರ್ಶನ್ .ಆರ್ 111
ಸೋಮಶೇಖರಗೌಡ 112
ಹನುಮಯ್ಯ .ದೊ .ತಿ 113
ಹುರುಳಿಹಾಳ್ .ಎನ್ .ಎಚ್. 114